ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 27 ಶುಕ್ರವಾರ 2026


ಸಂಪುಟ: 46 | ಸಂಚಿಕೆ: 335 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್‌ರಿಗೆ ಪಾಠ್ ಶಾಲಾ–ಜೀವನ್ ಯಾತ್ರಾ ಪುಸ್ತಕದ ಪ್ರತಿ ಪ್ರದಾನ



ಮೈಸೂರಿನ ಎಚ್.ಡಿ.ಕೋಟೆ ರಸ್ತೆಯಲ್ಲಿರುವ ಪೂರ್ಣ ಚೇತನ– 21ನೇ ಶತಮಾನದ ಭಾರತೀಯ ಶಾಲೆಯ ವಿದ್ಯಾರ್ಥಿಗಳು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರನ್ನು ಭೇಟಿ ಮಾಡಿ, ತಾವೇ ಬರೆದು ಪ್ರಕಟಿಸಿರುವ ಪಾಠ್ ಶಾಲಾ–ಜೀವನ್ ಯಾತ್ರಾ ಪುಸ್ತಕದ ಪ್ರತಿಯನ್ನು ಪ್ರದಾನ ಮಾಡಿದರು.

ಮೈಸೂರು, ಮಾ. 26– ಮೈಸೂರಿನ ಎಚ್.ಡಿ.ಕೋಟೆ ರಸ್ತೆಯಲ್ಲಿರುವ ಪೂರ್ಣ ಚೇತನ–21ನೇ ಶತಮಾನದ ಭಾರತೀಯ ಶಾಲೆಯ ವಿದ್ಯಾರ್ಥಿಗಳು ಗುರುವಾರ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರನ್ನು ಭೇಟಿ ಮಾಡಿ, ತಾವೇ ಬರೆದು ಪ್ರಕಟಿಸಿರುವ ಪಾಠ್ ಶಾಲಾ– ಜೀವನ್ ಯಾತ್ರಾ ಪುಸ್ತಕದ ಪ್ರತಿಯನ್ನು ಪ್ರದಾನ ಮಾಡಿದರು.

ಶಾಲೆಯ 5ನೇ ತರಗತಿಯ ವಿದ್ಯಾರ್ಥಿ ತೋಶನ್, 8ನೇ ತರಗತಿ ವಿದ್ಯಾರ್ಥಿ ಮಹೇಶ್, 10ನೇ ತರಗತಿ ವಿದ್ಯಾರ್ಥಿಗಳಾದ ಸುಹಾಸ್ ಹಾಗೂ ಸುದಿತಿ ಸಚಿವ ಧರ್ಮೇಂದ್ರ ಪ್ರಧಾನ್‌ರನ್ನು ಭೇಟಿ ಮಾಡಿ ಪುಸ್ತಕ ಪ್ರದಾನ ಮಾಡಿದರು.

ಶಾಲಾ ಮಕ್ಕಳೇ ಬರೆದಿರುವ 189 ಲೇಖನಗಳ ಗುಚ್ಛವಾದ ಈ ಪುಸ್ತಕವನ್ನು ಖ್ಯಾತ ಸಾಹಿತಿ ದಿವಂಗತ ಎಸ್.ಎಲ್. ಭೈರಪ್ಪ ಬಿಡುಗಡೆ ಮಾಡಿದ್ದರು. ಶಾಲಾ ಮಕ್ಕಳು ತಮ್ಮ ಅನುಭವವನ್ನು ಇಲ್ಲಿ ಅಕ್ಷರ ರೂಪಕ್ಕೆ ಇಳಿಸಿದ್ದಾರೆ. ಈ ಹಿಂದೆ ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಸೇರಿದಂತೆ ಹಲವಾರು ಗಣ್ಯರು ಈ ಪುಸ್ತಕದ ಬಗ್ಗೆ ಮೆಚ್ಚುಗೆಯ ನುಡಿಗಳನ್ನಾಡಿದ್ದರು.

ಈ ಸಂದರ್ಭದಲ್ಲಿ ಮಕ್ಕಳು, ಸಚಿವರಿಗೆ ತಮ್ಮ ಶಾಲೆ, ಶಾಲೆಯಲ್ಲಿ 21ನೇ ಶತಮಾನದ ಭಾರತೀಯ ಕೌಶಲ್ಯ ಕಲಿಕೆ, ತಾವು ಪ್ರಕಟಿಸಿರುವ ಪುಸ್ತಕದ ಬಗ್ಗೆ ಮಾಹಿತಿ ನೀಡಿದರು. ಸಚಿವ ಧರ್ಮೇಂದ್ರ ಪ್ರಧಾನ್ ಅವರು ಇದೇ ವೇಳೆ ಶಾಲೆಯ ಚಟುವಟಿಕೆಗಳು, ರಾಷ್ಟ್ರೀಯ ಶಿಕ್ಷಣ ನೀತಿ 2022ಕ್ಕೆ ಪೂರಕವಾಗಿರುವುದು ಸ್ಫೂರ್ತಿದಾಯಕ ಎಂದು ತಿಳಿಸಿ, ಮಕ್ಕಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಶಾಲೆಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಬಿ.ದರ್ಶನ್ ರಾಜ್ ಉಪಸ್ಥಿತರಿದ್ದರು.

ಮೈಸೂರಿನ ಸುತ್ತೂರು ಮಠಕ್ಕೆ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಭೇಟಿ

ಸುತ್ತೂರು ಶ್ರೀಗಳಿಂದ ಕೇಂದ್ರ ಸಚಿವರಿಗೆ ಹೃದಯಸ್ಪರ್ಶಿ ಸನ್ಮಾನ

ಮೈಸೂರು, ಮಾ.26(ಬಿಎಲ್‌ಯು)– ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಇಂದು ಮೈಸೂರಿನ ಸುತ್ತೂರು ಮಠಕ್ಕೆ ಭೇಟಿ ನೀಡಿ, ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರ ಆಶೀರ್ವಾದ ಪಡೆದರು.

ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ ಸುತ್ತೂರು ಶಾಖಾ ಮಠಕ್ಕೆ ಇಂದು ಬೆಳಿಗ್ಗೆ ಭೇಟಿ ನೀಡಿದ ಧರ್ಮೇಂದ್ರ ಪ್ರಧಾನ್ ಅವರನ್ನು ಸಾಂಪ್ರದಾಯಿಕವಾಗಿ ಸ್ವಾಗತಿಸಲಾಯಿತು.

ತರುವಾಯ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರನ್ನು ಭೇಟಿ ಮಾಡಿದರು. ಈ ವೇಳೆ ಸುತ್ತೂರು ಶ್ರೀಗಳು ಧರ್ಮೇಂದ್ರ ಪ್ರಧಾನ್ ಅವರಿಗೆ ಮೈಸೂರು ಪೇಟ, ರೇಷ್ಮೆ ಹಾರ ಹಾಕಿ ಸನ್ಮಾನಿಸಿದರು. ಜೊತೆಗೆ ನಾಡದೇವತೆ ತಾಯಿ ಚಾಮುಂಡೇಶ್ವರಿ ದೇವಿಯ ಪ್ರತಿಮೆಯನ್ನು ನೆನಪಿನ ಕಾಣಿಕೆಯಾಗಿ ನೀಡಿದರು. ಈ ವೇಳೆ ಜೆಎಸ್‌ಎಸ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಅಂಡ್ ರಿಸರ್ಚ್‌ನ ಪ್ರೊ–ಚಾನ್ಸಲರ್



ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ ಸುತ್ತೂರು ಶಾಖಾ ಮಠಕ್ಕೆ ಗುರುವಾರ ಭೇಟಿ ನೀಡಿದ್ದ ಕೇಂದ್ರ ಉನ್ನತ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರನ್ನು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸನ್ಮಾನಿಸಿದರು. ಈ ಸಂದರ್ಭ ಜೆಎಸ್‌ಎಸ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಅಂಡ್ ರಿಸರ್ಚ್‌ನ ಪ್ರೊ–ಚಾನ್ಸಲರ್ ಡಾ.ಬಿ.ಸುರೇಶ್, ಜೆಎಸ್‌ಎಸ್ ಮಹಾ ವಿದ್ಯಾಪೀಠದ ಕಾರ್ಯ ನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರ ಮಠ್ ಹಾಗೂ ಕರ್ನಾಟಕ ರಾಜ್ಯ ಕಾನೂನು ವಿವಿ ಕುಲಪತಿ ಪ್ರೊ.ಸಿ.ಬಸವರಾಜು ಅವರನ್ನು ಚಿತ್ರದಲ್ಲಿ ಕಾಣಬಹುದು.

ಡಾ.ಬಿ.ಸುರೇಶ್, ಜೆಎಸ್‌ಎಸ್ ವಿದ್ಯಾ ಸಂಸ್ಥೆಯ ಬಗ್ಗೆ ವಿವರಣೆ ನೀಡಿದರು. ಜೆಎಸ್‌ಎಸ್ ಮೆಡಿಕಲ್ ಕಾಲೇಜು, ಫಾರ್ಮಸಿ ಕಾಲೇಜು, ಇಂಜಿನಿಯರಿಂಗ್ ಕಾಲೇಜು, ಉನ್ನತ ಶಿಕ್ಷಣ ಕಾಲೇಜು ಸೇರಿದಂತೆ ಇತರೆ ಶಿಕ್ಷಣ ಸಂಸ್ಥೆಗಳ ಬಗ್ಗೆ ಮಾಹಿತಿ ನೀಡಿದರು. ಮೈಸೂರು, ಬೆಂಗಳೂರು, ತಮಿಳುನಾಡು, ನೋಯ್ಡಾ, ಅಮೆರಿಕ ಸೇರಿದಂತೆ ಇತರೆ ದೇಶಗಳಲ್ಲಿ ಸಂಸ್ಥೆ ಕಾರ್ಯನಿರ್ವಹಿಸುತ್ತಿರುವ ಮಾಹಿತಿ ಜೊತೆಗೆ ಮಠ ಸಲ್ಲಿಸುತ್ತಿರುವ ಸಾಮಾಜಿಕ ಸೇವಾ ಕಾರ್ಯಗಳ ಬಗ್ಗೆಯೂ ವಿವರಿಸಿದರು.

ಜೆಎಸ್‌ಎಸ್ ಮಹಾ ವಿದ್ಯಾಪೀಠದ ಕಾರ್ಯ ನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರ ಮಠ್, ಜೆಎಸ್‌ಎಸ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಅಂಡ್ ರಿಸರ್ಚ್‌ನ ಕುಲಪತಿ ಡಾ.ಹೆಚ್. ಬಸವಣ್ಣಗೌಡಪ್ಪ, ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದ ಕುಲಪತಿ ಡಾ.ಎ.ಎನ್.ಸಂತೋಷ್‌ಕುಮಾರ್, ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಸಿ.ಬಸವರಾಜು ಸೇರಿದಂತೆ ಹಲವರು ಈ ಸಂದರ್ಭದಲ್ಲಿ ಹಾಜರಿದ್ದರು.

ರಾಜ್ಯ ಜೆಡಿಎಸ್ ವಕ್ತಾರರ ನಿಯೋಗಕ್ಕೆ ನವದೆಹಲಿಯಲ್ಲಿ ಸತ್ಕಾರ; ಪಕ್ಷ ಸಂಘಟನೆ ಕುರಿತು ಸುದೀರ್ಘ ಚರ್ಚೆ



ನವದೆಹಲಿಯಲ್ಲಿ ಕೇಂದ್ರ ಸಚಿವ ಹೆಚ್.ಡಿ.ಕುಮಾರ ಸ್ವಾಮಿ ಅವರ ಅಧಿಕೃತ ಕಚೇರಿಯಲ್ಲಿ ರಾಜ್ಯದ ಜೆಡಿಎಸ್ ವಕ್ತಾರರ ನಿಯೋಗ.

ಬೆಂಗಳೂರು, ಮಾ.26–ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಇತ್ತೀಚೆಗೆ ರಾಜ್ಯದ ಜೆಡಿಎಸ್ ವಕ್ತಾರರನ್ನು ನವದೆಹಲಿಗೆ ಆಹ್ವಾನಿಸಿ, ಸತ್ಕರಿಸಿದರು.

ಮೈಸೂರಿನಿಂದ ರಾಜ್ಯ ವಕ್ತಾರ ಎನ್.ಆರ್.ರವಿಚಂದ್ರೇಗೌಡ ಸೇರಿದಂತೆ ರಾಜ್ಯದ ವಿವಿಧೆಡೆಯಿಂದ ತೆರಳಿದ್ದ 28 ಮಂದಿಗೆ ಸಂಸತ್ ಕಲಾಪ ವೀಕ್ಷಣೆ, ರಾಷ್ಟ್ರಪತಿ ಭವನ ಭೇಟಿಗೆ ಅವಕಾಶ ಕಲ್ಪಿಸಿಕೊಟ್ಟಿದ್ದರು. ಇದೇ ವೇಳೆ ತಮ್ಮ ಕಚೇರಿಗೂ ಆಹ್ವಾನಿಸಿ ಉಪಾಹಾರ ವ್ಯವಸ್ಥೆ ಮಾಡಿದ್ದರು. ಇದೇ ವೇಳೆ ಪಕ್ಷದ ವರಿಷ್ಠರಾದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ವಕ್ತಾರರೊಂದಿಗೆ ಜಿಲ್ಲಾವಾರು ಪಕ್ಷದ ಸಂಘಟನೆ ಬಗ್ಗೆ ಚರ್ಚಿಸಿದರು.

ದೆಹಲಿ ಭೇಟಿಯ ಬಗ್ಗೆ ಮಾಹಿತಿ ನೀಡಿದ ಎನ್.ಆರ್.ರವಿಚಂದ್ರೇಗೌಡ, ತಮ್ಮ ಅಧಿಕೃತ ಕಚೇರಿಗೆ ನಮ್ಮೆಲ್ಲರನ್ನೂ ಅತ್ಮೀಯವಾಗಿ ಸ್ವಾಗತಿಸಿ, ಬೆಳಗಿನ ಉಪಹಾರದ ವ್ಯವಸ್ಥೆ ಮಾಡಿ, ಬಳಿಕ ಸಂಸತ್ ಕಲಾಪ ಮತ್ತು ರಾಷ್ಟ್ರಪತಿ ಭವನ ವೀಕ್ಷಿಸಲು ಅವಕಾಶ ಮಾಡಿಕೊಟ್ಟ ಕೇಂದ್ರ ಸಚಿವರಾದ ಹೆಚ್.ಡಿ.ಕುಮಾರಸ್ವಾಮಿ, ತಮ್ಮ ನಿವಾಸದಲ್ಲಿ ಪಕ್ಷ ಸಂಘಟನೆ ಬಗ್ಗೆ ಒಂದು ಗಂಟೆಗೂ ಹೆಚ್ಚು ಕಾಲ ಚರ್ಚಿಸಿದ ಮಾಜಿ ಪ್ರಧಾನಿ ದೇವೇಗೌಡರು, ದೆಹಲಿಯಲ್ಲಿ ನಮ್ಮ ತಂಡದೊಂದಿಗೆ ಅತ್ಮೀಯವಾಗಿ ಕಾಲ ಕಳೆದ ಮಾಜಿ ಸಚಿವ ಸಾ.ರಾ.ಮಹೇಶ್, ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಶಾಸಕ ಜಿ.ಡಿ.ಹರೀಶ್‌ಗೌಡ, ಮಾಜಿ ಶಾಸಕರಾದ ಅಶ್ವಿನ್ ಕುಮಾರ್, ಕೆ.ಮಹದೇವ್, ನಮ್ಮ ತಂಡದ ನೇತೃತ್ವ ವಹಿಸಿದ್ದ ಮಾಜಿ ಎಂಎಲ್‌ಸಿ ಕೆ.ಟಿ.ಶ್ರೀಕಂಠೇಗೌಡ ಹಾಗೂ ಮಾಧ್ಯಮ ಸಂಚಾಲಕ ಗಂಗಾಧರ ಮೂರ್ತಿ ಅವರಿಗೆ ಧನ್ಯವಾದ ತಿಳಿಸಿದ್ದಾರೆ.

ಮೈಸೂರಿನ ಸಿಐಐಎಲ್‌ನಲ್ಲಿ ಸಚಿವ ಧರ್ಮೇಂದ್ರ ಪ್ರಧಾನ್‌ರಿಂದ ಕ್ಲೋಸ್ ಡೋರ್ ಮೀಟಿಂಗ್



ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ, ಸಿಐಐಎಲ್‌ನಲ್ಲಿ ಉನ್ನತ ಅಧಿಕಾರಿಗಳೊಂದಿಗೆ ಕ್ಲೋಸ್ ಡೋರ್ ಮೀಟಿಂಗ್ ನಡೆಸಿದರು.

ಮೈಸೂರು, ಮಾ.26(ಬಿಎಲ್‌ಯು)– ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಇಂದು ಮೈಸೂರಿನ ಹುಣಸೂರು ರಸ್ತೆಯ ಭಾರತೀಯ ಭಾಷಾ ಸಂಸ್ಥಾನ (ಸಿಐಐಎಲ್) ನಲ್ಲಿ ಉನ್ನತ ಅಧಿಕಾರಿಗಳೊಂದಿಗೆ ಕ್ಲೋಸ್ ಡೋರ್ ಮೀಟಿಂಗ್ ನಡೆಸಿದರು.

ಇಂದು ಬೆಳಿಗ್ಗೆ 10.30 ಗಂಟೆಗೆ ಆರಂಭವಾದ ಸಭೆಯು ಮಧ್ಯಾಹ್ನ 12 ಗಂಟೆವರೆಗೆ ನಡೆಯಿತು. ಈ ಸಂದರ್ಭದಲ್ಲಿ ಭಾರತೀಯ ಭಾಷಾ ಸಂಸ್ಥಾನದ ಕಾರ್ಯವಿಧಾನ, ಪ್ರಗತಿ, ಭವಿಷ್ಯದ ಯೋಜನೆ ಸೇರಿದಂತೆ ಇತರೆ ವಿಚಾರಗಳ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದರೆನ್ನಲಾಗಿದೆ.

ಮೈಸೂರಿನಲ್ಲಿ ಸ್ಥಾಪನೆಯಾಗಿರುವ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಸಂಶೋಧನೆ, ಕಾರ್ಯ ವೈಖರಿ ಸೇರಿದಂತೆ ಇತರೆ ವಿಚಾರಗಳ ಬಗ್ಗೆಯೂ ಚರ್ಚೆ ನಡೆಸಿದರೆನ್ನಲಾಗಿದೆ.

ಈ ಸಂದರ್ಭದಲ್ಲಿ ಅಧ್ಯಯನ ಕೇಂದ್ರದ ಭವಿಷ್ಯದ ಯೋಜನೆಗಳು, ಸಮಸ್ಯೆಗಳು ಸೇರಿದಂತೆ ಇತರೆ ವಿಚಾರಗಳ ಬಗ್ಗೆ ಮಾಹಿತಿ ಪಡೆದುಕೊಂಡಿದ್ದಾರೆ.

ಭಾರತೀಯ ಭಾಷಾ ಸಂಸ್ಥಾನದ ನಿರ್ದೇಶಕ ಪ್ರೊ.ಶೈಲೇಂದ್ರ ಮೋಹನ್, ಭಾರತೀಯ ಭಾಷಾ ಸಮಿತಿ ಅಧ್ಯಕ್ಷ ಚಾಮು ಕೃಷ್ಣಶಾಸ್ತ್ರಿ, ಕೇಂದ್ರ ಸರ್ಕಾರದ ಉನ್ನದ ಶಿಕ್ಷಣ ಇಲಾಖೆ ಉಪ ಕಾರ್ಯದರ್ಶಿ ಶ್ರೇಯಸ್ ಮೋಹನ್, ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ನಿರ್ದೇಶಕ ಪ್ರೊ.ಎಂ.ಎನ್.ತಳವಾರ್ ಹಾಗೂ ಇತರೆ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು. ಸಭೆಯ ನಂತರ ಸಚಿವರು ಭಾರತೀಯ ಭಾಷಾ ಸಂಸ್ಥಾನದ ಹಲವು ವಿಭಾಗಗಳಿಗೆ ಭೇಟಿ ನೀಡಿ ಅಲ್ಲಿನ ಕಾರ್ಯ ವೈಖರಿ ಬಗ್ಗೆ ಮಾಹಿತಿ ಪಡೆದರು.

ಶಿರಡಿ ಸಾಯಿ ಶಕ್ತಿ ಸನ್ನಿಧಿಯಲ್ಲಿ ಶ್ರೀರಾಮನವಮಿ



ಮೈಸೂರು, ಮಾ.26– ಶ್ರೀರಾಮನವಮಿ ಪ್ರಯುಕ್ತ ಮೈಸೂರಿನ ರಾಮಕೃಷ್ಣನಗರದಲ್ಲಿರುವ ಶ್ರೀ ಶಿರಡಿ ಸಾಯಿ ಶಕ್ತಿ ಸನ್ನಿಧಿಯಲ್ಲಿ ವಿಶೇಷ ಪೂಜಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ದೇಗುಲದಲ್ಲಿ ಬೆಳಗ್ಗೆ 7 ಗಂಟೆಯಿಂದ ಕಾಕಧಾರತಿ, ಜಲಾಭಿಷೇಕ, ಪುಷ್ಪಾರ್ಚನೆ, ಹಿರಣ್ಯಾಭಿಷೇಕ, ಪ್ರಕಾರೋತ್ಸವ ನೆರವೇರಲಿದೆ. ಬಳಿಕ ಪ್ರಸಾದ ವಿನಿಯೋಗ ನಡೆಯಲಿದೆ ಎಂದು ದೇವಸ್ಥಾನದ ಆಡಳಿತ ಮಂಡಳಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

'ಗಳಿಸಲು ಕೊಡುವುದು' ವಿಷಯದ ಬಗ್ಗೆ ಅರಿವು ಮೂಡಿಸಲು ಮಹಿಳಾ ದಿನಾಚರಣೆ

ಮೈಸೂರು, ಮಾ.26(ಜಿಎ)–ಮೈಸೂರಿನ ಬನ್ನಿಮಂಟಪದಲ್ಲಿರುವ ಮಹಿಳೋದಯ ಮಹಿಳಾ ಒಕ್ಕೂಟದ ವತಿಯಿಂದ ಮಾ.28ರಂದು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಈ ಬಾರಿ 'ಗಳಿಸಲು ಕೊಡುವುದು' ವಿಷಯದ ಬಗ್ಗೆ ಅರಿವು ಮೂಡಿಸುವುದರೊಂದಿಗೆ ಆಚರಿಸಲಾಗುತ್ತದೆ ಎಂದು ಓಡಿಪಿ ನಿರ್ದೇಶಕ ರೆ.ಫಾ.ರ ಟೆನ್ನಿ ಕುರಿಯನ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 8.30ಕ್ಕೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿಯಿಂದ ಮಹಿಳೆಯರು ದ್ವಿಚಕ್ರ ವಾಹನ ಮತ್ತು ಆಟೋ ಚಾಲನೆ ಮಾಡಿಕೊಂಡು ರ್‍ಯಾಲಿಯ ಮೂಲಕ ಬನ್ನಿಮಂಟಪದ ಸಂತ ಫಿಲೋಮಿನಾ ಕಾಲೇಜು ತಲುಪಲಿದೆ. ನಂತರ ಬೆಳಗ್ಗೆ 10.30ಕ್ಕೆ ವೇದಿಕೆ ಕಾರ್ಯಕ್ರಮ ನಡೆಯಲಿದ್ದು, ಮೈಸೂರು ಧರ್ಮಾಧ್ಯಕ್ಷ ಡಾ.ಎಸ್.ಜೆ.ಫ್ರಾನ್ಸಿಸ್ ಸೆರಾವೊ ಅಧ್ಯಕ್ಷತೆ ವಹಿಸುವರು. ರಾಜ್ಯ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ಕಾರ್ಯಕ್ರಮ ಉದ್ಘಾಟಿಸುವರು. ಜಿಪಂ ಉಪ ಕಾರ್ಯದರ್ಶಿಗಳಾದ ಬಿ.ಎಂ.ಸವಿತಾ, ಬಸವರಾಜು, ಉದ್ಯಮಿ ಉಮೇಶ್ ರೇವಂಕರ್ ಆಗಮಿಸಲಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಮೈಸೂರು, ಮಂಡ್ಯ, ಕೊಡಗು ಮತ್ತು ಚಾಮರಾಜನಗರ ಗಳಿಂದ ಸುಮಾರು 2500 ಮಂದಿ ಮಹಿಳೆಯರು ಪಾಲ್ಗೊಳ್ಳಲಿದ್ದಾರೆ. 10 ಮಂದಿ ಸಾಧಕಿಯರಿಗೆ ಪ್ರೇರಣಾ ಪತ್ರ ವಿತರಿಸಲಾಗುವುದು. ಜೊತೆಗೆ ಮಹಿಳೆಯರೆ ತಯಾರಿಸಿದ ವಸ್ತುಗಳ ಮಳಿಗೆಗಳು ಸಹ ಇರಲಿವೆ ಎಂದರು. ಗೋಷ್ಠಿಯಲ್ಲಿ ರೆ.ಫಾ.ಜಾನ್‌ಫರ್ನಾಂಡಿಸ್, ಮೋಳಿ ಫಟಾಡೊ, ಜಾನ್ ರೋಡ್ರಿಗಸ್, ಶಶಿರೇಖಾ ಉಪಸ್ಥಿತರಿದ್ದರು.

ಪ್ಲಾಸ್ಟಿಕ್ ಬಳಕೆ ವಿರುದ್ಧ ಪಾಲಿಕೆ ವಿಶೇಷ ಕಾರ್ಯಾಚರಣೆ

ಒಂದೇ ದಿನ 2 ಲಕ್ಷಕ್ಕೂ ಅಧಿಕ ದಂಡ; ಎಚ್ಚರಿಕೆ


ಮೈಸೂರು, ಮಾ.26– ಮೈಸೂರು ಮಹಾನಗರ ಪಾಲಿಕೆ ಆಯುಕ್ತರ ನಿರ್ದೇಶನದಂತೆ ನಿಷೇಧಿತ ಪ್ಲಾಸ್ಟಿಕ್ ಬಳಕೆ ಹಾಗೂ ತ್ಯಾಜ್ಯ ನಿರ್ವಹಣಾ ನಿಯಮಗಳನ್ನು ಉಲ್ಲಂಘಿಸುವವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುತ್ತಿದ್ದು, ಗುರುವಾರ ನಡೆದ ವಿಶೇಷ ಕಾರ್ಯಾಚರಣೆಯಲ್ಲಿ 2 ಲಕ್ಷಕ್ಕೂ ಹೆಚ್ಚು ದಂಡ ವಿಧಿಸಿ, ಅಪಾರ ಪ್ರಮಾಣದ ಪ್ಲಾಸ್ಟಿಕ್ ವಶಪಡಿಸಿಕೊಳ್ಳಲಾಗಿದೆ.

ವಲಯ ಕಚೇರಿ 1ರ ವ್ಯಾಪ್ತಿಯಲ್ಲಿ 4,000 ರೂ., ವಲಯ 2ರಲ್ಲಿ 45,000, ವಲಯ 3ರಲ್ಲಿ 12,000, ವಲಯ 4ರಲ್ಲಿ 45,000, ವಲಯ 6ರಲ್ಲಿ 60,000, ವಲಯ 7ರಲ್ಲಿ 15,300, ವಲಯ 8ರಲ್ಲಿ 9,800 ಹಾಗೂ ವಲಯ 9ರ ವ್ಯಾಪ್ತಿಯಲ್ಲಿ 14,600 ಸೇರಿ ಇಂದು ಒಟ್ಟು 2,15,200 ರೂ. ದಂಡ ವಿಧಿಸಿ, ಪ್ಲಾಸ್ಟಿಕ್ ಬಳಸದಂತೆ ವ್ಯಾಪಾರಿಗಳಿಗೆ ಎಚ್ಚರಿಕೆ ನೀಡಲಾಗಿದೆ.

ಈ ದಾಳಿಯಲ್ಲಿ ಪಾಲಿಕೆಯ ಆರೋಗ್ಯ ನಿರೀಕ್ಷಕರಾದ ಶಶಿ, ಪ್ರವೀಣ್, ಅಶ್ವತ್, ಶೀಲಾ, ಮಂಜು ಕುಮಾರ್, ಕೃಷ್ಣ, ಅಶೋಕ್, ನಮ್ರತಾ, ಶ್ರೀನಿಧಿ, ರಾಜೇಶ್ವರಿ, ಪ್ರಕಾಶ್, ಹರೀಶ್, ಸೋಮಶೇಖರ್, ಮಂಜುನಾಥ್ ಹಾಗೂ ರವಿಶಂಕರ್, ಪರಿಸರ ಇಂಜಿನಿಯರ್‌ಗಳಾದ ಜ್ಯೋತಿ, ಮಹಾದೇವಿ, ಶ್ರೀದೇವಿ ಹಾಗೂ ಮೈತ್ರಿ ಭಾಗವಹಿಸಿದ್ದರು.

ಇಂದು ಮುಕ್ತ ವಿವಿಯಲ್ಲಿ ಕಿರಣ್ ಕಾಮ್ಟೆ ಅವರಿಂದ ವಿಶೇಷ ಉಪನ್ಯಾಸ

ಮೈಸೂರು,ಮಾ.26(ಪಿಎಂ)– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ



ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಐಎಎಸ್ ಮತ್ತು ಕೆಎಎಸ್ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ನಡೆಯುತ್ತಿರುವ 50 ದಿನಗಳ ತರಬೇತಿ ಶಿಬಿರದ ವಿಶೇಷ ಉಪನ್ಯಾಸ ಕಾರ್ಯಕ್ರಮ ಮಾ.27ರಂದು ನಡೆಯಲಿದ್ದು, ಲೋಕೋಪಯೋಗಿ ಇಲಾಖೆಯ ಸಹಾಯಕ ಇಂಜಿನಿಯರ್ ಕಿರಣ್ ಕಾಮ್ಟೆ ವಿಶೇಷ ಉಪನ್ಯಾಸ ನೀಡಲಿದ್ದಾರೆ.

2025ನೇ ಸಾಲಿನ ಯುಪಿಎಸ್‌ಸಿ ಪರೀಕ್ಷೆಯಲ್ಲಿ 52ನೇ ರ್‍ಯಾಂಕ್ ಪಡೆದ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲೂಕಿನ ಹತ್ತರವಾಡದ ಕಿರಣ್ ಕಾಮ್ಟೆ ಅವರು ಅಂದು ಕರಾಮುವಿ ಕಾವೇರಿ ಸಭಾಂಗಣದಲ್ಲಿ ಬೆಳಗ್ಗೆ 10 ಗಂಟೆಗೆ ವಿಶೇಷ ಉಪನ್ಯಾಸ ನೀಡುವರು. ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಅಧ್ಯಕ್ಷತೆ ವಹಿಸುವರು. ಕುಲಸಚಿವ ಪ್ರೊ.ಎಸ್.ಕೆ.ನವೀನ್‌ಕುಮಾರ್ ಉಪಸ್ಥಿತರಿರುವರು ಎಂದು ಕೇಂದ್ರದ ಸಂಯೋಜನಾಧಿಕಾರಿ ಜೈನಹಳ್ಳಿ ಸತ್ಯನಾರಾಯಣಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉಪಚುನಾವಣೆಗೆ ನಿಯೋಜನೆ




ಮೈಸೂರು, ಮಾ.26– ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಗೆ ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್ ಸಮಿತಿ ವತಿಯಿಂದ ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್.ದೀಪಕ್ ಕುಮಾರ್ ಅವರನ್ನು ಉಪಚುನಾವಣೆಯ ಉಸ್ತುವಾರಿಯಾಗಿ ನೇಮಕ ಮಾಡಲಾಗಿದೆ.

ಮಹಾವೀರ ಜಯಂತಿ; ಮಾ.31ರ ಬದಲು 30ಕ್ಕೆ ರಜೆ

ಬೆಂಗಳೂರು: 2026ನೇ ಸಾಲಿನ ಸಾರ್ವತ್ರಿಕ ರಜಾ ದಿನಗಳ ಪಟ್ಟಿಯಲ್ಲಿ ಅಧಿಸೂಚನೆ 1 ಮತ್ತು 2ರ ಕೋಷ್ಟಕದ ಕ್ರಮ ಸಂಖ್ಯೆ 5ರಲ್ಲಿ ಮಹಾವೀರ ಜಯಂತಿ ಪ್ರಯುಕ್ತ ಘೋಷಿಸಲಾಗಿದ್ದ ಸಾರ್ವತ್ರಿಕ ರಜಾ ದಿನವನ್ನು ಮಾ.31ರ ಬದಲಾಗಿ ಮಾ.30ಕ್ಕೆ ಮಾರ್ಪಡಿಸಿ ಸರ್ಕಾರ ಆದೇಶಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

27.3.2026 ಶುಕ್ರವಾರ, ಮಳೆ ನಕ್ಷತ್ರ: ಉತ್ತರಭಾದ್ರ 18.03.2026 ರಿಂದ 30.03.2026
ಪರಾಭವ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ,
ತಿಥಿ: ನವಮಿ, ನಕ್ಷತ್ರ: ಪುನರ್ವಸು, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಜ್ಞಾನ ಜ್ಯೋತಿ ಜೀವನ ಪಾಠ ಕಲಿಸಿದ ಸಾಧಕಿಯರ ಪರಿಚಯ ಮಾಲಿಕೆ, ಪ್ರಸ್ತುತಿ : ಬಿ.ಕೆ. ಮೀನಾಕ್ಷಿ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ – ಪಿ. ಸುರಭಿ ಮತ್ತು ಎ. ಎಸ್. ನಾಗಲಕ್ಷ್ಮಿ, ವ್ಯಾಖ್ಯಾನ–ಡಾ. ಸಿ. ನಾಗಣ್ಣ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಕನ್ನಡ ಚಿತ್ರಗೀತೆಗಳು, 9.00 ನಮ್ಮ ಆರೋಗ್ಯ, 9.30 ಗಾಂಧೀಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಟಿ. ರುಕ್ಮಿಣಿ – ವೈಯೋಲಿನ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಸಂಗೀತ ಸಂಭ್ರಮ ನಾದಲಯ ಸಂಗಮ, ಪ್ರಸ್ತುತಿ: ಹೆಚ್. ಎಲ್. ಶಿವಶಂಕರಸ್ವಾಮಿ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಕಾದಂಬರಿ ವಿಹಾರ– ಕೃಪಾಕರ ಸೇನಾನಿ ಅವರ ಕೆನ್ನಾಯಿಯ ಜಾಡಿನಲಿ ಕೃತಿಯ ಬಾನುಲಿ ಓದು, ಪ್ರಸ್ತುತಿ: ಜಿ ಶಾಂತ ಕುಮಾರ್, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ : ಜಿ.ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಕೆ.ಎಸ್. ಗೋಪಾಲಕೃಷ್ಣನ್–ಕೊಳಲು ವಾದನ, 4.00 ಮಹಿಳಾರಂಗ– ಸಿರಿದೇವಿ ಭಜನಾ ಮಂಡಳಿಯ ಸದಸ್ಯರಿಂದ ರಾಮನವಮಿ ಹಬ್ಬದ ಕುರಿತು ಕಾರ್ಯಕ್ರಮ ವೈವಿಧ್ಯ, 4.30 ವೃತ್ತಿ ಮಾರ್ಗದರ್ಶನ, 6.50 ಕೃಷಿರಂಗ, ಹವಾಮಾನ ಮಿತ್ರ, ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ, ಬೆಂಗಳೂರು, ಸಂಶೋಧನಾ ಸಾರ– ಕೃಷಿ ಕ್ಷೇತ್ರದ ಹೊಸ ಅವಿಷ್ಕಾರ, ಪ್ರಸ್ತುತಿ–ಆರ್. ಲೋಕೇಶ್ವರಿ, 7.45 ವಿಧಾನಮಂಡಲದಲ್ಲಿ ಇಂದು, 8.00 ಸಂಸತ್ ಸಮೀಕ್ಷಾ, 8.15 ಸಂಧ್ಯಾರಾಗ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ವಿದ್ವಾನ್ ಎನ್. ಆರ್. ಪ್ರಶಾಂತ್ –ಹಾಡುಗಾರಿಕೆ, 10.00 ಸಂಸತ್ತಿನ ಪ್ರಶ್ನೋತ್ತರ ಅವಧಿಯ ಕಲಾಪಗಳ ಧ್ವನಿಮುದ್ರಣದ ಪ್ರಸಾರ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30 ರಿಂದ ದೇಹ– ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9 ರಿಂದ ಪಿಸಿಓಡಿ ತೊಂದರೆ, ಬೊಜ್ಜು ನಿವಾರಣೆ, ಪಾರ್ಕಿನ್‌ಸನ್ಸ್ ಕಾಯಿಲೆ, ವಸಂತ ವಮನ ದೇಹಶುದ್ಧಿ, ಮೈಗ್ರೇನ್, ತಲೆನೋವು, ಕಿಡ್ನಿ ತಪಾಸಣೆ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.

■ **ಸದ್ವಿದ್ಯಾ ಶಿಕ್ಷಣ ಸಂಸ್ಥೆಗಳು :** ರಾಮೋತ್ಸವ ಸಾಂಸ್ಕೃತಿಕ ಕಾರ್ಯಕ್ರಮ, ಬೆಳಗ್ಗೆ 8.30 ರಿಂದ ಗಣಹೋಮ, ಪವಮಾನ ಹೋಮ, ಮಧ್ಯಾಹ್ನ 12ಕ್ಕೆ ಪೂರ್ಣಾಹುತಿ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸುರಭಿ ಗಾನಕಲಾ ಮಂದಿರದ ಕಲಾವಿದರಿಂದ ಗೀತ ರೂಪಕ 'ಶ್ರೀರಾಮ ಪಟ್ಟಾಭಿಷೇಕ' (ಕವಿಗಳು, ಹರಿದಾಸರು, ವಾಗ್ಗೇಯಕಾರರು ಕಂಡಂತೆ), ಪರಿಕಲ್ಪನೆ ಮತ್ತು ನಿರ್ದೇಶನ : ವಿದುಷಿ ಡಾ. ಸುಕನ್ಯಾ ಪ್ರಭಾಕರ್, ಸ್ಥಳ: ಸದ್ವಿದ್ಯಾ ಶಿಕ್ಷಣ ಸಂಸ್ಥೆ ಆವರಣ, ನಾರಾಯಣಶಾಸ್ತ್ರಿ ರಸ್ತೆ.

■ **ಅನ್ನಪೂರ್ಣ ಐ ಹಾಸ್ಪಿಟಲ್:** ಯುಗಾದಿ ಹಾಗೂ ಅಂತರರಾಷ್ಟ್ರೀಯ ಮಹಿಳಾ ದಿನದ ಅಂಗವಾಗಿ ಉಚಿತ ಕಣ್ಣಿನ ತಪಾಸಣೆ ಶಿಬಿರ, ಸ್ಥಳ: ಅನ್ನಪೂರ್ಣ ಕಣ್ಣಿನ ಆಸ್ಪತ್ರೆ, #199 ಸಾಯಿಪಾದಂ, ನ್ಯೂ ಕಾಂತರಾಜ್ ಅರಸ್ ರಸ್ತೆ, ಶಾರದಾದೇವಿ ನಗರ, ಬೆಳಗ್ಗೆ 10 ರಿಂದ.

■ **ಜೆಎಸ್‌ಎಸ್ ಆಸ್ಪತ್ರೆ :** ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ, ಮುಖ್ಯ ಅತಿಥಿಗಳು: ಆಡಳಿತ ತರಬೇತಿ ಸಂಸ್ಥೆ ಜಂಟಿ ನಿರ್ದೇಶಕ (ತರಬೇತಿ) ಶ್ರೀಮತಿ ಸಾಧನಾ ಅಶೋಕ ಪೋಟೆ, ಮೈಸೂರು ಪಾಲಿಕೆ ವಲಯ ಆಯುಕ್ತೆ ಎಂ.ಎಸ್.ಪ್ರತಿಭಾ, ಗೌರವ ಅತಿಥಿಗಳು: ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಕುಲಪತಿ ಡಾ.ಹೆಚ್.ಬಸವನಗೌಡಪ್ಪ, ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯ ಪ್ರಿನ್ಸಿಪಾಲ್ ಡಾ.ಡಿ.ನಾರಾಯಣಪ್ಪ, ಅಧ್ಯಕ್ಷತೆ: ಜೆಎಸ್‌ಎಸ್ ಆಸ್ಪತ್ರೆ ನಿರ್ದೇಶಕ ಡಾ.ಸಿ.ಪಿ. ಮಧು, ಸ್ಥಳ: ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣ, ಜೆಎಸ್‌ಎಸ್ ಆಸ್ಪತ್ರೆ, ಬೆಳಗ್ಗೆ 10ಕ್ಕೆ.

■ **ಶ್ರೀ ರಾಮಮಂದಿರ:** 60ನೇ ವರ್ಷದ ರಾಮೋತ್ಸವ ಕಾರ್ಯಕ್ರಮ, ಬೆಳಗ್ಗೆ 10ರಿಂದ ವಿದುಷಿ ಡಾ. ಮಾಲಿನಿ ಅವರಿಂದ ಹರಿಕಥೆ, ಸಂಜೆ 6 ರಿಂದ ಶ್ರೀ ಸೀತಾರಾಮ ಭಜನಾ ಮಂಡಳಿಯಿಂದ ಭಜನೆ, ರಾತ್ರಿ 8.45ಕ್ಕೆ ಶ್ರೀವಿಷ್ಣು ಸಹಸ್ರನಾಮ ಪಾರಾಯಣ, ಸ್ಥಳ: ಶ್ರೀರಾಮಮಂದಿರ, 16ನೇ ಕ್ರಾಸ್, ಜಯನಗರ.

■ **ಜೆಎಸ್‌ಎಸ್ ಮಹಾವಿದ್ಯಾಪೀಠ :** ಇನ್ನೋವೇಷನ್ ಟು ಟೆಕ್ನಾಲಜಿ ಟ್ರಾನ್ಸ್‌ಫರ್ ಕುರಿತು ಕಾರ್ಯಾಗಾರ, ಸ್ಥಳ: ಶ್ರೀ ರಾಜೇಂದ್ರ ಸಭಾಂಗಣ, ಜೆಎಸ್‌ಎಸ್ ಫಾರ್ಮಸಿ ಕಾಲೇಜು, ಬೆಳಗ್ಗೆ 10 ರಿಂದ.

■ **ಚಿನ್ಮಯ ಮಿಷನ್ :** ಶ್ರೀರಾಮನವಮಿ ಮಹೋತ್ಸವ, ಸ್ವಾಮಿ ಕಾಶಿಕಾನಂದ ಅವರಿಂದ ಸತ್ಸಂಗ, ಭಜನೆ, ಅಷ್ಟೋತ್ತರ ಅರ್ಚನೆ, ಮಹಾಮಂಗಳಾರತಿ, ಸ್ಥಳ: ಚಿನ್ಮಯ ಮಿಷನ್, ಶ್ರೀ ರಾಮ ಕ್ಷೇತ್ರ, ವಿದ್ಯಾರಣ್ಯಪುರಂ, ಬೆಳಗ್ಗೆ 11ಕ್ಕೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಹಿರಿಯ ನಾಗರೀಕರ ಹಗಲು ಯೋಗ ಕ್ಷೇಮ ಕೇಂದ್ರ :** ಚಂದ್ರಶೇಖರ ಪಾಟೀಲ ದತ್ತಿ, ಗುಂಡ್ಲುಪೇಟೆ ಜಿ.ಎನ್.ನಂಜುಂಡಯ್ಯ ದತ್ತಿ ಉಪನ್ಯಾಸ ಕಾರ್ಯಕ್ರಮ, ಉದ್ಘಾಟನೆ: ಹಿರಿಯ ನಾಗರಿಕರ ಹಗಲು ಯೋಗ ಕ್ಷೇಮ ಕೇಂದ್ರ ಅಧ್ಯಕ್ಷ ಮಲೆಯೂರು ಪ್ರಭುಸ್ವಾಮಿ, ಅಧ್ಯಕ್ಷತೆ: ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ಎನ್.ವಿ.ರಮೇಶ್ ಅವರಿಂದ ಪ್ರವಾಸ ಸಾಹಿತ್ಯ ಬದುಕಿಗೆ ಲಾಲಿತ್ಯ ಕುರಿತು ಉಪನ್ಯಾಸ, ಹಿರಿಯ ಲೇಖಕಿ ಉಷಾ ನರಸಿಂಹನ್ ಅವರಿಂದ ಕುವೆಂಪು ರಾಮಾಯಣ ದರ್ಶನದ ಅವಲೋಕನ ಕುರಿತು ಉಪನ್ಯಾಸ, ಉಪಸ್ಥಿತರು : ಕವಯತ್ರಿ ಶ್ರೀಮತಿ ನಾಗಮ್ಮ, ಸ್ಥಳ: ಹಿರಿಯ ನಾಗರೀಕರ ಹಗಲು ಯೋಗಕ್ಷೇಮ ಕೇಂದ್ರ, ಕುವೆಂಪುನಗರ, ಬೆಳಗ್ಗೆ 11.30ಕ್ಕೆ.

■ **ಮೈಸೂರು ಬುಕ್ ಕ್ಲಬ್ಸ್ ಚಾರಿಟಬಲ್ ಟ್ರಸ್ಟ್ :** ಸೋಲ್ ಟು ದಿ ವರ್ಲ್ಡ್ ಕವನ ಸಂಕಲನ ಬಿಡುಗಡೆ ಸಮಾರಂಭ, ಪುಸ್ತಕ ಬಿಡುಗಡೆ : ಎಂ.ಸಿ.ಉತ್ತಪ್ಪ, ಪುಸ್ತಕ ಕುರಿತು : ಪ್ರೊ. ಕೃಷ್ಣ ಮನವಳ್ಳಿ, ಸ್ಥಳ: ದಿ ಗ್ರೀನ್ ಹೋಟೆಲ್, ವಿನೋಬಾ ರಸ್ತೆ, ಬೆಳಗ್ಗೆ 11.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ತತ್ತ್ವಶಾಸ್ತ್ರ ಅಧ್ಯಯನ ವಿಭಾಗ, ಹಿಂದೂ ತತ್ತ್ವಜ್ಞಾನಪೀಠ:** ಜಾಗತಿಕ ಚಿಂತನೆಯಲ್ಲಿ ಹಿಂದೂ ತತ್ತ್ವಜ್ಞಾನದ ಸ್ಥಾನ ಕುರಿತು ವಿಚಾರ ಸಂಕಿರಣದ ಸಮಾರೋಪ ಸಮಾರಂಭ, ಅಧ್ಯಕ್ಷತೆ: ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಶೇಷಗಿರಿರಾವ್, ಸಮಾರೋಪ ಭಾಷಣ: ಪ್ರಾಧ್ಯಾಪಕ ಪ್ರದ್ಯುಮ್ನ ಕುಮಾರ್ ಸೇಠಿ, ಉಪಸ್ಥಿತರು: ಪ್ರಾಧ್ಯಾಪಕರಾದ ಡಾ.ಡಾನಿಯಲ್, ಡಾ.ವೆಂಕಟೇಶ್, ಸ್ಥಳ: ಶೈಕ್ಷಣಿಕ ಬಹು ಮಾಧ್ಯಮ ಸಂಶೋಧನಾ ಕೇಂದ್ರದ ಸಭಾಂಗಣ (ಇಎಂಎಂಆರ್‌ಸಿ), ಮಾನಸಗಂಗೋತ್ರಿ, ಸಂಜೆ 4ಕ್ಕೆ.

■ **ವಿದ್ಯಾವರ್ಧಕ ಕಾನೂನು ಕಾಲೇಜು :** ರಾಜ್ಯ ಮಟ್ಟದ ಮೂಟ್ ಕೋರ್ಟ್ ಸ್ಪರ್ಧೆ, ಉದ್ಘಾಟನೆ : ಪ್ರೊ. ಎಂ.ಕೆ. ರಮೇಶ್, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಗೌರವ ಅತಿಥಿಗಳು : ಕಾರ್ಯದರ್ಶಿ ಪಿ. ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣವರ್, ಕಾಲೇಜು ಅಧ್ಯಕ್ಷ ಎಸ್. ಶಿವಲಿಂಗಯ್ಯ, ಸ್ಥಳ: ಪ್ರೊ. ಪಿ.ಎಂ. ಚಿಕ್ಕಬೋರಯ್ಯ ಸಭಾಂಗಣ, ಸಂಜೆ 4.30ಕ್ಕೆ.

■ **ಶ್ರೀ ರಾಮಸೇವಾ ಮಂಡಳಿ ಚಾರಿಟಬಲ್ ಟ್ರಸ್ಟ್ ಮೈಸೂರು ಉತ್ತರ :** 32ನೇ ಶ್ರೀರಾಮನವಮಿ ಸಂಗೀತೋತ್ಸವ–2026, ಸಂಜೆ 5.15 ರಿಂದ ಶಮಾ–ಶ್ರೀವತ್ಸ–ಯಶಸ್ ಅವರಿಂದ ಗಾಯನ, ಸಂಜೆ 6.15 ರಿಂದ ವಿದುಷಿ ಸುನೀತಾ ಚಂದ್ರಶೇಖರ್ ಅವರ ರಘುಲೀಲಾ ಸಂಗೀತ ಶಾಲೆ ಇವರಿಂದ ಸಂಕೀರ್ತನ, ಸ್ಥಳ: ಶ್ರೀ ಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪ, ವಿವಿ ಮೊಹಲ್ಲಾ ಮೈಸೂರು.

■ **ಶ್ರೀ ರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್ :** ಸಂಗೀತೋತ್ಸವ–2026, ಉದ್ಘಾಟನೆ : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಶಾಸ್ತ್ರೀಯ ಸಂಗೀತ ಗಾಯಕಿ ಸೂರ್ಯ ಗಾಯತ್ರಿ ಅವರಿಂದ ಶಾಸ್ತ್ರೀಯ ಸಂಗೀತ, ಅಧ್ಯಕ್ಷತೆ : ಟ್ರಸ್ಟ್ ಅಧ್ಯಕ್ಷ ಡಾ. ಎನ್. ಶ್ರೀರಾಮ್, ಸ್ಥಳ: ಶ್ರೀಮತಿ ಆಲಮ್ಮನವರ ಛತ್ರ, ಕುಂಚಿಟಿಗರ ಸಂಘ, ಶ್ರೀರಾಮಪೇಟೆ, ಸಂಜೆ 6ಕ್ಕೆ.

■ **ಶ್ರೀ ರಾಮ ಸೇವಾ ಮಂಡಲಿ :** 73ನೇ ವರ್ಷದ ಶ್ರೀ ರಾಮೋತ್ಸವ, ವಿದ್ವಾನ್ ಡಾ. ಎಂ.ಆರ್. ಹನುಮಂತರಾಜು ಮತ್ತು ವೃಂದದವರಿಂದ ಲಯನಾದ ತರಂಗ ಸಂಗೀತ, ಸ್ಥಳ: ಶ್ರೀ ರಾಮಸೇವಾ ಮಂಡಲಿ, ಶ್ರೀ ಅವನಿಶಂಕರ ಮಠ, 4ನೇ ಮುಖ್ಯ ರಸ್ತೆ, ವಿದ್ಯಾರಣ್ಯಪುರಂ, ಸಂಜೆ 6.30ಕ್ಕೆ.

■ **ರೋಟರಿ ಮೈಸೂರು ಉತ್ತರ, ರೋಟರಿ ಮೈಸೂರು ಎಲೈಟ್ :** ಜಂಟಿ ಸಭೆ, ನೀರು, ನೈರ್ಮಲ್ಯ ಮತ್ತು ಸ್ವಚ್ಛತೆ ಬಗ್ಗೆ ಉಪನ್ಯಾಸ, ವಿಶ್ರಾಂತ ಇಸ್ರೋ ವಿಜ್ಞಾನಿ ಡಾ. ವಿ. ಜಗನ್ನಾಥ್ ಅವರಿಂದ ಉಪನ್ಯಾಸ, ಉಪಸ್ಥಿತರು : ರೋಟರಿ ಮೈಸೂರು ಎಲೈಟ್ ಅಧ್ಯಕ್ಷ ರೋ. ಎನ್.ಎಸ್. ಮಹದೇವಸ್ವಾಮಿ, ಅಧ್ಯಕ್ಷತೆ : ರೋಟರಿ ಮೈಸೂರು ಉತ್ತರ ಅಧ್ಯಕ್ಷ ರೋ. ಎಂ. ಚಂದ್ರಶೇಖರ್, ಸ್ಥಳ: ರೋಟರಿ ಭವನ, ವಿಜಯನಗರ ರೈಲ್ವೆ ಬಡಾವಣೆ, ಸಂಜೆ 6.30ಕ್ಕೆ.

■ **ಟೆರೇಸಿಯನ್ ಕಾಲೇಜು :** ಸೃಷ್ಟಿ ಸೆಲೆಸ್ಟಿಯಾ –ಎಟರ್ನಲ್ ಸ್ಪಾರ್ಲೈಟ್, ಅಂತರ ಕಾಲೇಜು ಉತ್ಸವ, ಉದ್ಘಾಟನೆ : ಕನ್ನಡ ಚಲನಚಿತ್ರ ನಟ ಗೌರವ್ ಶೆಟ್ಟಿ, ಸ್ಥಳ: ಆವೇ ಮರಿಯಾ ಸುವರ್ಣ ಮಹೋತ್ಸವ ಸಭಾಂಗಣ, ಬೆಳಗ್ಗೆ 9.30ಕ್ಕೆ.



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 27 ಶುಕ್ರವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 335 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4





ಮುಡಾ ಬದಲಿ ನಿವೇಶನ ಹಂಚಿಕೆ ಪ್ರಕರಣ: ಮುಖ್ಯಮಂತ್ರಿಗಳ ಕುಟುಂಬಕ್ಕೆ ಮತ್ತೆ ಸಂಕಷ್ಟ

ಸಿಎಂ ಸಿದ್ದರಾಮಯ್ಯ ದಂಪತಿಗೆ ಹೈಕೋರ್ಟ್

ತುರ್ತು ನೋಟಿಸ್

ಲೋಕಾಯುಕ್ತರ ಬಿ ರಿಪೋರ್ಟ್ ಅಂಗೀಕರಿಸಿದ್ದ ಜನಪ್ರತಿನಿಧಿಗಳ ವಿಶೇಷ ಕೋರ್ಟ್ ಆದೇಶ ಪ್ರಶ್ನಿಸಿ ಸ್ನೇಹಮಯಿ ಕೃಷ್ಣ ಸಲ್ಲಿಸಿದ ಅರ್ಜಿ ವಿಚಾರಣೆ; ಮಲ್ಲಿಕಾರ್ಜುನಸ್ವಾಮಿ, ದೇವರಾಜು, ಜಿ.ಟಿ.ದಿನೇಶ್‌ಕುಮಾರ್‌ಗೂ ನೋಟಿಸ್


ಸಿದ್ದರಾಮಯ್ಯ


ಬಿ.ಎಂ.ಪಾರ್ವತಿ

ಬೆಂಗಳೂರು, ಮಾ.26– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದ ಬದಲಿ ನಿವೇಶನ ಹಂಚಿಕೆ ಪ್ರಕರಣ ಮತ್ತೆ ಹೈಕೋರ್ಟ್ ಅಂಗಳ ತಲುಪಿದ್ದು, ದೂರುದಾರ ಸ್ನೇಹಮಯಿ ಕೃಷ್ಣ ಸಲ್ಲಿಸಿದ್ದ ಅರ್ಜಿ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ, ಅವರ ಪತ್ನಿ ಪಾರ್ವತಿ ಅವರಿಗೆ ತುರ್ತು ನೋಟಿಸ್ ಜಾರಿಗೆ ಆದೇಶಿಸಿದೆ.

ಸದರಿ ಪ್ರಕರಣದಲ್ಲಿ ಲೋಕಾಯುಕ್ತ ಪೊಲೀಸರು ಸಲ್ಲಿಸಿದ್ದ 'ಬಿ' ರಿಪೋರ್ಟ್ ಅನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಕಳೆದ ಜ.28ರಂದು ಅಂಗೀಕರಿಸಿತ್ತು. ಇದನ್ನು ಪ್ರಶ್ನಿಸಿ ದೂರುದಾರ ಸ್ನೇಹಮಯಿ ಕೃಷ್ಣ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸುನೀಲ್ ದತ್ತ ಯಾದವ್ ಅವರ ನ್ಯಾಯಪೀಠ, ಪ್ರಕರಣದ ಪ್ರತಿವಾದಿಗಳಾದ ಮುಖ್ಯಮಂತ್ರಿ ಸಿದ್ದರಾಮಯ್ಯ, ಅವರ ಪತ್ನಿ ಬಿ.ಎಂ. ಪಾರ್ವತಿ ಅವರೊಂದಿಗೆ ಸಿದ್ದರಾಮಯ್ಯರ ಬಾಮೈದ ಮಲ್ಲಿಕಾರ್ಜುನಸ್ವಾಮಿ, ಭೂ ಮಾಲೀಕ ದೇವರಾಜು, ಇಡಿ ಮತ್ತು ಲೋಕಾಯುಕ್ತ ಪೊಲೀಸರು ಹಾಗೂ ಮುಡಾ ಮಾಜಿ ಆಯುಕ್ತ ಜಿ.ಟಿ. ದಿನೇಶ್ ಕುಮಾರ್‌ಗೆ ನೋಟಿಸ್ ಜಾರಿ ಮಾಡಿದೆ.

ಪ್ರಕರಣದ ಹಿನ್ನೆಲೆ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಬಿ.ಎಂ. ಪಾರ್ವತಿ ಅವರಿಗೆ ಸೇರಿದ ಮೈಸೂರಿನ ಕೆಸರೆ ಗ್ರಾಮದ ಸರ್ವೇ ನಂಬರ್ 464ರ 3 ಎಕರೆ 16 ಗುಂಟೆ ಜಮೀನನ್ನು ಸ್ವಾಧೀನ ಪಡಿಸಿಕೊಂಡು, ಅದರ ಬದಲಿಗೆ ಮುಡಾ (ಇಂದಿನ ಎಂಡಿಎ) ಸುಮಾರು 56 ಕೋಟಿ ಮೌಲ್ಯದ 14 ನಿವೇಶನಗಳನ್ನು ನಗರದ ಪ್ರತಿಷ್ಠಿತ ಬಡಾವಣೆಗಳಲ್ಲಿ ಅಕ್ರಮವಾಗಿ ಹಂಚಿಕೆ ಮಾಡಿದೆ. ಇದಕ್ಕೆ ಸಿದ್ದರಾಮಯ್ಯ ಅಧಿಕಾರ ದುರುಪಯೋಗ ಮಾಡಿಕೊಂಡು, ಅಧಿಕಾರಿಗಳ ಮೇಲೆ ಪ್ರಭಾವ ಬೀರಿದ್ದಾರೆ.


ಸ್ನೇಹಮಯಿ ಕೃಷ್ಣ

ಹೀಗಾಗಿ, ಪ್ರಕರಣದ ಕುರಿತು ಎಫ್‌ಐಆರ್ ದಾಖಲಿಸಿ ತನಿಖೆ ನಡೆಸಬೇಕು ಎಂದು ಕೋರಿ ಮೈಸೂರಿನ ಲೋಕಾಯುಕ್ತ ಪೊಲೀಸರಿಗೆ 2024ರ ಜುಲೈ 3ರಂದು ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ದೂರು ದಾಖಲಿಸಿದ್ದರು. ನಂತರ ಪ್ರಕರಣದ ಪ್ರಾಸಿಕ್ಯೂಷನ್‌ಗೆ ಅನುಮತಿ ಕೋರಿ, ರಾಜ್ಯಪಾಲರಿಗೆ ಅರ್ಜಿ ಸಲ್ಲಿಸಿದ್ದರು.

ಈ ಬಗ್ಗೆ ಪರಿಶೀಲನೆ ನಡೆಸಿದ ರಾಜ್ಯಪಾಲರು ಪ್ರಕರಣದ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿ, 2024ರ ಆಗಸ್ಟ್ 17ರಂದು ಆದೇಶಿಸಿದ್ದರು. ಆ ಆದೇಶ ಪ್ರಶ್ನಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಆಗಸ್ಟ್ 19ರಂದು ಸಲ್ಲಿಸಿದ್ದ ಅರ್ಜಿಯನ್ನು ತಿರಸ್ಕರಿಸಿದ್ದ ಹೈಕೋರ್ಟ್, ಪೊಲೀಸ್ ■10ನೇ ಪುಟಕ್ಕೆ

1ನೇ ತರಗತಿ ಪ್ರವೇಶಕ್ಕೆ ಮಕ್ಕಳ ವಯೋಮಿತಿ ಸಡಿಲಿಕೆ

- 6 ವರ್ಷದಿಂದ 60 ದಿನ ವಿನಾಯಿತಿ
- ಮಹಾವೀರ ಜಯಂತಿ ಅಂಗವಾಗಿ ಮಾ.30 ರ ಎಸ್‌ಎಸ್‌ಎಲ್‌ಸಿ ಹಿಂದಿ ಪರೀಕ್ಷೆ ಮಾ.31 ಕ್ಕೆ ನಿಗದಿ

ಬೆಂಗಳೂರು, ಮಾ.26 (ಕೆಎಂಶಿ)– ಒಂದನೇ ತರಗತಿಯ ಮಕ್ಕಳ ಪ್ರವೇಶಕ್ಕೆ ಇದ್ದ ವಯೋಮಿತಿಯನ್ನು ರಾಜ್ಯ ಸರ್ಕಾರ ಸಡಿಲಿಕೆ ಮಾಡಿ ಆದೇಶ ಹೊರಡಿಸಿದೆ.



ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಅವರು, ಮಕ್ಕಳು ಮತ್ತು ಪೋಷಕರ ಹಿತದೃಷ್ಟಿಯಿಂದ ಪ್ರಸ್ತುತವಿದ್ದ 6 ವರ್ಷದ ವಯೋಮಿತಿಯನ್ನು 60 ದಿನಗಳ ಮಟ್ಟಿಗೆ ಇಳಿಕೆ ಮಾಡಲಾಗಿದೆ ಎಂದು ಪ್ರಕಟಿಸಿದರು.

2026–27ನೇ ಶೈಕ್ಷಣಿಕ ಸಾಲಿನಿಂದಲೇ ವಯೋಮಿತಿ ಸಡಿಲಿಕೆಯು ಜಾರಿಗೊಳ್ಳಲಿದ್ದು, ಇದರಿಂದ ಲಕ್ಷಾಂತರ ಮಕ್ಕಳಿಗೆ ಶಾಲಾ ಪ್ರವೇಶ ಪಡೆಯಲು ಅನುಕೂಲವಾಗಲಿದೆ ಸರ್ಕಾರದ ಈ ನಿರ್ಧಾರದಿಂದ ಪ್ರವೇಶದ ಸನಿಹದಲ್ಲಿದ್ದ ಮಕ್ಕಳಿಗೆ ■10ನೇ ಪುಟಕ್ಕೆ

ಮುಡಾದಲ್ಲಿ ಹೀಗೂ ಲೂಟಿ ನಡೆದಿದೆ ನೋಡಿ...!

ಮುಡಾ ವಾಣಿಜ್ಯ ಸಂಕೀರ್ಣದ ಮೇಲೆ ಮೊಬೈಲ್ ಟವರ್ ಅಳವಡಿಕೆಗೆ ಬಾಡಿಗೆ

ಬರೀ ಮಾಸಿಕ 265 ರೂ. ...!

■ 10 ವರ್ಷಗಳ ಅವಧಿಗೆ ಅನುಮತಿ ನೀಡಿರುವ ಮುಡಾ ಹಿಂದಿನ ಆಯುಕ್ತ ದಿನೇಶ್ ಕುಮಾರ್ ■ ಎರಡು ವರ್ಷಗಳ ಹಿಂದೆಯೇ ಮೊಬೈಲ್ ಟವರ್ ಅಳವಡಿಕೆ; ಭಾರೀ ಲಾಭ ಪಡೆಯುತ್ತಿರುವ ಖಾಸಗಿ ಕಂಪನಿ ■ ಈ ಪ್ರಕರಣದ ಕಡತವೇ ನಾಪತ್ತೆ; ಮುಡಾ ಹಗರಣಗಳಿಗೆ ಕೊನೆಯಂತೂ ಇಲ್ಲವೇ ಇಲ್ಲ! ■ ಬಯಲಾಗುತ್ತಿರುವ ಅಕ್ರಮಗಳಲ್ಲಿ ಯಾರ ವಿರುದ್ಧವೂ ಕ್ರಮವಿಲ್ಲ

ಮೈಸೂರು, ಮಾ.26(ಬಿಎಲ್‌ಯು)– ಮುಡಾದ ಸಾವಿರಾರು ಕೋಟಿ ಮೌಲ್ಯದ ನಿವೇಶನಗಳ ಅಕ್ರಮ ಮಂಜೂರಾತಿ ಆರೋಪದಲ್ಲಿ ಜೈಲು ಪಾಲಾಗಿರುವ ಹಿಂದಿನ ಆಯುಕ್ತ ಜಿ.ಟಿ.ದಿನೇಶ್ ಕುಮಾರ್ ಅವರ ಮತ್ತೊಂದು ಹಗರಣ ಬಯಲಾಗಿದೆ.

ಮೈಸೂರಿನ ವಿಜಯನಗರ ಮೊದಲ ಹಂತದಲ್ಲಿರುವ ಮುಡಾ ವಾಣಿಜ್ಯ ಸಂಕೀರ್ಣದ ಮೇಲೆ ಮೊಬೈಲ್ ಟವರ್ ಅಳವಡಿಸಲು ದಿನೇಶ್ ಕುಮಾರ್, ಖಾಸಗಿ ಕಂಪನಿಯೊಂದಕ್ಕೆ ಬರೀ 265 ರೂಪಾಯಿ ಮಾಸಿಕ ಬಾಡಿಗೆಗೆ ಅನುಮತಿ ನೀಡಿರುವ ವಿಚಾರ ತಡವಾಗಿ ಬೆಳಕಿಗೆ ಬಂದಿದೆ.

ಮುಡಾ ವಾಣಿಜ್ಯ ಸಂಕೀರ್ಣದ ಮೇಲೆ 9 ಮೀಟರ್ ಎತ್ತರದ 4 ಕಂಬಗಳಿರುವ ಮೊಬೈಲ್ ಟವರ್ ಅಳವಡಿಸಲು 10 ವರ್ಷಗಳ ಅವಧಿಗೆ ದಿನೇಶ್‌ಕುಮಾರ್ ಬಹಳ ಉದಾರತೆಯಿಂದ ಅನುಮತಿ ನೀಡಿದ್ದಾರೆ. 2024ರ ಮೇ.20ರಂದು ಬೆಂಗಳೂರಿನ ರಾಜಾಜಿನಗರದ ಖಾಸಗಿ ಕಂಪನಿಗೆ ಅನುಮತಿ ಆದೇಶ ಪತ್ರ ನೀಡಿದ್ದಾರೆ. ಅದರಂತೆ ಕಳೆದ ಎರಡು ವರ್ಷಗಳ ಹಿಂದೆಯೇ ಈ ಖಾಸಗಿ ಕಂಪನಿಯು ಮುಡಾ ವಾಣಿಜ್ಯ ಸಂಕೀರ್ಣದ ಮೇಲೆ ಮೊಬೈಲ್ ಟವರ್ ಅಳವಡಿಸಿ ಕಾರ್ಯಾಚರಿಸುತ್ತಿದೆ. ■10ನೇ ಪುಟಕ್ಕೆ


ಮೈಸೂರಿನ ವಿಜಯನಗರ ಮೊದಲ ಹಂತದ ಮುಡಾ ವಾಣಿಜ್ಯ ಸಂಕೀರ್ಣದ ಮೇಲೆ ಕೇವಲ 265 ರೂಪಾಯಿಗಳ ಮಾಸಿಕ ಬಾಡಿಗೆಗೆ ಅಳವಡಿಸಿರುವ ಖಾಸಗಿ ಕಂಪನಿಯ ಮೊಬೈಲ್ ಟವರ್.

ಈ ಆದೇಶ ಕೂಡಲೇ ರದ್ದು ಮಾಡುತ್ತೇನೆ


ಮೈಸೂರಿನ ವಿಜಯನಗರದ ಮುಡಾ ವಾಣಿಜ್ಯ ಸಂಕೀರ್ಣದ ಮೇಲೆ ಕೇವಲ 265 ರೂ. ಬಾಡಿಗೆಗೆ ಖಾಸಗಿ ಕಂಪನಿ ಮೊಬೈಲ್ ಟವರ್ ಅಳವಡಿಸಿಕೊಳ್ಳಲು ನೀಡಿರುವ ಅನುಮತಿ ಆದೇಶವನ್ನು ಕೂಡಲೇ ರದ್ದು ಮಾಡಲಾಗುವುದು. ಇದು ಮುಡಾ ಅಸ್ತಿತ್ವದಲ್ಲಿ ಇದ್ದಾಗ ಆಗಿರುವ ಆದೇಶವಾಗಿದ್ದು, 10 ವರ್ಷಗಳ ಅವಧಿಗೆ ಅನುಮತಿ ನೀಡಿದ್ದಾರೆ. ಇದರ ಬಗ್ಗೆ ಪರಿಶೀಲನೆ ಮಾಡೋಣವೆಂದರೆ ಈ ಮೊಬೈಲ್ ಟವರ್ ಅಳವಡಿಕೆಗೆ ಸಂಬಂಧಿಸಿದ ಫೈಲ್ (ಕಡತ) ನಾಪತ್ತೆಯಾಗಿದೆ. ಎಷ್ಟೇ ಹುಡುಕಿದರೂ ಸಿಗುತ್ತಿಲ್ಲ ಮೊಬೈಲ್‌ನಲ್ಲಿ ಫೋಟೋ ತೆಗೆದಿರುವ ಆದೇಶ ಪ್ರತಿ ಮಾತ್ರ ದೊರೆತಿದೆ. ಪರಿಶೀಲನೆ ಮಾಡಲಾಗುತ್ತಿದ್ದು ಈ ಆದೇಶವನ್ನು ಕೂಡಲೇ ರದ್ದು ಮಾಡಲಾಗುವುದು.



-ಕೆ.ಆರ್.ರಕ್ಷಿತ್, ಆಯುಕ್ತರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ

ಶೀಘ್ರದಲ್ಲೇ ಮೇಕೆದಾಟು ಜಲಾಶಯಕ್ಕೆ ಅಡಿಗಲ್ಲು..!

ನೀರಾವರಿ ಸಚಿವರೂ ಆದ ಡಿಕೆಶಿ ಮಾಹಿತಿ



ಬೆಂಗಳೂರು, ಮಾ.26 (ಕೆಎಂಶಿ)– ಬಹು ನಿರೀಕ್ಷಿತ ಮೇಕೆದಾಟು ಯೋಜನಾ ಕಾಮಗಾರಿ ಕೈಗೆತ್ತಿಕೊಳ್ಳುವುದಾಗಿ ಬೃಹತ್ ನೀರಾವರಿ ಹೊಣೆಗಾರಿಕೆ ಹೊತ್ತಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿಧಾನಸಭೆಯಲ್ಲಿಂದು ಘೋಷಣೆ ಮಾಡಿದ್ದಾರೆ.



ಬೆಂಗಳೂರಿನ ಅಭಿವೃದ್ಧಿಯ ಕುರಿತು ನಡೆದ ಚರ್ಚೆಗೆ ಉತ್ತರ ನೀಡುವ ಸಂದರ್ಭದಲ್ಲಿ, ಕೃಷ್ಣರಾಜ ಸಾಗರ ಅಣೆಕಟ್ಟೆಗೆ ಸಮಾನಾಂತರವಾಗಿ ಮೇಕೆದಾಟು ಬಳಿ ನಿರ್ಮಾಣವಾಗಲಿರುವ ಜಲಾಶಯಕ್ಕೆ ಶೀಘ್ರದಲ್ಲಿ ಅಡಿಗಲ್ಲು ಹಾಕುವುದಾಗಿ ಪ್ರಕಟಿಸಿದರು. ಜಲಾಶಯ ನಿರ್ಮಾಣಕ್ಕೆ ಸುಪ್ರೀಂಕೋರ್ಟ್ ತೀರ್ಪನ್ನು ಮುಂದಿಟ್ಟುಕೊಂಡು ಚಾಲನೆ ನೀಡಲಾಗುವುದು. ಇನ್ನೇನಿದ್ದರೂ ಕೇಂದ್ರ ಮತ್ತು ರಾಜ್ಯ ಸರ್ಕಾರದ ನಡುವಿನ ಸಂಬಂಧವಷ್ಟೇ ಬಾಕಿ ಉಳಿದಿದೆ. ತಮಿಳುನಾಡಿಗೂ ಯೋಜನೆಗೂ ಸಂಬಂಧವೇ ಇಲ್ಲ ಎಂದು ಅವರು ಸ್ಪಷ್ಟಪಡಿಸಿದರು. ■10ನೇ ಪುಟಕ್ಕೆ

ಕಡಿಮೆಗೆ ಕಾರು ಸಿಗುತ್ತೆ ಅಂತಾ ಖರೀದಿಗೆ ಮುನ್ನಾ ಎಚ್ಚರ...!?

- ಮೈಸೂರಲ್ಲಿ ಹೊಸ ದಂಧೆ ಬೆಳಕಿಗೆ
- ಖರೀದಿಸಿದ ಕಾರಿನ ಪೂರ್ಣ ಹಣ ಪಾವತಿಸದೇ ಮತ್ತೊಬ್ಬರಿಗೆ ಮಾರಾಟ; ಅತ್ತ ಹಳೆ ಮಾಲೀಕನಿಗೆ ಪೂರ್ಣ ಹಣವೂ ಇಲ್ಲ–ಇತ್ತ ಖರೀದಿಸಿದವರಿಗೆ ದಾಖಲೆಗಳೇ ದಕ್ಕಿಲ್ಲ
- ಬನ್ನೂರು ಪೊಲೀಸರಿಂದ ಮೂವರ ಬಂಧನ; 1.10 ಕೋಟಿ ಮೌಲ್ಯದ 8 ಕಾರು ವಶಕ್ಕೆ

ಮೈಸೂರು, ಮಾ.26(ಎಂಕೆ)– ಐಷಾರಾಮಿ ಕಾರುಗಳ ಖರೀದಿಸಿ, ಅವುಗಳ ಮಾಲೀಕರಿಗೆ ಪೂರ್ಣ ಹಣ ಪಾವತಿಸದೇ, ಬಳಿಕ ಸೂಕ್ತ ದಾಖಲೆಗಳಿಲ್ಲದೆಯೇ ಅಂತಹ ಕಾರುಗಳನ್ನು ಕಡಿಮೆ ಬೆಲೆಗೆ ಮಾರಾಟ ಮಾಡಿ ವಂಚಿಸುತ್ತಿದ್ದ ಮೂವರನ್ನು ಬಂಧಿಸಿ, 1.10 ಕೋಟಿ ರೂ. ಮೌಲ್ಯದ 8 ಕಾರುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ(ಎಸ್‌ಪಿ) ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದರು.

ಮೈಸೂರಿನ ನಜರ್‌ಬಾದ್‌ನಲ್ಲಿರುವ ತಮ್ಮ ಕಚೇರಿ ಸಭಾಂಗಣದಲ್ಲಿ ಗುರುವಾರ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಮೈಸೂರಿನ ಗೌಸಿಯಾನಗರದ ರುಮಾನ್ ಷರೀಫ್(26), ರಾಜೀವ್‌ನಗರದ ಮುಜಾಹಿದ್ ಪಾಷ (37) ಹಾಗೂ ಲಷ್ಕರ್ ಮೊಹಲ್ಲಾದ ಷಾಹುದ್ದೀನ್(25) ಬಂಧಿಸಿ, ತನಿಖೆ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಮೈಸೂರಿನ ಸಿ.ಎಸ್.ಅಭಿಷೇಕ್‌ಗೆ ಫೇಸ್‌ಬುಕ್‌ನಲ್ಲಿ ಪರಿಚಿತನಾಗಿದ್ದ ಆರೋಪಿ ರುಮಾನ್ ಷರೀಫ್, ಐಷಾರಾಮಿ ಕಾರುಗಳ ಕಡಿಮೆ ಬೆಲೆಗೆ ಕೊಡುವುದಾಗಿ ನಂಬಿಸಿ, ಆರೋಪಿಗಳಾದ ಮುಜಾಹಿದ್ ಪಾಷ ಹಾಗೂ ಷಾಹುದ್ದೀನ್ ಜೊತೆಗೂಡಿ 5.50 ಲಕ್ಷ ರೂ. ಪಡೆದು ಆಡಿ ಎ5(ಹೆಚ್‌ಆರ್–26–ಡಿಎ–5991) ಮತ್ತು ವೋಕ್ಸ್‌ವ್ಯಾಗನ್ ಪೋಲೋ 1.2(ಕೆಎ–19–ಎಂಇ–4591) ಕಾರುಗಳನ್ನು ನೀಡಿದ್ದಾರೆ. ಆದರೆ, ಈ ಎರಡು ಕಾರುಗಳ ದಾಖಲೆಗಳನ್ನು ಕೊಡದೆ ಸತಾಯಿಸಿದ್ದು, ದಾಖಲೆ ಕೇಳಿದ್ದಕ್ಕೆ ಮಾ.18 ರಂದು ಬನ್ನೂರು ಮುಖ್ಯ ರಸ್ತೆಯಲ್ಲಿರುವ ರಂಗಸಮುದ್ರ ಗೇಟ್ ಬಳಿ ಗಲಾಟೆ ಮಾಡಿದ್ದಾರೆ ಎಂದರು.

ಬಳಿಕ ಅಭಿಷೇಕ್, ಅದೇ ದಿನ ಬನ್ನೂರು ಪೊಲೀಸ್ ಠಾಣೆಗೆ ನೀಡಿದ ದೂರಿನ ಮೇರೆಗೆ ಬಿಎನ್‌ಎಸ್ 318(1) ಕಲಂ ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದಾಗ ಆರೋಪಿಗಳು, ಕಾರಿನ ಮೂಲ ಆರ್‌ಸಿ (ನೋಂದಣಿ ಪ್ರಮಾಣಪತ್ರ) ಮಾಲೀಕರ ಬಳಿ ಹೋಗಿ ಕಾರನ್ನು ಖರೀದಿಸುವುದಾಗಿ ನಂಬಿಸಿ, ಸ್ವಲ್ಪ ಹಣವನ್ನೂ ಮುಂಗಡವಾಗಿ ನೀಡಿ ಕಾರನ್ನು ಪಡೆದು ಬೇರೆಯವರಿಗೆ ಅಧಿಕ ಹಣಕ್ಕೆ ಮಾರಾಟ ಮಾಡಿದ್ದಾರೆ. ಅವರಿಗೆ ಕಾರಿಗೆ ಸಂಬಂಧಿಸಿದ ದಾಖಲೆಗಳನ್ನು ನಂತರ ತಂದು ಕೊಡುವುದಾಗಿ ಹೇಳುತ್ತಾ ಇತ್ತ ಕಾರಿನ ಮೂಲ ಮಾಲೀಕರಿಗೆ ಪೂರ್ತಿ ಹಣ ನೀಡದೆ, ಕೊಂಡುಕೊಂಡವರಿಗೆ ದಾಖಲೆಗಳನ್ನು ನೀಡದೆ ವಂಚಿಸಿರುವುದು ತಿಳಿದು ಬಂದಿದೆ ಎಂದು ಮಾಹಿತಿ ನೀಡಿದರು.

ದೊಡ್ಡ ಗ್ಯಾಂಗ್ ಇರುವಂತಿದೆ: ಐಷಾರಾಮಿ ಕಾರುಗಳನ್ನು ಈ ರೀತಿಯ ದಂಧೆ ಮೂಲಕ ಕಡಿಮೆ ಬೆಲೆಗೆ ಮಾರಾಟ ಮಾಡುವ ದೊಡ್ಡ ಗ್ಯಾಂಗ್ ಇರಬಹುದು ಎಂಬ ಅನುಮಾನವಿದ್ದು, ಈ ನಿಟ್ಟಿನಲ್ಲಿ ಪ್ರತ್ಯೇಕ ತಂಡ ರಚಿಸಿ, ತನಿಖೆ ನಡೆಸಲಾಗುತ್ತಿದೆ. ಬಂಧಿತ ಆರೋಪಿಗಳು ಮೈಸೂರಿನವರೇ ಆಗಿದ್ದಾರೆ. ಅಲ್ಲದೆ ವಶಪಡಿಸಿಕೊಂಡಿರುವ ಕಾರುಗಳ ಮೂಲ ಮಾಲೀಕರು ಇನ್ನೂ ಪತ್ತೆಯಾಗಿಲ್ಲ. ಮಾಲೀಕರ ಪತ್ತೆ ನಂತರ ಜಾಲದ ಸಂಪೂರ್ಣ ಮಾಹಿತಿ ತಿಳಿಯಲಿದೆ ಎಂದು ಹೇಳಿದರು.

ಅಪರಾಧ ಕೃತ್ಯಗಳಿಗೆ ಬಳಕೆ..!: ಇಂತಹ ಕಾರುಗಳನ್ನು ಮಾರಾಟ ಮಾಡುವುದಕ್ಕೂ ಮುನ್ನ ನಾನಾ ಅಪರಾಧ ಕೃತ್ಯಗಳಿಗೆ ಬಳಕೆ ಮಾಡಿದ್ದಾರೆಯೇ ಎಂಬುದರ ಕುರಿತು ತನಿಖೆ ನಡೆಸಲಾಗುತ್ತಿದೆ. ಕಾರುಗಳ ಮಾಲೀಕರು ಪತ್ತೆಯಾದಲ್ಲಿ ಸಂಪೂರ್ಣ ಮಾಹಿತಿ ದೊರೆಯಲಿದೆ. ಕಾರುಗಳ ಕಂಡೀಷನ್ ಗಮನಿಸಿದರೆ, ಕಾರುಗಳ ನೈಜ ರೂಪವನ್ನು ■10ನೇ ಪುಟಕ್ಕೆ


ವಶಪಡಿಸಿಕೊಳ್ಳಲಾದ ಕಾರುಗಳನ್ನು ಪರಿಶೀಲಿಸುತ್ತಿರುವ ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ, ಎಎಸ್‌ಪಿಗಳಾದ ಮಲ್ಲಿಕ್, ಎಲ್.ನಾಗೇಶ್ ಇತರರು.

ವಶಪಡಿಸಿಕೊಂಡಿರುವ ಕಾರುಗಳು...

ಆಡಿ ಎ5(HR-26-DA-5991), ವೋಕ್ಸ್ ವ್ಯಾಗನ್ ಪೋಲೋ(KA-19-ME-4591), ಷೆವರ್ಲೆ ಕ್ರೂಜ್(KA-50-N-0577), ಫೋರ್ಡ್ ಇಕೋ ಸ್ಪೋರ್ಟ್ (KA-06-MV-8903), ಹುಂಡೈ ಐ20 ಅಸ್ತಾ (KA-04-ML-1918), ಆಡಿ ಎಜಿ ಎ4(DL-2-CQ-1883), ವೋಕ್ಸ್‌ವ್ಯಾಗನ್ ವೆಂಟೊ (KA-06-N-7973) ಮತ್ತು ವೋಕ್ಸ್ ವ್ಯಾಗನ್ ಪೋಲೋ(KA-18-P-0829).

ರಾಜ್ಯದಲ್ಲಿ ನಾನು ಮಂಡಿಸಿದಷ್ಟು ಆಯವ್ಯಯ ಯಾರೂ ಮಂಡಿಸಿಲ್ಲ...!

ಇದು ಒಂದು ಮಹಾದಾಖಲೆ; ಸಿಎಂ ಸಿದ್ದರಾಮಯ್ಯ ಹೆಮ್ಮೆ

ಬೆಂಗಳೂರು, ಮಾ.26 (ಕೆಎಂಶಿ)– ನನಗೆ ಶಾಸಕರು, ವಿಧಾನ ಪರಿಷತ್ ಸದಸ್ಯರು, ರಾಜ್ಯದ ಜನತೆ ಪಕ್ಷದ ಹೈಕಮಾಂಡ್ ಬೆಂಬಲ ಇಲ್ಲದಿದ್ದರೆ ನಾನು ದಾಖಲೆಯ 17 ಬಜೆಟ್ ಮಂಡಿಸಲು ಹೇಗೆ ಸಾಧ್ಯವಾಗುತ್ತಿತ್ತು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಪ್ರತಿಪಕ್ಷಗಳ ಆರೋಪಕ್ಕೆ ವಿಧಾನ ಪರಿಷತ್‌ನಲ್ಲಿ ತಿರುಗೇಟು ನೀಡಿದರು.



ಬಜೆಟ್ ಮೇಲಿನ ಚರ್ಚೆಗೆ ಉತ್ತರಿಸುವ ವೇಳೆ, ನೀವು ಮುಂದಿನ ಎರಡು ಬಜೆಟ್ ಮಂಡಿಸುವುದಾದರೆ ಮುಖ್ಯಮಂತ್ರಿಯಾಗೇ ಇರಿ. ಆದರೆ, ಅರ್ಥಸಚಿವರಾಗಿರುವುದು ಬೇಡ ಎಂದು ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿದರು.

ನಾನು 1994ರಲ್ಲಿ ಮೊದಲ ಬಾರಿಗೆ ಹಣಕಾಸು ಸಚಿವನಾಗಿ ಬಜೆಟ್ ಮಂಡನೆ ಮಾಡಿದ್ದೆ. ಅಲ್ಲಿಂದ ಈವರೆಗೂ ಒಟ್ಟು 17 ಬಜೆಟ್ ಮಂಡಿಸಿದ್ದೇನೆ. ಕರ್ನಾಟಕದಲ್ಲಿ ನಾನು ಮಂಡಿಸಿದಷ್ಟು ಆಯವ್ಯಯಗಳನ್ನು ಯಾರೂ ಕೂಡ ಮಂಡಿಸಿಲ್ಲ. ಇದು ಒಂದು ದಾಖಲೆ ಎಂದು ತಮನ್ನು ತಾವೇ ಮುಖ್ಯಮಂತ್ರಿ ಹೊಗಳಿಕೊಂಡರು. ನಾನು ರಾಜ್ಯದ ಹಿತಾಸಕ್ತಿ ಮತ್ತು ಜನಪರವಾದ ಬಜೆಟ್ ಮಂಡನೆ ಮಾಡದಿದ್ದರೆ ನನಗೆ ಇಂಥ ಅವಕಾಶ ಸಿಗುತ್ತಿತ್ತೇ? ಎಂದು ಪ್ರಶ್ನಿಸಿದರು. ■10ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಭಿಕ್ಷುಕ : ಅಮ್ಮ ತಾಯಿ ನಾನು ಮೂಗ
ಏನಾದ್ರೂ ಭಿಕ್ಷೆ ನೀಡಿ...
ಮಹಿಳೆ : ಮುಂದೆ ಹೋಗಪ್ಪ ನಾನು ಕಿವುಡಿ.
ನನಗೇನೂ ಕೇಳಿಸಲ್ಲ.

ಮೈಸೂರು ಮಿತ್ರ
ಶುಕ್ರವಾರ, ಮಾರ್ಚ್ 27, 2026
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಒಳ್ಳೆಯ ದಾರಿ ಎಂದಿಗೂ ಕಠಿಣ. ಆದ್ರೆ, ಒಂದು ದಿನ ನಿನ್ನ ಒಳ್ಳೆಯತನವೇ ನಿನ್ನನ್ನು ಕಾಪಾಡುತ್ತದೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಸಂತೆ ಕಟ್ಟೋಕು ಮೊದಲೇ ಸೇರಿದರು ಗಂಟು ಕಳ್ಳರು

ನಿಮ್ಮ ಪತ್ರಗಳು

ಗ್ಯಾಸ್ ಅಭಾವದಿಂದ ಲಾಕ್‌ಡೌನ್ ವಾತಾವರಣ

ಮಾನ್ಯರೆ,

ಇತ್ತೀಚೆಗೆ ಇರಾನ್ ಯುದ್ಧದ ಹಿನ್ನೆಲೆಯಲ್ಲಿ ಅನಿಲ ಸಿಲಿಂಡರ್‌ಗಳಿಗೆ ದೊಡ್ಡ ಹೊಡೆತ ಬಿದ್ದಿದೆ. ಅದರಲ್ಲೂ ವಾಣಿಜ್ಯ ವ್ಯವಹಾರದ ಚಟುವಟಿಕೆಗಳಿಗೆ ತುಂಬಾ ತೊಂದರೆಯಾಗಿದೆ. ಹೋಟೆಲ್‌ಗಳಲ್ಲಿ ಈಗ ಪೂರಿ, ಭಜ್ಜಿ, ರೊಟ್ಟಿ ಸೇರಿದಂತೆ ಕರಿದ ಖಾದ್ಯಗಳು ಸಿಗುತ್ತಿಲ್ಲ. ಇನ್ನು ಬಹುತೇಕ ಹೋಟೆಲ್‌ಗಳು ಗ್ಯಾಸ್ ಅಭಾವದಿಂದ ಮುಚ್ಚಿ 15 ದಿನಗಳಾಗಿವೆ. ಬಹುತೇಕ ಹೋಟೆಲ್‌ಗಳಲ್ಲಿ ಆಸ್ಪತ್ರೆ ಐಸಿಯು ನೆನಪಿಸುವಂತೆ ಬರಿ ಇಡ್ಲಿ, ಉಪ್ಪಿಟ್ಟು, ಕಾಫಿ ಮತ್ತು ಟೀ ಮಾತ್ರ ಲಭ್ಯವಿದೆ. ಇನ್ನು ಸ್ವಲ್ಪ ದಿನಗಳಲ್ಲಿ ಅದೂ ಸಿಗದೇ ಹೋಗುವ ಪರಿಸ್ಥಿತಿ ಉಂಟಾಗಬಹುದು. ಕೆಲವು ಹೋಟೇಲ್‌ಗಳಲ್ಲಿ ದೋಸೆ, ಅಕ್ಕಿ ರೊಟ್ಟಿ, ಮುಂತಾದ ತಿಂಡಿಗಳನ್ನು ಮುಂಚೆಯೇ ತಯಾರು ಮಾಡಿ ಆರ್ಡರ್ ಬಂದ ಮೇಲೆ ಅದನ್ನೇ ಬಿಸಿ ಮಾಡಿ ಕೊಡುತ್ತಿದ್ದಾರೆ. ರೂ.1,500 ಇರುವ ಸಿಲಿಂಡರ್ ಈಗ 4 ರಿಂದ 4,500 ರೂ.ಗಳಿಗೆ ಬ್ಲಾಕ್‌ನಲ್ಲಿ ಮಾರಾಟ ವಾಗುತ್ತಿದೆ. ಬೇಡಿಕೆ ಇರುವವರು ವಿಧಿಯಿಲ್ಲದೆ ಹೆಚ್ಚು ಹಣ ಕೊಟ್ಟು ಖರೀದಿ ಮಾಡುತ್ತಿದ್ದಾರೆ. ಮದುವೆ, ಶುಭ ಸಮಾರಂಭ ಮಾಡುವವರು ದಿನಾಂಕವನ್ನು ಇದು ಸರಿಯಾಗುವವರೆಗೆ ಮುಂದೂಡಿದ್ದಾರೆ. ಲಾಕ್‌ಡೌನ್‌ನಲ್ಲಿ ತಿಳಿಯಿತು ಹಳ್ಳಿಯ ಮಹತ್ವ, ಯುದ್ಧದಲ್ಲಿ ತಿಳಿಯಿತು ಒಲೆಯ ಮಹತ್ವ, ಇನ್ನು ಕೆಲವೇ ದಿನಗಳಲ್ಲಿ ತಿಳಿಯುವುದು ಸೈಕಲ್, ಎತ್ತಿನ ಬಂಡಿ, ಕುದುರೆ ಬಂಡಿಯ ಮಹತ್ವ.

– ಜಿ.ಪಿ.ಹರೀಶ್, ವಿ.ವಿ.ಮೊಹಲ್ಲಾ, ಮೈಸೂರು


ಕೆರೆಗಳ ಉಳಿವಿಗೆ ಜಿಯೋ ಫೆನ್ಸಿಂಗ್ ಕಡ್ಡಾಯಗೊಳಿಸಿ

ಮಾನ್ಯರೆ,

ನಮ್ಮ ರಾಜ್ಯದ ಜಲಮೂಲಗಳ ಸ್ಥಿತಿ ಇಂದು ಶೋಚನೀಯವಾಗಿದೆ. ಅಂಕಿ ಅಂಶಗಳ ಪ್ರಕಾರ ಕಳೆದ ಎರಡು ದಶಕಗಳಲ್ಲಿ ಅತಿಕ್ರಮಣದಿಂದಾಗಿ ನಗರ ಪ್ರದೇಶದ ಕೆರೆಗಳ ವಿಸ್ತೀರ್ಣ ಸುಮಾರು ಶೇ. 60ರಷ್ಟು ಕುಗ್ಗಿದೆ. ಈ ಹಿನ್ನೆಲೆಯಲ್ಲಿ ಜಿಯೋ ಫೆನ್ಸಿಂಗ್ ಮತ್ತು ಮಾಹಿತಿ ಫಲಕಗಳ ಅಳವಡಿಕೆ ಕೇವಲ ತಾಂತ್ರಿಕ ಪ್ರಕ್ರಿಯೆಯಲ್ಲ. ಅದು ಕೆರೆಗಳ ಉಳಿವಿಗಾಗಿ ಇರುವ ಡಿಜಿಟಲ್ ಕವಚ. ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಕಾಯ್ದೆ ಅಡಿಯಲ್ಲಿ ಕೆರೆಗಳಿಗೆ ಹಾನಿ ಮಾಡುವುದು ಶಿಕ್ಷಾರ್ಹ ಅಪರಾಧ. ಆದರೆ ಅನುಷ್ಠಾನದಲ್ಲಿ ಹಿನ್ನಡೆಯಾಗುತ್ತಿದೆ. ರಾಜ್ಯ ಸರ್ಕಾರವು ಕೂಡಲೇ ಎಲ್ಲಾ ಕೆರೆಗಳ ನಕ್ಷೆಯನ್ನು 'ದಿಶಾಂಕ್' ಅಪ್ಲಿಕೇಶನ್‌ನಲ್ಲಿ ಕಡ್ಡಾಯವಾಗಿ ಅಪ್‌ಡೇಟ್ ಮಾಡಬೇಕು. ಹೀಗಾಗಿ ಪ್ರತಿ ಕೆರೆಯ ಬದಿಯಲ್ಲಿ ಸರ್ವೆ ನಂಬರ್, ವಿಸ್ತೀರ್ಣ ಮತ್ತು ಅತಿಕ್ರಮಣ ಮಾಡಿದರೆ ಆಗುವ ಕಾನೂನು ಕ್ರಮಗಳ ಬಗ್ಗೆ ಎಚ್ಚರಿಕೆ ಫಲಕ ಹಾಕುವುದು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಸಹಕಾರಿ. ಕೆರೆ ಸಂರಕ್ಷಣೆ ಎಂಬುದು ಕೇವಲ ಒಂದು ಇಲಾಖೆಯ ಕೆಲಸವಾಗದೆ ಜನ ಚಳವಳಿಯಾಗಬೇಕಿದೆ.

–ಡಾ.ಎಚ್.ಕೆ. ವಿಜಯಕುಮಾರ, ಮೈಸೂರು.

ಸರ್ಕಾರಿ ಶಾಲೆಗಳಿಗೆ ಮಕ್ಕಳನ್ನು ಕರೆ ತರುವುದೇಗೆ?




ಮಾನ್ಯರೆ,

ಸರ್ಕಾರಿ ಶಾಲೆಗಳಲ್ಲಿ ದಾಖಲಾತಿ ಆಂದೋಲನವನ್ನು ಯಶಸ್ವಿಯಾಗಿ ಕೈಗೊಳ್ಳುವಂತೆ ಶಿಕ್ಷಣ ಸಚಿವರು ಜಿಲ್ಲಾಡಳಿತಕ್ಕೆ ಸೂಚಿಸಿದ್ದಾರೆ ಹಾಗೂ ಮೂಲ ಸೌಕರ್ಯ, ಶಿಕ್ಷಕರ ನೇಮಕಾತಿ, ಪರೀಕ್ಷಾ ಪದ್ಧತಿಯಲ್ಲಿ ಸುಧಾರಣೆ, ನಮ್ಮ ಶಾಲೆ ನಮ್ಮ ಜವಾಬ್ದಾರಿ, ಪಾಲಕರ ಸಭೆ ಪೂರ್ವ ಪ್ರಾಥಮಿಕ ತರಗತಿಗಳು, ಕೆಪಿಎಸ್ ಶಾಲೆಗಳ ಆರಂಭ, ದ್ವಿಭಾಷಾ ಮಾಧ್ಯಮ, ಉಚಿತ ನೀಟ್ ಮತ್ತು ಸಿಇಟಿ ತರಬೇತಿ ಮುಂತಾದ ಕಾರ್ಯಕ್ರಮಗಳ ಜೊತೆಗೆ ಉಚಿತ ಪಠ್ಯ ಪಠ್ಯಪುಸ್ತಕ, ಸಮವಸ್ತ್ರ, ಶೂ ಹಾಗೂ ಸಾಕ್ಸ್, ಬಿಸಿಯೂಟ, ಹಾಲು ಮತ್ತು ಮೊಟ್ಟೆ ನೀಡಲಾಗುತ್ತದೆ. ಸರ್ಕಾರಿ ಶಾಲೆಗಳನ್ನು ಬಲಪಡಿಸುವುದಕ್ಕಾಗಿ ಕೈಗೊಂಡಿರುವ ಯೋಜನೆಗಳು ನಿಜಕ್ಕೂ ಉತ್ತಮ ನಡೆಯಾಗಿದೆ. ಆದರೆ ದೊರೆಯುತ್ತಿರುವ ಫಲಿತಾಂಶ ಮಾತ್ರ ಶೂನ್ಯವಾಗಿದೆ.

ನಾಲ್ಕು ದಶಕಗಳ ಹಿಂದೆ ಮೇಲಿನ ಯಾವ ಸೌಲಭ್ಯಗಳಿಲ್ಲದೆ ಸರ್ಕಾರಿ ಶಾಲೆಗಳು ತುಂಬಿ ತುಳುಕುತ್ತಿದ್ದವು ಒಂದೊಂದು ತರಗತಿಯಲ್ಲಿ ಅರವತ್ತು ಮಕ್ಕಳಿರುವ ಎರಡುಮೂರು ಸೆಕ್ಷನ್‌ಗಳಿರುತ್ತಿತ್ತು. ಸಂಗೀತ, ಡ್ರಾಯಿಂಗ್, ಕ್ರಾಫ್ಟ್ ಟೀಚರ್‌ಗಳ ಸಹಿತ ಪೂರ್ಣ ಪ್ರಮಾಣದಲ್ಲಿ ಶಿಕ್ಷಕರು ಇರುತ್ತಿದ್ದರು. ನಮಗೆ ಆಗ ಕೊಡುತ್ತಿದ್ದದ್ದು ಕೇವಲ ಕಳಪೆ ಗುಣಮಟ್ಟದ ಗೋಧಿ ಉಪ್ಪಿಟ್ಟು ಸಮವಸ್ತ್ರ ಇರಲಿ ಕಾಲಿಗೆ ಚಪ್ಪಲಿಯೂ ಇರುತ್ತಿರಲಿಲ್ಲ. ನಮ್ಮೂರು ಮಿರ್ಲೆ ಗ್ರಾಮದ ಸರ್ಕಾರಿ ಶಾಲೆಯಲ್ಲಿ ಐದುನೂರಕ್ಕೂ ಹೆಚ್ಚು ಮಕ್ಕಳು ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದರು. ಶಾಲೆಯನ್ನು ಬಿಟ್ಟಾಗ ಮಕ್ಕಳನ್ನು ನೋಡುವುದೇ ಚೆಂದವಿತ್ತು. ಹದಿನೈದು ಸಾವಿರ ಜನಸಂಖ್ಯೆ ಇರುವ ನಮ್ಮೂರಿನ ಶಾಲೆಯಲ್ಲಿ ಈಗ ಕೇವಲ 57 ಮಕ್ಕಳು. ಒಂದನೇ ತರಗತಿಯಲ್ಲಿ ಕೇವಲ 3 ಮಕ್ಕಳು. ಹಳೆಯ ವಿದ್ಯಾರ್ಥಿಗಳೆಲ್ಲಾ ಸೇರಿ ಒಂದು ಸಂಘವನ್ನು ಕಟ್ಟಿಕೊಂಡು, ವಾಟ್ಸಾಪ್ ಗ್ರೂಪ್ ಪ್ರಾರಂಭಿಸಿ ಎರಡು ವರ್ಷದಿಂದ ಶಾಲಾ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದೇವೆ. ಆದರೆ ಮಕ್ಕಳು ನಮ್ಮೂರಲ್ಲೇ ಇರುವ ಇಂಗ್ಲಿಷ್ ಕಾನ್ವೆಂಟ್‌ಗಳಿಗೆ ಹೋಗುತ್ತಿದ್ದಾರೆಯೇ ಹೊರತು, ಇಲ್ಲಿಗೆ ಸೇರಿಸಲು ಪೋಷಕರು ಮನಸ್ಸು ಮಾಡುತ್ತಿಲ್ಲ. ಪ್ರತಿಷ್ಠಿತ ಖಾಸಗಿ ಇಂಗ್ಲಿಷ್ ಕಾನ್ವೆಂಟ್‌ಗೆ ಕಡಿಮೆ ಇಲ್ಲದಂತೆ ಇರುವ ಕೇವಲ 4 ಜನ ಶಿಕ್ಷಕರು ಉತ್ತಮವಾಗಿ ಮಕ್ಕಳನ್ನು ತಯಾರು ಮಾಡುತ್ತಿದ್ದಾರೆ. ಆದರೂ ಮಕ್ಕಳು ಸೇರುತ್ತಿಲ್ಲ. ಉಚಿತವಾಗಿ ಏನೇ ಕೊಟ್ಟರೂ ಜನಾಂದೋಲನ ಮಾಡಿದರೂ ಖಂಡಿತ ಮಕ್ಕಳು ಬರುವುದಿಲ್ಲ. ಬದಲಾಗಿ ಖಾಸಗಿ ಕಾನ್ವೆಂಟ್‌ಗಳಿಗೆ ಅನುಮತಿ ನೀಡದೆ, ಪ್ರೌಢಶಾಲೆಯವರೆಗೆ ಸರ್ಕಾರಿ ಶಾಲೆಯಲ್ಲಿ ಓದಿದ ಮಕ್ಕಳಿಗೆ ಉನ್ನತ ವ್ಯಾಸಂಗದ ಪ್ರವೇಶದಲ್ಲಿ ಹೆಚ್ಚಿನ ಮೀಸಲಿಡಲಿ ಮತ್ತು ಸರ್ಕಾರಿ ಹುದ್ದೆಗಳನ್ನು ಶೇಕಡ ನೂರರಷ್ಟು ಇವರಿಗೇ ಕೊಡಲಿ. ಆಗ ಪೋಷಕರು ಸ್ವಯಂಪ್ರೇರಿತವಾಗಿ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸುತ್ತಾರೆ. ಇದು ಜಾರಿ ಆಗುವುದಿಲ್ಲ. ಏಕೆಂದರೆ ಬಹುತೇಕ ಖಾಸಗಿ ಇಂಗ್ಲಿಷ್ ಕಾನ್ವೆಂಟ್‌ಗಳು ನಿಯಮಾವಳಿ ಮಾಡುವವರ ಒಡೆತನದಲ್ಲಿವೆ!. ಶಿಕ್ಷಣ ಇಲಾಖೆಯ ಅಧಿಕಾರಿಗಳು ಮತ್ತು ಶಿಕ್ಷಕರು ಮನೆ ಮನೆಗೆ ಭೇಟಿ ಕೊಟ್ಟು ಕಾಡಿಬೇಡಿದರೂ ಪ್ರಯೋಜನವಾಗದು!.

–ಮಿರ್ಲೆ ಚಂದ್ರಶೇಖರ, ಲೇಖಕರು, ಮೈಸೂರು



ಸದ್ಗುರು
ಸಂಸ್ಥಾಪಕರು,
ಇಶಾ ಫೌಂಡೇಷನ್

ಅನುಭಾವದ ಚಿಂತನೆಗಳು

ಆಧ್ಯಾತ್ಮಿಕ ಬೆಳವಣಿಗೆಗೆ ಮೂರು ಸೂತ್ರಗಳು...

ಕೆಲ ಸಮಯದ ಹಿಂದೆ, ಸತ್ಸಂಗದಲ್ಲಿ ಒಬ್ಬರು 'ನಾನು ಅನೇಕ ಆಧ್ಯಾತ್ಮಿಕ ಗುರುಗಳನ್ನು ನೋಡಿದ್ದೇನೆ. ಆದರೆ ನಾನು ನಿಮ್ಮತ್ತ ಆಕರ್ಷಿತನಾದ ರೀತಿಯಲ್ಲಿ, ಬೇರೆ ಯಾವ ಗುರುವಿನ ಕಡೆಗೂ ಆಕರ್ಷಿತನಾಗಲಿಲ್ಲ. ನಿಮ್ಮಲ್ಲಿರುವುದು ಏನು?' ಎಂಬ ಪ್ರಶ್ನೆಯನ್ನು ಕೇಳಿದರು. ಅದಕ್ಕೆ ನಾನು, 'ನಿಮ್ಮಲ್ಲಿ ಇಲ್ಲದಿರುವಂತದ್ದೇನೂ ನನ್ನ ಬಳಿ ಇಲ್ಲ. ನಮಗೆಲ್ಲರಿಗೂ ಅಪರಿಮಿತ ಸಾಧ್ಯತೆಯಿರುವಂತಹ ಬೀಜವನ್ನು ನೀಡಲಾಗಿದೆ. ವಿಷಯವೇನೆಂದರೆ, ನೀವು ಬಹಳ ಜಾಗರೂಕರು ಮತ್ತು ಒಳ್ಳೆಯವರಾಗಿರುವ ಕಾರಣ, ನೀವು ಆ ಬೀಜವನ್ನು ಸಂರಕ್ಷಿಸಿ ಇಟ್ಟುಕೊಂಡಿದ್ದೀರಿ. ನಾನು ಆ ಬೀಜವನ್ನು ನಾಶಮಾಡಿ, ಅದನ್ನೊಂದು ಮರವಾಗಿ ಮಾಡಿದೆ'.

ನೀವೊಂದು ಬೀಜವನ್ನು ಮರವಾಗಿ ಮಾಡಬೇಕೆಂದಿದ್ದರೆ, ಆ ಬೀಜ ಇಲ್ಲವಾಗಬೇಕು. ಆ ಬೀಜವನ್ನು ಬೀಜವಾಗೇ ಇಟ್ಟುಕೊಳ್ಳುವುದು ಶುದ್ಧ ಮೂರ್ಖತನ. ಆದರೆ ದುರದೃಷ್ಟವಶಾತ್, ನಿಮ್ಮನ್ನು ನೀವು ರಕ್ಷಿಸಿಕೊಳ್ಳುವುದನ್ನು ಸಮಾಜದಲ್ಲಿ ಜಾಣತನವೆಂದು ಪರಿಗಣಿಸಲಾಗುತ್ತದೆ. ನಿಮ್ಮನ್ನು ನಿರ್ನಾಮಗೊಳಿಸುವ ಅವಕಾಶ ನೀಡುವುದನ್ನು, ಒಬ್ಬ ವ್ಯಕ್ತಿ ಇರುವ ಸೀಮಿತ ಸಾಧ್ಯತೆಯನ್ನು ನಾಶಪಡಿಸಲು ಅವಕಾಶ ಕೊಡುವುದನ್ನು ಜಾಣತನವೆಂದು ಪರಿಗಣಿಸಲಾಗುವುದಿಲ್ಲ. ಕೊನೆಯಲ್ಲಿ, ನೀವೆಷ್ಟು ಜಾಣರೆಂದರೆ, ನೀವು ಜೀವನವನ್ನೇ ವಂಚಿಸಿದ ಜಾಣರಾಗಿರುತ್ತೀರಿ.

ಕಳೆ ತೆಗೆಯುವ ಪ್ರಕ್ರಿಯೆ

ನಾವೆಲ್ಲರೂ ಒಂದೇ ಬಗೆಯ ಬೀಜದೊಂದಿಗೆ ಬಂದಿದ್ದೇವೆ. ಪ್ರತಿಯೊಂದು ಬೀಜವೂ ಅದೇ ಸಾಧ್ಯತೆಯೊಂದಿಗೆ ಬಂದಿದ್ದರೂ ಸಹ, ಆ ಬೀಜ ಮರವಾಗಲು, ಅದೊಂದು ಪಯಣವನ್ನು ಮಾಡಬೇಕಾಗುತ್ತದೆ. ಬೀಜವು ಮರವಾಗಬೇಕೆಂದು ನೀವು ಬಯಸುವುದಾದರೆ, ನೀವದನ್ನು ಪೋಷಿಸಬೇಕು, ಅದನ್ನು ರಕ್ಷಿಸಬೇಕು; ಹಾಗೂ ಕಳೆಗಳನ್ನು ಕೀಳಬೇಕು. ಸಾವಿರಾರು ಕಳೆಗಳು. ಮಾನವತೆಯನ್ನು ಲಕ್ಷಾಂತರ ವರ್ಷಗಳಿಂದ ಕಾಡುತ್ತಿರುವ ಅದೇ ಬೇಡದಿರುವ ಕಳೆಗಳು. ಅವುಗಳನ್ನು ಹೇಗೆ ನಿರ್ವಹಿಸಬೇಕೆಂಬುದನ್ನು ಮನುಷ್ಯರು ಇನ್ನೂ ತಿಳಿದುಕೊಂಡಿಲ್ಲ. ಸರಳ ವಿಷಯಗಳಾದ ಕೋಪ, ಹಗೆತನ, ಅಸೂಯೆ, ಭಯ, ಸಂದೇಹ ಅವೇ ಕಳೆಗಳು ಬಹಳ ಕಾಲ ಉಳಿದುಕೊಂಡುಬಿಟ್ಟಿವೆ, ಏಕೆಂದರೆ, ಕಳೆಗಳಿಗೆ ಪೋಷಣೆ ಅಥವಾ



ರಕ್ಷಣೆಯ ಅಗತ್ಯವಿರುವುದಿಲ್ಲ –ಅವುಗಳು ಹಾಗೆ ಸುಮ್ಮನೆ ಬೆಳೆಯುತ್ತವೆ. ಆದರೆ, ಪರಿಶುದ್ಧವಾದ ಒಂದು ಬೀಜವು ಚಿಗುರೊಡೆದು ಬೆಳೆಯಬೇಕೆಂದು ನೀವು ಬಯಸಿದರೆ, ನೀವು ಕಳೆಯನ್ನು ಕಿತ್ತು, ನೆಲವನ್ನು ಉತ್ತು, ಅದಕ್ಕೆ ಗೊಬ್ಬರ ಹಾಕಿ, ಅಲ್ಲಿ ಸಾಕಷ್ಟು ನೀರು ಮತ್ತು ಸೂರ್ಯನ ಬೆಳಕು ಬೀಳುವಂತೆ ನೋಡಿಕೊಳ್ಳಬೇಕು. ನಿಮಗೆ ಸೂರ್ಯನ ಬೆಳಕಿನ ಕಠೋರತೆಯ ಬಗ್ಗೆ ಭಯವಿದ್ದು ಅದರಿಂದ ತಪ್ಪಿಸಿಕೊಳ್ಳಲು ನೋಡಿದರೆ, ನೀವು ಜೀವವನ್ನು ಪೋಷಿಸುವ ಶಾಖದಿಂದಲೂ ತಪ್ಪಿಸಿಕೊಳ್ಳುತ್ತೀರಿ.

ಯಾವುದು ಜೀವದ ತಳಹದಿಯಾಗಿದೆಯೋ, ಅದೇ ಜೀವವನ್ನು ಕೊನೆಗೊಳಿಸುತ್ತದೆ ಕೂಡ. ಯಾವುದು ಬೇಯಿಸುತ್ತದೆಯೋ ಅದು ಸುಡುತ್ತದೆ ಕೂಡ. ನೀವು ಒಳ್ಳೆಯ ಅಡುಗೆಯವರಾಗಿದ್ದರೆ, ನೀವು ಬೇಯಿಸುತ್ತೀರಿ; ಅದೇ ನೀವು ಕೆಟ್ಟ ಅಡುಗೆಯವರಾಗಿದ್ದರೆ, ಅಡುಗೆಯನ್ನು ಸುಟ್ಟು ಕರಕಲಾಗಿಸುತ್ತೀರಿ. ನೀವು ಸೂರ್ಯನ ಬೆಳಕನ್ನು ತಪ್ಪಿಸಿಕೊಂಡು ನೆರಳಿನಲ್ಲಿ ಹೋಗಿ ನಿಲ್ಲಲು ಬಯಸಿದರೆ, ಜೀವವನ್ನು ಪೋಷಿಸುವ ಬೆಳಕಿನ ಶಾಖದಿಂದ ನೀವು ವಂಚಿತರಾಗುವಿರಿ. ಅಡುಗೆ ಮಾಡುವುದು ಒಂದು ಸರಳ, ಆದರೆ ಸೂಕ್ಷ್ಮವಾದ ಪ್ರಕ್ರಿಯೆ. ಅದನ್ನು ತಿಳಿದಿರುವವರು, ಸಲೀಸಾಗಿ ಮಾಡುತ್ತಾರೆ. ತಿಳಿದಿಲ್ಲದವರು ಅಡುಗೆಯನ್ನು ಸುಟ್ಟು ಇದ್ದಲಾಗಿಸುತ್ತಾರೆ. ಆಧ್ಯಾತ್ಮಿಕದ ಇಡೀ ಪ್ರಕ್ರಿಯೆಗೆ ನಿಮ್ಮನ್ನು ನೀವು ಸಮರ್ಪಿಸಿಕೊಂಡರೆ, ಅದು ಫಲಿತಾಂಶವನ್ನು ಕೊಡುವ ಹಾಗೆ ಮಾಡುವುದು ತುಂಬಾ ಸರಳ. ಅದೇ ನೀವು ನಿಮಗೆ ನೀಡಿರುವ ಸರಳವಾದ ಪ್ರಕ್ರಿಯೆಯನ್ನು ವಿರೋಧಿಸಿ, ಅದರೊಂದಿಗೆ ಹೋರಾಡಿದರೆ, ಆ ಪ್ರಕ್ರಿಯೆಯು ಬಹಳ ಕಠಿಣವಾಗುತ್ತದೆ.

ಮನುಷ್ಯರು ಕೋಟ್ಯಾಂತರ ವರ್ಷಗಳವರೆಗೆ ನಡೆಸಿದ ಅದೇ ಅಸಂಬದ್ಧತೆಯನ್ನು ನಿರಂತರವಾಗಿ ನಡೆಸುತ್ತ ನೀವು ನಿಮ್ಮ ಸಮಯವನ್ನು ವ್ಯರ್ಥ ಮಾಡಬೇಡಿ. ಕಡೇ ಪಕ್ಷ ಹೊಸ ಮೂರ್ಖತನವನ್ನು ಮಾಡುವ ಸಮಯ ಬಂದಿದೆ ಆದರೆ ಅದೇ ಅಸಂಬದ್ಧತೆಗಳು: ಈ ಕ್ಷಣ ಸತ್ಯ, ಮುಂದಿನ ಕ್ಷಣ ಸತ್ಯವಲ್ಲ; ಈ ಕ್ಷಣ ವಿಶೇಷ, ಮುಂದಿನ ಕ್ಷಣ ವಿಶೇಷವಲ್ಲ. ನೀನು ಅದ್ಭುತವಾಗಿದ್ದೀಯ ಎಂದೆಣಿಸಿದೆ, ಆದರೆ ನೀನು ತೀರ ಭಯಂಕರ. ಈ ಕ್ಷಣಕ್ಕೆ 'ಓಹ್! ಇದೇ ಜೀವನ;' ಮತ್ತು ಮರುಕ್ಷಣದಲ್ಲಿ, ನಿಮಗದರ ಬಗ್ಗೆ ಸಂದೇಹ. ಈ ರೀತಿಯಾದ ಸಂಗತಿಗಳಿಗೆ ನಿಮ್ಮನ್ನು ನೀವೇ ಒಡ್ಡಿಕೊಳ್ಳಬೇಡಿ. ನೀವು ಮಾಡುತ್ತಿರುವುದೇನಾದರು ಒಂದು ವಿಶಿಷ್ಟವಾದ ಅವಿವೇಕತೆಯಾಗಿದ್ದರೆ, ಸರಿ. ಆದರೆ ಇವುಗಳೆಲ್ಲಾ ಅದೇ ಹಳೇ ಕಳೆಗಳು. ಹೊಸ ಕಳೆಗಳು ಯಾವುವೂ ಇಲ್ಲ–ಜನರು ಇವುಗಳನ್ನೆಲ್ಲಾ ಮಾಡಿಯಾಗಿದೆ. ಈ ಹಾಳಾದ ಕಳೆ ಬೆಳೆಯುವ ವ್ಯವಹಾರ ಬಹಳ ಸರಳವಾದದ್ದು. ಯಾವ ಮುಟ್ಠಾಳನಾದರೂ ಇದನ್ನು ಮಾಡಬಹುದು.

ಆಧ್ಯಾತ್ಮಿಕ ಬೆಳವಣಿಗೆಗೆ ಮೂರು ಸೂತ್ರಗಳು

ಅಮೆರಿಕದಲ್ಲಿ ನಮ್ಮ ಈಶಾ ಇನ್ಸ್ಟಿಟ್ಯೂಟ್ ಆಫ್ ಇನ್ನರ್ ಸೈನ್ಸಸ್ ಸ್ಥಾಪಿತವಾಗಿದೆ. ಇಂಗ್ಲಿಷ್‌ನಲ್ಲಿ ಇದರ ಸಂಕ್ಷಿಪ್ತ ರೂಪ ಐ.ಐ.ಐ. ಎಂದು. ಈ ಮೂರು ಐಗಳು ಏನನ್ನು ಸೂಚಿಸುತ್ತವೆ. ಮೊದಲನೆ ಐ ಇನ್ಸ್ಟ್ರಕ್ಷನ್, ಅಂದರೆ ಬೋಧನೆ. ಎರಡನೆಯ ಐ ಇಂಟೆಗ್ರಿಟಿ ಅಂದರೆ ಋಜುತ್ವ. ಕೊನೆಯ ಐ ಇಂಟೆನ್ಸಿಟಿ ಅಂದರೆ ಉದ್ದೇಶದ ತೀವ್ರತೆ.

ಬೋಧನೆಯನ್ನು ಗಮನವಿಟ್ಟು ಕೇಳಿ ಅದನ್ನು ಪರಿಪಾಲಿಸಿ. ಎರಡನೆಯದು ಋಜುತ್ವ, ನಾನು ಋಜುತ್ವ ಎಂದಾಗ ಅದರ ಅರ್ಥವಿದು: ನಿಮಗೆ ನೀಡಲಾಗುವ ಯಾವುದೇ ಆಧ್ಯಾತ್ಮಿಕ ಪ್ರಕ್ರಿಯೆಯು ಒಳಗೂಡಿಸಿಕೊಳ್ಳುವಿಕೆಯ ನಿಟ್ಟಿನಲ್ಲಿರುತ್ತದೆ. ನೀವು ನಿಮ್ಮನ್ನು ಪ್ರತ್ಯೇಕವಾಗಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರೆ, ಅದು ಋಜುತ್ವದ ಕೊರತೆ. ಈಗ, ಬೇರೆಯವರು ಬಿಟ್ಟ ಉಸಿರನ್ನು ನೀವು ಒಳಗೆಳೆದುಕೊಳ್ಳುತ್ತಿದ್ದೀರಿ. ನೀವೇನಾದರೂ, 'ನನಗಿದು ಇಷ್ಟವಿಲ್ಲ, ಈ ಭೂಮಿಯ ಬೇರೊಂದು ಜೀವಿ ಬಿಟ್ಟ ಉಸಿರನ್ನು ನಾನು ಒಳತೆಗೆದುಕೊಳ್ಳುವುದಿಲ್ಲ.' ಎಂದರೆ ನೀವು ಸಾಯುತ್ತೀರಿ. ಹಾಗಾಗಿ, ಉಳಿವಿನ ವಿಷಯಕ್ಕೆ ಬಂದಾಗ, ನಿಮ್ಮಲ್ಲಿ ತುಂಬಾ ಒಳಗೂಡಿಸಿಕೊಳ್ಳುವಿಕೆ ಇದೆ. ಶರೀರದ ವಿಷಯದಲ್ಲಿ ನೀವು ಒಳಗೂಡಿಸಿಕೊಳ್ಳುವಿಕೆಯಿಂದಿದ್ದೀರಿ, ಆದರೆ ಮನಸ್ಸಿನಲ್ಲಿ ನೀವು ಪ್ರತ್ಯೇಕವಾಗಿದ್ದೀರಿ. ಇದನ್ನೇ ಋಜುತ್ವವಿಲ್ಲದಿರುವುದು ಎಂದು ಹೇಳಲಾಗುವುದು.

ಮೂರನೆಯದು, ಉದ್ದೇಶದ ತೀವ್ರತೆ. ನಿಮ್ಮನ್ನು ನೀವು ದೊಡ್ಡ ವ್ಯಕ್ತಿಯಾಗಿ ಮಾಡಿಕೊಳ್ಳದೆ, ಶೂನ್ಯದಲ್ಲಿ ವಿಲೀನವಾಗಿಸಿಕೊಳ್ಳುವುದೇ ಇಡೀ ಪ್ರಕ್ರಿಯೆಯ ಉದ್ದೇಶ, ಏಕೆಂದರೆ, ನೀವು ಹುಡುಕುತ್ತಿರುವುದು ಅನಂತತೆಯನ್ನು, ದೊಡ್ಡತನವನ್ನಲ್ಲ. ನೀವು ಸೀಮಾರಹಿತರಾಗುವುದು ದೊಡ್ಡದಾಗಿ ಬೆಳೆದಾಗಲ್ಲ. ದೊಡ್ಡದು ಎನ್ನುವುದಕ್ಕೂ ಸಹ ಒಂದು ಗಡಿ ಇದ್ದೇ ಇದೆ. ನೀವು ಶೂನ್ಯವಾದಾಗ ಮಾತ್ರ ನೀವು ಅನಂತವಾಗುತ್ತೀರಿ. ಹಾಗಾಗಿ, ದೊಡ್ಡದಾಗಿ ಬೆಳೆಯಲು ನೀವಿದನ್ನು ಬಳಸಬೇಡಿ. ಇದನ್ನು ವಿಲೀನವಾಗುವ ಪ್ರಕ್ರಿಯೆಯಾಗಿ ಬಳಸಿ.

> ಆಧ್ಯಾತ್ಮಿಕದ ಇಡೀ ಪ್ರಕ್ರಿಯೆಗೆ ನಿಮ್ಮನ್ನು ನೀವು ಸಮರ್ಪಿಸಿಕೊಂಡರೆ, ಅದು ಫಲಿತಾಂಶವನ್ನು ಕೊಡುವ ಹಾಗೆ ಮಾಡುವುದು ತುಂಬಾ ಸರಳ. ಅದೇ ನೀವು ನಿಮಗೆ ನೀಡಿರುವ ಸರಳವಾದ ಪ್ರಕ್ರಿಯೆಯನ್ನು ವಿರೋಧಿಸಿ, ಅದರೊಂದಿಗೆ ಹೋರಾಡಿದರೆ, ಆ ಪ್ರಕ್ರಿಯೆಯು ಬಹಳ ಕಠಿಣವಾಗುತ್ತದೆ.

ನೀವು ಈ ಮೂರು ವಿಷಯಗಳನ್ನು ಕಾಪಾಡಿಕೊಂಡು ಬಂದರೆ, ಆಧ್ಯಾತ್ಮಿಕ ಪ್ರಕ್ರಿಯೆಯು ಅದ್ಭುತವಾಗಿ ಕೆಲಸ ಮಾಡುತ್ತದೆ. ಪ್ರತಿ ದಿನ ನೀವಿದರತ್ತ ಗಮನಹರಿಸಬೇಕು. 'ಓಹ್! ನನಗದು ಗೊತ್ತು ಬಿಡು.' ಎಂದು ನೀವಂದುಕೊಂಡರೆ– ಆ ರೀತಿಯಲ್ಲಿ ಅದು ಕೆಲಸ ಮಾಡುವುದಿಲ್ಲ. ಇದು ಬರೀ ನೀವು ಯೋಗದ ಕ್ರಿಯೆಯನ್ನು ಮಾಡುವ ಮೊದಲು ಮಾಡುವಂತದ್ದಲ್ಲ. ನೀವು ಪ್ರತಿದಿನ ಬೆಳಗ್ಗೆ ಎದ್ದಾಗ 'ನಾನಿವತ್ತು ಈ ರೀತಿಯಲ್ಲಿ ಇರುತ್ತೇನೆಯೇ?' ಎನ್ನುವುದನ್ನು ಪರೀಕ್ಷಿಸಿ ನೋಡಿ. ಹಾಗೆ ಮಾಡಿದಾಗ ಅದು ಅದ್ಭುತವಾಗಿ ಕೆಲಸ ಮಾಡುತ್ತದೆ. ನೀವು ಏನನ್ನೋ ಬಯಸಿದ ಕಾರಣದಿಂದಷ್ಟೇ ಅದು ನಿಮಗೆ ದೊರೆಯುವುದಿಲ್ಲ. ನೀವು ಸರಿಯಾದದ್ದನ್ನು ಮಾಡಬೇಕು. ಹಾಗೆ ಮಾಡಿದಾಗ ಮಾತ್ರ ನಿಮ್ಮ ಆಶಯವು ನೆರವೇರುವುದು.

ನೀವಿದೊಂದನ್ನು ಕಾಪಾಡಿಕೊಂಡು ಹೋದರೆ, ಇಡೀ ಪ್ರಕ್ರಿಯೆಯು ನಿಮ್ಮನ್ನು ಒಳಗೂಡಿಸಿಕೊಳ್ಳುವಿಕೆಯ ಸ್ಥಿತಿಗೆ ಕೊಂಡೊಯ್ಯುತ್ತದೆ. ಇದು ನನ್ನ ವಿಚಾರ ಅಥವಾ ಇದು ನಿಮಗಾಗಿ ನನ್ನ ಆಶಯವೆನ್ನುವ ಕಾರಣಕ್ಕಲ್ಲ, ಆದರೆ ಇದು ಆ ಸೃಷ್ಟಿಕರ್ತನ ಸ್ವಭಾವವೇ ಆಗಿರುವ ಕಾರಣಕ್ಕಾಗಿದೆ.

ಜಯ ಜಯ ರಾಮ ಜೈ ಶ್ರೀರಾಮ

ಜೈ ಶ್ರೀ ರಾಮ ಎಂಬ ರಾಮನಾಮ ಕಿವಿಗೆ ಬಿದ್ದರೆ ಸಾಕು ರಾಮಭಕ್ತರು ರೋಮಾಂಚನಗೊಳ್ಳುತ್ತಾರೆ. ಸಾಕ್ಷಾತ್ ಶ್ರೀರಾಮನನ್ನೇ ತಮ್ಮ ಮನಸ್ಸಿನಲ್ಲಿ ಸಾಕ್ಷಾತ್ಕರಿಸಿಕೊಂಡು ಪರಮಾನಂದಿತರಾಗುತ್ತಾರೆ. ತಮ್ಮ ಜೀವ–ಜೀವನವೆಲ್ಲಾ ರಾಮನಾಮಾಮೃತದಿಂದ ಪಾವನವಾಯಿತೆಂದು ಸಂತುಷ್ಟಗೊಳ್ಳುತ್ತಾರೆ. ಪವಿತ್ರ ತೀರ್ಥಕ್ಷೇತ್ರವಾದ ಕಾಶಿಯಲ್ಲಿ ದೇಹತ್ಯಾಗ ಮಾಡುವವರಿಗೆ ಕಾಶಿ ವಿಶ್ವನಾಥನೇ ಅವರ ಕಿವಿಯಲ್ಲಿ ರಾಮನಾಮ ಉಪದೇಶ ಮಾಡುತ್ತಾನೆಂಬ ನಂಬಿಕೆ ಭಾರತೀಯರಲ್ಲಿದೆ.

ಶ್ರೀರಾಮ ರಾಮೇತಿರಮೇರಾಮೇ ಮನೋರಮೇ।
ಸಹಸ್ರನಾಮ ತತ್ತುಲ್ಯಂ ರಾಮನಾಮ ವರಾನನೇ॥

ರಾಮ ಎಂಬ ಒಂದೇ ನಾಮ ವಿಷ್ಣುವಿನ ಸಹಸ್ರನಾಮಗಳಿಗೆ ಸಮವೆಂದು ಪುರಾಣಗಳೇ ಸಾರಿ ಹೇಳುತ್ತವೆ.

ಸರ್ವೋತ್ತಮನೆಂದರೆ, ಪರಿಪೂರ್ಣ ಶ್ರೇಷ್ಠ ಮನುಷ್ಯನೆಂದರೆ, ಮನುಷ್ಯನಿಂದಲೇ ದೇವನಾದವನೆಂದರೆ ಅವನೇ ರಾಮ. ಅದೇ ರಾಮಶಕ್ತಿ. ರಾಮನಾಮದ ಧೀಶಕ್ತಿ. ರಾಮಂ ಮಾನುಷಂ ಮನ್ಯೆ ಎನ್ನುವುದರ ಮೂಲಕ ವಾಲ್ಮೀಕಿ ಮಹರ್ಷಿಗಳು ರಾಮಾಯಣದಲ್ಲಿ ಶ್ರೀರಾಮನನ್ನು ಓರ್ವ ಸಾಮಾನ್ಯ ಮನುಷ್ಯನಾಗಿಯೇ ಚಿತ್ರಿಸಿ, ಸಾರ್ಥಕ ಬದುಕಿನ ಅವನ ನಡವಳಿಕೆಯಿಂದಲೇ ದೇವನನ್ನಾಗಿಸುತ್ತಾರೆ. ಇಡೀ ಸಂಪೂರ್ಣ ರಾಮಾಯಣವನ್ನೇ ನಾವು ಅವಲೋಕಿಸಿದರೆ ರಾಮನ ಚಿತ್ರಣದಲ್ಲೇ ಕುಟುಂಬ ವಾತ್ಸಲ್ಯದ ಚಿತ್ರಣವಿರುವುದನ್ನು ಕಾಣಬಹುದು. ದೇವನಾಗಿಯೂ ರಾಮ ತಾನೊಬ್ಬನೇ ಎಲ್ಲಿಯೂ ಪೂಜಿಸಿಕೊಳ್ಳುವುದಿಲ್ಲ. ಸೀತೆ ಮಾತ್ರವಲ್ಲದೆ ಆಂಜನೇಯ, ಲಕ್ಷ್ಮಣ, ಭರತ, ಶತ್ರುಘ್ನರೊಡಗೂಡಿದ ದೇವತಾ ಸ್ವರೂಪವೇ ಇವತ್ತಿಗೂ ನಮ್ಮ ಕಣ್ಮುಂದಿನ ಚಿತ್ರವಾಗಿದೆ.

ಗುಹನಲ್ಲಿ ಸೋದರ ವಾತ್ಸಲ್ಯ ತೋರಿದ, ಶಿಲೆಯಾದ ಅಹಲ್ಯೆಯನ್ನು ಉದ್ಧರಿಸಿದ, ಶಬರಿಯ ಎಂಜಲನ್ನು ತಿಂದ, ಆಯಸ್ಸು ಮುಗಿಯುವ ಮುನ್ನವೇ ಮಂತ್ರಿ ಸುಮಂತ್ರನನ್ನು ಮರಣಿಸುವಂತೆ ಮಾಡಿದ ಯಮನ ವಿರುದ್ಧವೇ ಸಮರ ಸಾರಿ ಸುಮಂತ್ರನನ್ನು ಬದುಕಿಸಿದ ಅಳಿಲಿನ ಸೇವೆಯನ್ನೂ ಸಹ ಮುಖ್ಯವಾಗಿ ಕಂಡ ರಾಮನ ಮಹಾ ವ್ಯಕ್ತಿತ್ವಕ್ಕೆ ಸಾಟಿಯುಂಟೆ?

ರಾಮನ ಆದರ್ಶ ಬದುಕು ಅಂಥಾದ್ದು. ಹಾಗಾಗಿ ರಾಮನಾಮ ಸೀಮೋಲಂಘನ, ಸಾಗರೋಲ್ಲಂಘನವಾಗಿ ದೇಶದಲ್ಲಷ್ಟೇ ಅಲ್ಲದೆ ವಿದೇಶಗಳಲ್ಲೂ ರಾಮ ಆರಾಧ್ಯ ದೈವವಾಗಿದ್ದಾನೆ. ರಾಮನನ್ನು ದಕ್ಷಿಣ ಏಷ್ಯಾದ ಸಾರ್ವಕಾಲಿಕ ಆದರ್ಶವೆಂದು ಖ್ಯಾತ ಸಂಶೋಧಕ, ವಿದ್ವಾಂಸ ಪ್ರೊ.ಡಬ್ಲ್ಯೂ.ಹೆಚ್. ಸ್ಟಟರ್ ಹೀಮ್ ಹೇಳಿದ್ದು, ಬಾಲಿ ದ್ವೀಪದ ರಾಮನ ಪೂಜೆಯ ಬಗ್ಗೆ ವಿವರಿಸುತ್ತಾ ಇಲ್ಲಿ ರಾಮ ಕಥೆಯ ಸಾರಾಂಶ ಗೊತ್ತಿಲ್ಲದ ಒಬ್ಬ ಹುಡುಗನನ್ನೂ ಕಾಣಲಾರಿರಿ. ಬೆಳೆದಂತೆಲ್ಲ ಅದನ್ನು ಸಂಪೂರ್ಣವಾಗಿ ತಿಳಿದುಕೊಂಡು ಜೀವನದಲ್ಲಿ ಅಳವಡಿಸಿಕೊಳ್ಳುವ ಪಾಠವನ್ನು ಇಲ್ಲಿ ಹೇಳಿಕೊಡಲಾಗುತ್ತದೆ ಎಂದು ಅವರು ಉಲ್ಲೇಖಿಸಿದ್ದಾರೆ.

ರಾಮಾಯ ರಾಮ ಭದ್ರಾಯಾ
ರಾಮಚಂದ್ರಾಯ ವೇಧಸೇ
ರಘುನಾಥಾಯಾ ನಾಥಾಯಾ
ಸೀತಾಯಾ ಪತಯೇ ನಮಃ

ಇದು ರಾಮಾಯಣದಲ್ಲಿ ಬರುವ ದೃಷ್ಟಾಂತ, ಇಕ್ಷ್ವಾಕು ವಂಶದ ಅರ್ಥಾತ್ ಸೂರ್ಯವಂಶ ಸಾರ್ವಭೌಮ ದಶರಥ ಮಹಾರಾಜನಿಗೆ ಕೌಸಲ್ಯೆ, ಸುಮಿತ್ರೆ ಮತ್ತು ಕೈಕೇಯಿ ಎಂಬ ಮೂವರು ಪತ್ನಿಯರು. ಆದರೆ ಯಾರಿಗೂ ಮಕ್ಕಳಿರಲಿಲ್ಲ. ಹಾಗಾಗಿ ಕುಲಗುರು ವಶಿಷ್ಠ ಮಹರ್ಷಿ ಮತ್ತು ಪ್ರಧಾನ ಮಂತ್ರಿ ಸುಮಂತ್ರರ ಸಲಹೆಯ ಮೇರೆಗೆ ಪುತ್ರಕಾಮೇಷ್ಠಿಯಾಗವನ್ನು ಮಾಡಿದಾಗ ಮಹಾವಿಷ್ಣುವಿನ ಅನುಗ್ರಹದ ಯಾಗದ ಪ್ರಸಾದವನ್ನು ದಶರಥ ಮಹಾರಾಜ ಸೇವಿಸಿ ಉಳಿದಿದ್ದನ್ನು ತನ್ನ ಮೂವರೂ ಪತ್ನಿಯರಿಗೂ ಹಂಚಿದ. ಪರಿಣಾಮ ಕಾಲಕ್ರಮೇಣ ಮೂವರೂ ಗರ್ಭವತಿಯರಾಗಿ ಎಲ್ಲರೂ ಗಂಡು ಮಕ್ಕಳಿಗೆ ಜನ್ಮ ನೀಡುತ್ತಾರೆ. ಕೌಸಲ್ಯೆಯ ಹೊಟ್ಟೆಯಲ್ಲಿ ರಾಮ ಜನಿಸಿದರೆ, ಸುಮಿತ್ರೆಯಲ್ಲಿ ಲಕ್ಷ್ಮಣ ಮತ್ತು ಕೈಕೇಯಿಯಲ್ಲಿ ಭರತ–ಶತ್ರುಘ್ನ ಅವಳಿ ಮಕ್ಕಳು ಜನಿಸುತ್ತಾರೆ.

ಶ್ರೀರಾಮ ಚೈತ್ರಮಾಸದ ಶುಕ್ಲಪಕ್ಷ ನವಮಿಯಂದು ಮಧ್ಯಾಹ್ನ ಪುನರ್ವಸು ನಕ್ಷತ್ರದಲ್ಲಿ ಮಹಾ ತೇಜಸ್ವಿಯಾಗಿ, ಜಗದ ಬೆಳಕಾಗಿ ಅವತರಿಸಿದ್ದು ಅದು ಶ್ರೀರಾಮ ನವಮಿಯಾಗಿ ಜಗತ್ತಿನಲ್ಲಿ ಪೂಜನೀಯ ಸ್ಥಾನ ಪಡೆದಿದೆ. ರಾಮಾವತಾರವು ವಿಷ್ಣುವಿನ ದಶಾವತಾರಗಳಲ್ಲಿ ಒಂದಾಗಿದ್ದು ಅನುಕ್ರಮಣಿಕೆಯಲ್ಲಿ ಏಳನೆಯದಾಗಿದೆ.

ಭಾರತೀಯ ಸಂಸ್ಕೃತಿ, ಸಂಪ್ರದಾಯ, ಪರಂಪರೆಗಳಲ್ಲಿ ಸಂಖ್ಯಾಶಾಸ್ತ್ರಕ್ಕೂ ತನ್ನದೇ ಆದ ಮಹತ್ವವಿದೆ. ಆ ಪ್ರಕಾರ ಸಂಖ್ಯೆ 'ಏಳು' ವಿಶೇಷ ಮಹತ್ವ ಪಡೆದುಕೊಂಡಿದೆ. ರಾಮನ ವಿಷಯದಲ್ಲೂ ಏಳು ಬಹಳ ಮಹತ್ವವೆನಿಸಿದೆ. ವಾಲ್ಮೀಕಿ ಮಹರ್ಷಿಗಳಿಂದ ರಚಿತವಾದ ರಾಮಾಯಣ ಕೂಡ ಬಾಲಕಾಂಡ, ಅಯೋಧ್ಯಾಕಾಂಡ, ಅರಣ್ಯಕಾಂಡ, ಕಿಷ್ಕಿಂದಾ ಕಾಂಡ, ಸುಂದರಕಾಂಡ, ಯುದ್ಧಕಾಂಡ ಹಾಗೂ ಉತ್ತರಕಾಂಡಗಳೆಂಬ ಏಳು ಕಾಂಡಗಳಲ್ಲಿದೆ. ಶ್ರೀರಾಮನ ಜನ್ಮ ನಕ್ಷತ್ರ ಪುನರ್ವಸು. ಇದು ಸಪ್ತರ್ಷಿ ಮಂಡಲದಲ್ಲಿ ಏಳನೆಯದು. ವಾಲ್ಮೀಕಿ ರಾಮಾಯಣದ ಮೂಲವನ್ನಿಟ್ಟುಕೊಂಡು ದೇಶದಲ್ಲಿ ಸಾವಿರಾರು ರಾಮಕಥೆಗಳು, ಕಾವ್ಯಗಳು ರಚನೆಗೊಂಡಿವೆ. ಅವುಗಳಲ್ಲಿ 'ಸಪ್ತರ್ಷಿ ರಾಮಾಯಣ'ವೂ ಒಂದು. ನಮ್ಮಲ್ಲಿ ಕುವೆಂಪು ಅವರ 'ಶ್ರೀ ರಾಮಾಯಣ ದರ್ಶನಂ' ವೀರಪ್ಪ ಮೊಯಿಲಿ ಅವರ 'ಶ್ರೀ ರಾಮಾಯಣ ಮಹಾನ್ವೇಷಣಂ' ಮಹಾ



ಕಾವ್ಯ ಗಳು ಮತ್ತು ಡಿ.ವಿ.ಜಿ. ಅವರ 'ಶ್ರೀ ರಾಮ ಪರಿವೀಕ್ಷಣಂ' ಮುಂತಾದ ಮಹತ್ಕೃತಿಗಳು ಮುಖ್ಯವೆನಿಸಿವೆ.

ಒಟ್ಟಿನಲ್ಲಿ ಭಾರತೀಯ ಸಂಸ್ಕೃತಿಯಲ್ಲಿ ರಾಮ ಹಾಸು ಹೊಕ್ಕಾಗಿದ್ದು ಈ ದೇಶದ ಜನರ ಬಹುದೊಡ್ಡ ಆದರ್ಶವಾಗಿದ್ದು ಮರ್ಯಾದಾ ಪುರುಷೋತ್ತಮನೆಂದೇ ಪೂಜಿಸಲ್ಪಡುತ್ತಿದ್ದಾನೆ. ಇಂಥ ರಾಮ ಜನಿಸಿದ ಮಹಾ ಸುದಿನವಾದ 'ಶ್ರೀರಾಮ ನವಮಿಗೆ' ಈ ದೇಶದಲ್ಲಿ ವಿಶೇಷ ಮಹತ್ವ ಉಂಟು. ಹಾಗಾಗಿ ರಾಮ ಹುಟ್ಟಿದ ಈ ಪೂಜ್ಯ ದಿನವನ್ನು ಪೂಜನೀಯವಾಗಿ ದೇಶದೆಲ್ಲೆಡೆ ಶ್ರದ್ಧಾ ಭಕ್ತಿಯಿಂದ ಆಚರಿಸಲಾಗುತ್ತದೆ. ರಾಮ ನಾಮಾಮೃತದ ಜೊತೆ ಜೊತೆಗೆ ವಿವಿಧ ಫಲಾಮೃತವನ್ನು ನಾಲಿಗೆಯಲ್ಲಿ ಹರಿದಾಡಿಸಿ ಬಾಯ್ಚಪ್ಪರಿಸುವ ಭಕ್ತಿ ಸುಧೆಯ ಸಿಹಿ ಜೇನಿನ ಹಬ್ಬವಿದು.

ಸುಡು ಬಿಸಿಲಿನ ಬೇಸಿಗೆಯಲ್ಲೂ ಸುಮಧುರ ತಂಪು ಚೆಲ್ಲುವ ಸುವಾಸಿತ ತಾಜಾ ಹಣ್ಣುಗಳ ಪಾನಕ ಶ್ರೀರಾಮನವಮಿಯ ಆಕರ್ಷಣೆ. ಬೇಲದ ಹಣ್ಣು, ಕರಬೂಜ, ಕಲ್ಲಂಗಡಿ ಹಣ್ಣುಗಳ ಪಾನಕ ಮತ್ತು ನೀರು ಮಜ್ಜಿಗೆ ಕುಡಿದು ವಿವಿಧ ಬಗೆಯ ಕೋಸಂಬರಿಯನ್ನು ಸೇವಿಸುವುದೇ ಒಂದು ಆನಂದ. ಬೀದಿ ಬೀದಿಗಳಲ್ಲಿ, ಗಲ್ಲಿ–ಗಲ್ಲಿಗಳಲ್ಲಿ, ಕೇರಿ ಕೇರಿಗಳಲ್ಲಿ ಪಾನಕ ಮತ್ತು ನೀರು ಮಜ್ಜಿಗೆ ಹಾಗೂ ಕೋಸಂಬರಿಯದೇ ಸಮಾರಾಧನೆ. ರಾಮ ಭಕ್ತರಿಂದ ಎಲ್ಲೆಡೆಯೂ ಇದು ಉಚಿತ ವಿತರಣೆ. ಅದರಲ್ಲೂ ಗ್ರಾಮೀಣ ಪ್ರದೇಶದ ಹಳ್ಳಿಗಳಲ್ಲಿನ ಅರಳಿಕಟ್ಟೆಗಳಲ್ಲಿ ದೊಡ್ಡ ದೊಡ್ಡ ಹಂಡೆಗಳಲ್ಲಿ ಫಲಾಮೃತಗಳನ್ನು ವಿತರಿಸುವುದನ್ನು ಸವಿಯುವುದಿರಲಿ ಅದನ್ನು ನೋಡುವುದೇ ಒಂದು ಮಹದಾನಂದ. ಶ್ರೀರಾಮ ಮಂದಿರಗಳಲ್ಲಿ ಮತ್ತು ಶ್ರೀರಾಮ ದೇವಸ್ಥಾನಗಳಲ್ಲಿ ಸೀತಾ, ಲಕ್ಷ್ಮಣ, ಆಂಜನೇಯ ಸಮೇತನಾಗಿ ಸರ್ವಾಲಂಕಾರ ಭೂಷಿತನಾಗಿ ಶ್ರೀರಾಮ ದೇವರು ಕಾಣಿಸಿಕೊಳ್ಳುವ ಚೆಲುವನ್ನು ಕಣ್ತುಂಬಿಕೊಳ್ಳುವುದೇ ಒಂದು ಮಹಾಹಬ್ಬ.

ಇದಿಷ್ಟೇ ಶ್ರೀರಾಮನವಮಿ ಹಬ್ಬವಲ್ಲ. ಇದಕ್ಕೆ ಲ್ಲಕ್ಕೂ ಪ್ರಭಾವಳಿಯಾಗಿ 'ಎಲ್ಲೆಲ್ಲು ಸಂಗೀತವೇ, ಎಲ್ಲೆಲ್ಲೂ ಸೌಂದರ್ಯವೇ, ಕೇಳುವ ಕಿವಿಯಿರಲು ನೋಡುವ ಕಣ್ಣಿರಲು ಎಲ್ಲೆಲ್ಲೂ ಸಂಗೀತವೇ......' ಎಂಬಂತೆ ದೊಡ್ಡ ದೊಡ್ಡ ಐಟಿ, ಬಿಟಿ ನಗರಗಳಿಂದ ಹಿಡಿದು ಸಣ್ಣಪುಟ್ಟ ಗ್ರಾಮಗಳಲ್ಲೂ ರಾಮನವಮಿ ಸಂದರ್ಭದಲ್ಲಿ ಸಂಗೀತೋತ್ಸವಗಳು ಜರುಗುತ್ತವೆ.

> ಸರ್ವೋತ್ತಮನೆಂದರೆ, ಪರಿಪೂರ್ಣ ಶ್ರೇಷ್ಠ ಮನುಷ್ಯನೆಂದರೆ, ಮನುಷ್ಯನಿಂದಲೇ ದೇವನಾದವನೆಂದರೆ ಅವನೇ ರಾಮ. ಅದೇ ರಾಮಶಕ್ತಿ. ರಾಮನಾಮದ ಧೀಶಕ್ತಿ. ರಾಮಂ ಮಾನುಷಂ ಮನ್ಯೆ ಎನ್ನುವ ಮೂಲಕ ವಾಲ್ಮೀಕಿ ಮಹರ್ಷಿಗಳು ರಾಮಾಯಣದಲ್ಲಿ ಶ್ರೀರಾಮನನ್ನು ಓರ್ವ ಸಾಮಾನ್ಯ ಮನುಷ್ಯನಾಗಿಯೇ ಚಿತ್ರಿಸಿ, ಸಾರ್ಥಕ ಬದುಕಿನ ಅವನ ನಡವಳಿಕೆಯಿಂದಲೇ ದೇವನನ್ನಾಗಿಸುತ್ತಾರೆ.

ರಾಜ್ಯೋತ್ಸವ, ಗಣೇಶೋತ್ಸವ ಹೊರತುಪಡಿಸಿದರೆ ಅತಿ ಹೆಚ್ಚು ಸಂಗೀತೋತ್ಸವಗಳು ನಡೆಯುವುದು ಶ್ರೀರಾಮನವಮಿ ಸಂದರ್ಭದಲ್ಲೇ. ಅದೂ ಎಲ್ಲವೂ ರಾಮ ಭಕ್ತಿಯ ಪರಾಕಾಷ್ಠೆಯ ಸಂಗೀತ ವೈಭವವೇ ಆಗಿರುತ್ತದೆ. ಇವತ್ತು ದೇಶಾದ್ಯಂತ ನಡೆಯುತ್ತಿರುವ ಶ್ರೀರಾಮನವಮಿ ಸಂಗೀತೋತ್ಸವದ ಪರಂಪರೆ ರಾಜ್ಯದಲ್ಲಿ ಮೊದಲು ಶುರುವಾದದ್ದು ಸಾಂಸ್ಕೃತಿಕ ನಗರ ಮೈಸೂರಿನಲ್ಲೆಂಬ ಸತ್ಯ ಎಷ್ಟೋ ಮಂದಿಗೆ ತಿಳಿದಿರಲಾರದು. ಇಂದಿಗೂ ಮೈಸೂರು ನಗರ ಸೇರಿದಂತೆ ಇಲ್ಲಿನ ಬಹಳಷ್ಟು ಬಡಾವಣೆಗಳಲ್ಲಿ ಒಳ್ಳೊಳ್ಳೆ ಸಂಗೀತೋತ್ಸವಗಳು ದೇಶ ವಿದೇಶಗಳ ಮಹಾನ್ ಸಂಗೀತಗಾರರಿಂದ ಜರುಗುತ್ತವೆ. ಇವುಗಳಲ್ಲಿ ಮಹಾನ್ ಸಂಗೀತ ದಿಗ್ಗಜ ಮೈಸೂರು ಬಿ.ವಾಸುದೇವಾಚಾರ್ಯರ ಮಾರ್ಗದರ್ಶನದಲ್ಲಿ 1918ರಲ್ಲಿ ಮತ್ತೋರ್ವ ಸಂಗೀತ ದಿಗ್ಗಜ ಬಿಡಾರಂ ಕೃಷ್ಣಪ್ಪನವರು ಆರಂಭಿಸಿದ ಬಿಡಾರಂ ಕೃಷ್ಣಪ್ಪ ರಾಮ ಮಂದಿರದ ಸಂಗೀತೋತ್ಸವ ಹೆಚ್ಚು ಹೆಸರುವಾಸಿ. ಇವತ್ತಿಗೂ ಅಂಥ ಕೀರ್ತಿಯನ್ನು ಅದು ಉಳಿಸಿಕೊಂಡೇ ಇದೆ. ಇಂಥ ರಾಮನವಮಿ ಸಂಗೀತೋತ್ಸವಗಳಲ್ಲಿ ಹಿಂದೂ, ಮುಸ್ಲಿಂ ಮತ್ತು ಕ್ರೈಸ್ತ ಕಲಾವಿದರೆಲ್ಲರೂ ಹಾಡುತ್ತಾರೆ ಹಾಗಾಗಿ ಇದೊಂದು ರೀತಿ ಭಾವೈಕ್ಯತೆಯ ಸಂಗೀತೋತ್ಸವವೆಂದೇ ಹೇಳಬಹುದು. ರಾಮನಾಮ ಪಾಯಸದಲ್ಲಿ ಅಂತಹ ಶಕ್ತಿ ಉಂಟು. ನ್ಯಾಯ, ನೀತಿ, ಧರ್ಮ, ಸತ್ಯ, ಪ್ರಾಮಾಣಿಕತೆ, ಮಾನವೀಯತೆ ಇವುಗಳೆಲ್ಲದರ ಪುಣ್ಯ ಸಂಗಮವೇ ಶ್ರೀರಾಮ. ಇವ ಜಗದಾದರ್ಶದ ಪುಣ್ಯಾರಾಮ. ಇಂಥ ಮಹಾಮಹಿಮ ಜನಿಸಿದ 'ಶ್ರೀರಾಮ ನವಮಿ' ಪುಣ್ಯದಿನ. ಇದು ಸರ್ವರಿಗೂ ಸುಖ ಶಾಂತಿ ಸಮೃದ್ಧಿ ತರಲಿ. ಭಾರತದಲ್ಲಿ ಶ್ರೀರಾಮ ಮತ್ತೆ ಮತ್ತೆ ಹುಟ್ಟಿ ಬರುತ್ತಲೇ ಇರಲಿ.



ಬನ್ನೂರು ಕೆ.ರಾಜು
ಸಾಹಿತಿ, ಪತ್ರಕರ್ತ
ಮೊ.94815 33167

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಸರ್ಕಾರಿ ಉದ್ಯೋಗದ ಜೊತೆಗೆ ಸ್ವ-ಉದ್ಯೋಗದ ಆಲೋಚನೆಯೂ ನಿಮಗಿರಲಿ

ವಿದ್ಯಾರ್ಥಿಗಳಿಗೆ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಡಿ.ಉದಯಕುಮಾರ್ ಕಿವಿಮಾತು



ಮೈಸೂರಿನ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ(ಡಯಟ್)ಯಲ್ಲಿ ಆಯೋಜಿಸಿದ್ದ ಜಿಲ್ಲಾ ವೃತ್ತಿಪರ ಮತ್ತು ವೃತ್ತಿ ಮಾರ್ಗದರ್ಶನ ಘಟಕ ಮತ್ತು ಕೆರಿಯರ್ ಮೇಳವನ್ನು ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಡಿ.ಉದಯ್‌ಕುಮಾರ್ ಉದ್ಘಾಟಿಸಿದರು. ಡಯಟ್ ಪ್ರಾಂಶುಪಾಲ ಸಿ.ಆರ್.ನಾಗರಾಜಯ್ಯ ಇತರರಿದ್ದಾರೆ.

ಮೈಸೂರು,ಮಾ.26(ಎಂಟಿವೈ)- ವಿದ್ಯಾರ್ಥಿಗಳು ಸರ್ಕಾರಿ ಉದ್ಯೋಗದ ಗುರಿಯೊಂದಿಗೆ ಸ್ವ-ಉದ್ಯೋಗ ಮಾಡುವ ಆಲೋಚನೆಯನ್ನು ಹೊಂದಿರಬೇಕು ಎಂದು ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಡಿ.ಉದಯ್ ಕುಮಾರ್ ಸಲಹೆ ನೀಡಿದ್ದಾರೆ.

ಮೈಸೂರಿನ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ(ಡಯಟ್) ವಸಂತ್ ಮಹಲ್ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಜಿಲ್ಲಾ ವೃತ್ತಿಪರ ಮತ್ತು ವೃತ್ತಿ ಮಾರ್ಗದರ್ಶನ ಘಟಕ ಮತ್ತು ಕೆರಿಯರ್ ಮೇಳ ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಸರ್ಕಾರಿ ಉದ್ಯೋಗಕ್ಕೆ ಪರ್ಯಾಯವಾಗಿ ಸ್ವಾವಲಂಬಿ ಕೆಲಸಗಳತ್ತಲೂ ಯೋಚಿಸಬೇಕು. ಕೌಶಲಧಾರಿತ ಉದ್ಯೋಗಗಳನ್ನು ಪಡೆಯಲು ಶ್ರಮಿಸಬೇಕು. 10 ಸಾವಿರ ಸರ್ಕಾರಿ ಉದ್ಯೋಗಗಳಲ್ಲಿ ಕೇವಲ 20 ಮಂದಿ ಮಾತ್ರ ಕೆಲಸ ಗಿಟ್ಟಿಸಿಕೊಳ್ಳುವ ಪರಿಸ್ಥಿತಿ ಇದೆ. ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಿದ ಶೇ.0.02ರಷ್ಟು ಮಂದಿ ಮಾತ್ರ ಸರ್ಕಾರಿ ಉದ್ಯೋಗ ಪಡೆದುಕೊಳ್ಳಲು ಸಾಧ್ಯವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಖಾಸಗಿ ಉದ್ಯಮಗಳು, ಕೌಶಲಾಧಾರಿತ ಕೆಲಸದ ಕಡೆಗೆ ಆಸಕ್ತಿ ವಹಿಸಬೇಕು ಎಂದರು.

ಅವಕಾಶಗಳು ತಾನಾಗೇ ಬರುವುದಿಲ್ಲ. ಹುಡುಕಿಕೊಳ್ಳಬೇಕು. ಇಂಗ್ಲಿಷ್ ಮತ್ತು ಕನ್ನಡ ಭಾಷಾಂತರ ಕೌಶಲವಿದ್ದರೂ ಮಾಸಿಕ 15 ಸಾವಿರದಿಂದ 50 ಸಾವಿರ ರೂ. ವರೆಗೂ ದುಡಿಯಬಹುದು. ಸ್ಪರ್ಧಾತ್ಮಕ ಯುಗವಾಗಿದ್ದು, ಪರೀಕ್ಷೆಗಳ ಬಗ್ಗೆಯೂ ಆಸಕ್ತಿ ವಹಿಸಬೇಕು. ಉತ್ತೀರ್ಣರಾಗದಿದ್ದರೆ ನಿರಾಶರಾಗಬಾರದು ಎಂದು ತಿಳಿಸಿದರು.

ಸರ್ಕಾರಿ ಕೆಲಸ ಸಿಗದ ಪರಿಚಯದ ಯುವಕನೊಬ್ಬ ಪ್ರವಾಸೋದ್ಯಮ ಕ್ಷೇತ್ರದಲ್ಲಿ ಮಾಸಿಕ 5 ಲಕ್ಷ ಸಂಪಾದನೆ ಮಾಡುತ್ತಿದ್ದಾನೆ. ಬೆಂಗಳೂರಿನಲ್ಲಿ ತಂತ್ರಜ್ಞಾನ ಮತ್ತು ಸೇವಾ ಕ್ಷೇತ್ರದಲ್ಲಿ ವಿಫುಲ ಅವಕಾಶಗಳಿದ್ದರೆ, ಮೈಸೂರಿನಲ್ಲಿ ಪ್ರವಾಸೋದ್ಯಮ, ಇವೆಂಟ್ ಮ್ಯಾನೇಜ್‌ಮೆಂಟ್‌ನಲ್ಲಿ ಅವಕಾಶಗಳಿವೆ. ನೆರೆಯ ಜಿಲ್ಲೆ ಕೊಡಗಿನಲ್ಲಿ ಮೂರುವರೆ ಸಾವಿರ ಹೋಮ್‌ಸ್ಟೇಗಳು ಹಾಗೂ ರೆಸಾರ್ಟ್‌ಗಳಿವೆ. ಅಲ್ಲಿ ಕೆಲಸ ಮಾಡುವವರು ಬಿಹಾರ, ಪಶ್ಚಿಮ ಬಂಗಾಳದವರು. ಕಠಿಣ ಕೆಲಸಗಳನ್ನು ಮಾಡುವ, ಇಲ್ಲವೇ ಸಂಘಟಿಸುವ ಉದ್ಯೋಗವನ್ನು ಹುಡುಕಿಕೊಳ್ಳಬೇಕು ಎಂದರು.

ಸರ್ಕಾರಿ ಬಿ.ಇಡಿ ಕಾಲೇಜಿನ ಉಪನ್ಯಾಸಕ ಅಮಿತ್ ಮಾತನಾಡಿ, 'ವೃತ್ತಿ ಮೇಳ' ಅತ್ಯುತ್ತಮ ಕಾರ್ಯಕ್ರಮವಾಗಿದ್ದು, ವಿದ್ಯಾರ್ಥಿಗಳಿಗೆ ಉದ್ಯೋಗ ಕುರಿತಂತೆ ಉಪಯುಕ್ತ ಮಾಹಿತಿ ಒದಗಿಸಲಿದೆ. ನಿರುದ್ಯೋಗ ಸಮಸ್ಯೆ ದೇಶದಲ್ಲಿ ಅತಿ ದೊಡ್ಡ ಸಮಸ್ಯೆಯಾಗಿದೆ. ನಿರುದ್ಯೋಗ ಸಮಸ್ಯೆಗೆ ಕೌಶಲ್ಯಗಳ ಕೊರತೆ ಕಾರಣ. ನಮ್ಮಲ್ಲಿರುವ ಮಾನವ ಸಂಪನ್ಮೂಲವನ್ನು ಅತ್ಯುತ್ತಮವಾಗಿ ಬಳಸಿಕೊಂಡು ದೇಶದ ಪ್ರಗತಿಗೆ ಕೈಜೋಡಿಸಬೇಕು ಎಂದರು.

ಮೇಳದಲ್ಲಿ 22 ಇಲಾಖೆಗಳ ಮಳಿಗೆಗಳಿದ್ದು, ವಿದ್ಯಾರ್ಥಿಗಳಿಗೆ ಅಗತ್ಯ ಮಾರ್ಗದರ್ಶನ ನೀಡಿದವು. ವಿವಿಧ ಶಾಲಾ ಕಾಲೇಜುಗಳಿಂದ 1255 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ನಂತರ ಯಾವ ವಿಷಯವನ್ನು ಆಯ್ಕೆ ಮಾಡಿಕೊಳ್ಳಬೇಕು ಮತ್ತು ಯಾವ ವೃತ್ತಿಯನ್ನು ಆಯ್ಕೆ ಮಾಡಿಕೊಳ್ಳಬೇಕಾದರೆ ಯಾವ ವಿಷಯವನ್ನು ಆಯ್ಕೆ ಮಾಡಿಕೊಳ್ಳಬೇಕು ಎಂಬ ಮಾಹಿತಿಯನ್ನು ಮೇಳದಲ್ಲಿ ಆಯೋಜನೆ ಮಾಡಲಾಗಿತ್ತು.

ಕಾರ್ಯಕ್ರಮದಲ್ಲಿ ಡಯಟ್ ಪ್ರಾಂಶುಪಾಲ ಸಿ.ಆರ್.ನಾಗರಾಜಯ್ಯ, ಉಪನ್ಯಾಸಕರಾದ ನಂಜುಂಡ ಆರಾಧ್ಯ, ಎಂ.ಗಾಯತ್ರಿ, ಹೆಚ್.ಚನ್ನಪ್ಪ, ಡಿ.ಆರ್.ಅಮಿತ್, ಮಧು, ಶೋಭಾ, ಪುಷ್ಪಲತಾ, ಸಿ.ಚಂದ್ರಶೇಖರ್, ಉದ್ಯೋಗ ಮತ್ತು ಕೈಗಾರಿಕಾ ಇಲಾಖೆ ನಿರ್ದೇಶಕರಾದ ರಾಣಿ, ಅರವಿಂದ, ಶಿಕ್ಷಣ ಅಧಿಕಾರಿ ನಿರುಪಮಾ, ವಯಸ್ಕರ ಶಿಕ್ಷಣ ಇಲಾಖೆಯ ಸುರೇಶ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

> ಪ್ರಸ್ತುತ ಜಗತ್ತು ಅತ್ಯಂತ ಸ್ಪರ್ಧಾತ್ಮಕವಾಗಿದ್ದು, ವಿದ್ಯಾರ್ಥಿಗಳಿಗೆ ಸರಿಯಾದ ವೃತ್ತಿ ಮಾರ್ಗದರ್ಶನ ಅಗತ್ಯ. ವಿದ್ಯಾರ್ಥಿಗಳು ಕೇವಲ ಕೋರ್ಸ್ ಆಧಾರಿತ ಉದ್ಯೋಗಗಳ ಬೆನ್ನತ್ತುವ ಬದಲು, ಪರ್ಯಾಯವಾಗಿ ತಮ್ಮದೇ ಆದ ಸ್ವ-ಉದ್ಯೋಗಗಳನ್ನು ಕೈಗೊಳ್ಳಲು ಪ್ರಯತ್ನಿಸಬೇಕು. ವಿದ್ಯಾಭ್ಯಾಸದ ನಂತರ ವೃತ್ತಿ ಜೀವನ ಹೇಗೆ ಪ್ರಾರಂಭಿಸಬೇಕು. ಯಶಸ್ಸು ಗಳಿಸಲು ಯಾವ ಹಾದಿ ಹಿಡಿಯಬೇಕು ಎಂಬ ಗೊಂದಲ ಸಹಜವಾಗಿ ವಿದ್ಯಾರ್ಥಿಗಳಲ್ಲಿ ಇರುತ್ತದೆ. ಕೌಶಲ್ಯ, ನಿರ್ದಿಷ್ಟ ಗುರಿ ಮತ್ತು ಕ್ರಿಯಾಶೀಲತೆ ಇಲ್ಲದಿದ್ದರೆ ಇಂತಹ ಸಮ್ಮೇಳನಗಳು ವ್ಯರ್ಥವಾಗುತ್ತವೆ. ವಿದ್ಯಾರ್ಥಿಗಳು ತಮಗೆ ಆಸಕ್ತಿ ಇರುವ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡು, ಅದರಲ್ಲಿ ಹೆಚ್ಚಿನ ಸಾಧನೆ ಮಾಡಲು ಬೇಕಾದ ಕೌಶಲ್ಯ ಬೆಳೆಸಿಕೊಳ್ಳಬೇಕು.
>
> -ಡಿ.ಉದಯ್‌ಕುಮಾರ್, ಡಿಡಿಪಿಐ

ನಿಷೇಧಿತ ಪ್ಲಾಸ್ಟಿಕ್ ಹತ್ತಿಕ್ಕುವಲ್ಲಿ ಪರಿಣಾಮಕಾರಿ ಕ್ರಮಕ್ಕೆ ಮುಂದಾಗದ ಪಾಲಿಕೆ ಅಧಿಕಾರಿಗಳು

ತಯಾರಿಕಾ ಘಟಕಗಳ ಬಿಟ್ಟು ಮಾರಾಟಗಾರರು, ಸಾಗಾಣೆದಾರರ ವಿರುದ್ಧ ಕ್ರಮ!



ಮೈಸೂರಿನ ಸಂತೇಪೇಟೆಯಲ್ಲಿ ಗುರುವಾರ ಬೆಳಗ್ಗೆ ನಗರಪಾಲಿಕೆ ಅಧಿಕಾರಿಗಳು ದಾಳಿ ನಡೆಸಿ 97 ಕೆಜಿ ನಿಷೇಧಿತ ಪ್ಲಾಸ್ಟಿಕ್ ವಶಪಡಿಸಿಕೊಂಡರು.

ಮೈಸೂರು, ಮಾ.26(ಎಂಟಿವೈ)- ಮೈಸೂರಲ್ಲಿ ಪರಿಸರಕ್ಕೆ ಮಾರಕವಾದ ಏಕಬಳಕೆ ಪ್ಲಾಸ್ಟಿಕ್ ನಿಷೇಧ ಹೇರಿ ಹಲವು ವರ್ಷಗಳೇ ಕಳೆದಿದ್ದರೂ, ಏಕಬಳಕೆ ಪ್ಲಾಸ್ಟಿಕ್ ಮೂಲದಿಂದಲೇ ಹತ್ತಿಕ್ಕುವಲ್ಲಿ ಪಾಲಿಕೆ ಅಧಿಕಾರಿಗಳು ವಿಫಲರಾಗಿದ್ದಾರೆ. ಇದುವರೆಗೆ ಮಾರಾಟಗಾರರು, ಸಾಗಾಣೆದಾರರ ವಿರುದ್ಧವಷ್ಟೇ ಕ್ರಮ ಕೈಗೊಳ್ಳಲಾಗಿದೆಯೇ ಹೊರತು, ತಯಾರಿಕರ ವಿರುದ್ಧ ಏನೂ ಕ್ರಮ ಕೈಗೊಂಡಿಲ್ಲ. ಈ ಮಧ್ಯೆ ಪ್ರತ್ಯೇಕ ಮೂರು ಪ್ರಕರಣದಲ್ಲಿ ನಗರಪಾಲಿಕೆ ಅಧಿಕಾರಿಗಳು 227 ಕೆ.ಜಿ. ಪ್ಲಾಸ್ಟಿಕ್ ವಶಪಡಿಸಿಕೊಂಡು 35 ಸಾವಿರ ರೂ. ದಂಡ ವಿಧಿಸಲಾಗಿದೆ.

ಮೈಸೂರಿನ ಪರಿಸರ ಸಂರಕ್ಷಣೆಯ ಹಿತದೃಷ್ಟಿಯಿಂದ ಏಕಬಳಕೆ ಪ್ಲಾಸ್ಟಿಕ್ ಬಳಕೆ ನಿಷೇಧಿಸಲಾಗಿದೆ. ಈ ಸಂಬಂಧ ಎಲ್ಲಾ ವ್ಯಾಪಾರಿ ಹಾಗೂ ಸರಬರಾಜು, ಸಾಗಾಟ ಸಂಸ್ಥೆಗೂ ಮಾಹಿತಿ ನೀಡಿದ್ದರೂ, ಕೆಲವರು ಲಾಭ ಗಳಿಕೆಗಾಗಿ ಏಕಬಳಕೆ ಪ್ಲಾಸ್ಟಿಕ್ ಮಾರಾಟ ಮಾಡುವುದರೊಂದಿಗೆ ಜಿಲ್ಲೆಯ ವಿವಿಧೆಡೆ ಸಾಗಿಸುತ್ತಿದ್ದಾರೆ. ಮೈಸೂರು ಮಹಾನಗರಪಾಲಿಕೆಯ ಪರಿಸರ ವಿಭಾಗದ ಅಧಿಕಾರಿಗಳು ಮೈಸೂರಿನ ವಿವಿಧ ಟ್ರಾನ್ಸ್‌ಪೋರ್ಟ್ ಹಾಗೂ ಮಳಿಗೆ ಮೇಲೆ ದಾಳಿ ನಡೆಸಿ, ನಿಷೇಧಿತ ಪ್ಲಾಸ್ಟಿಕ್ ವಶಪಡಿಸಿಕೊಂಡಿದ್ದಾರೆ.

ರಾತ್ರಿ ವೇಳೆ ದಾಳಿ: ಇದುವರೆಗೆ ಮಹಾನಗರಪಾಲಿಕೆ ಅಧಿಕಾರಿಗಳು ಬೆಳಿಗ್ಗೆ ದಾಳಿ ಮಾಡಿ ನಿಷೇಧಿತ ಪ್ಲಾಸ್ಟಿಕ್ ವಶಪಡಿಸಿಕೊಳ್ಳುತ್ತಿದ್ದರು. ಇದರಿಂದ ಎಚ್ಚೆತ್ತುಕೊಂಡ ವ್ಯಾಪಾರಿಗಳು ಕಳ್ಳ ದಾರಿ ಹಿಡಿದು ರಾತ್ರಿ ವೇಳೆ ಪ್ಲಾಸ್ಟಿಕ್ ತರಿಸಿಕೊಂಡು ಮಾರಾಟ ಮಾಡುವ ಮೂಲಕ ಉದ್ಧಟತನ ಪ್ರದರ್ಶಿಸಿದ್ದರು. ವ್ಯಾಪಾರಿಗಳು ಅಡ್ಡ ದಾರಿ ಹಿಡಿದಿರುವ ಮಾಹಿತಿ ಪಡೆದ ಅಧಿಕಾರಿಗಳು ಕಳೆದ ರಾತ್ರಿ ದಾಳಿ ನಡೆಸಿ, ಟ್ರಾನ್ಸ್‌ಪೋರ್ಟ್ ಸಂಸ್ಥೆಗೆ ಬೆಂಗಳೂರಿಂದ ಪಾರ್ಸೆಲ್ ಬಂದಿದ್ದ ಪ್ಲಾಸ್ಟಿಕ್ ವಶಪಡಿಸಿಕೊಂಡಿದ್ದಾರೆ.

ಮೈಸೂರಿನ ಸಂತೇಪೇಟೆ ಹಾಗೂ ಶಿವರಾಮಪೇಟೆಯಲ್ಲಿ ದಾಳಿ ನಡೆಸಿದಾಗ ನಿಷೇಧಿತ ಪ್ಲಾಸ್ಟಿಕ್ ದಾಸ್ತಾನು ಪತ್ತೆಯಾಗಿದೆ. ವೇಗಾ ಟ್ರಾನ್ಸ್‌ಪೋರ್ಟ್, ಸಂತೋಷ್ ರೋಡ್ ಲೇನ್, ಶ್ರೀ ಗುರು ರಾಘವೇಂದ್ರ ಟ್ರಾನ್ಸ್‌ಪೋರ್ಟ್ ಹಾಗೂ ಮಹದೇಶ್ವರ ಪಾರ್ಸೆಲ್ ಸರ್ವಿಸ್‌ನಲ್ಲಿ ತಪಾಸಣೆ ನಡೆಸಲಾಯಿತು. ಈ ವೇಳೆ ಬೆಂಗಳೂರಿಂದ ಮೈಸೂರಿಗೆ ತಂದು, ಮಡಿಕೇರಿಗೆ ಸಾಗಾಟ ಮಾಡಲು ಸಜ್ಜುಗೊಳಿಸಲಾಗಿದ್ದ 130 ಕೆ.ಜಿ. ನಿಷೇಧಿತ ಪ್ಲಾಸ್ಟಿಕ್ ವಶಪಡಿಸಿಕೊಂಡಿದ್ದಾರೆ. ಅಲ್ಲದೆ, 10 ಸಾವಿರ ರೂ. ದಂಡ ವಿಧಿಸಲಾಗಿದೆ. ಕಾರ್ಯಾಚರಣೆಯಲ್ಲಿ ಪರಿಸರ ಇಂಜಿನಿಯರ್ ಎಸ್.ಮೈತ್ರಿ, ಆರೋಗ್ಯ ನಿರೀಕ್ಷಕ ಮಂಜುಕುಮಾರ್ ಮತ್ತು ಅಭಯ ತಂಡದ ಸದಸ್ಯರು ಪಾಲ್ಗೊಂಡಿದ್ದರು.

ಮತ್ತೊಂದು ಪ್ರಕರಣ: ರಾತ್ರಿ ಟ್ರಾನ್ಸ್‌ಪೋರ್ಟ್‌ಗಳ ಮೇಲೆ ದಾಳಿ ನಡೆಸಿದ್ದರೆ ಇಂದು ಬೆಳಗ್ಗೆ ಸಂತೇಪೇಟೆಯ ಧನ್ವಂತ್ರಿ ಟ್ರೇಡರ್ಸ್ ಮತ್ತು ನಂದಿ ಪ್ಯಾಕಿಂಗ್ ಮಳಿಗೆ ಮೇಲೆ ದಾಳಿ ನಡೆಸಲಾಯಿತು. ಈ ವೇಳೆ 97 ಕೆಜಿ ನಿಷೇಧಿತ ಪ್ಲಾಸ್ಟಿಕ್ ಪೇಪರ್ ವಶಕ್ಕೆ ಪಡೆದು ದಂಡ ವಿಧಿಸಲಾಯಿತು. ಕಳೆದ ರಾತ್ರಿ ಮತ್ತು ಇಂದು ನಡೆದ ದಾಳಿಯಲ್ಲಿ ಒಟ್ಟು 227 ಕೆಜಿ ಪ್ಲಾಸ್ಟಿಕ್ ವಶಕ್ಕೆ ಪಡೆದು 35 ಸಾವಿರ ರೂ. ದಂಡ ವಿಧಿಸಲಾಗಿದೆ. ಈ ಕಾರ್ಯಾಚರಣೆಯಲ್ಲಿ ವಲಯ 6ರ ಎಸಿ ಪ್ರತಿಭಾ, ಪರಿಸರ ಇಂಜಿನಿಯರ್ ಎಸ್.ಮೈತ್ರಿ, ಆರೋಗ್ಯ ಪರಿವೀಕ್ಷಕ ಕೃಷ್ಣ ಹಾಗೂ ಅಭಯ ತಂಡದ ಸದಸ್ಯರು ಪಾಲ್ಗೊಂಡಿದ್ದರು.

ಮೈಸೂರಲ್ಲಿ 'ಯುದ್ಧ ನಿಲ್ಲಲಿ-ಶಾಂತಿ ನೆಲೆಸಲಿ' ಶಾಂತಿ ಸಂದೇಶ



ರಾಮಸ್ವಾಮಿ ವೃತ್ತದಲ್ಲಿ 'ಯುದ್ಧ ನಿಲ್ಲಲಿ ಶಾಂತಿ ನೆಲೆಸಲಿ' ಶಾಂತಿ ಸಂದೇಶ ಕಾರ್ಯಕ್ರಮ ನಡೆಸಲಾಯಿತು.

ಮೈಸೂರು, ಮಾ.26(ಎಂಕೆ)- ಮೈಸೂರಿನ ರಾಮಸ್ವಾಮಿ ವೃತ್ತದಲ್ಲಿ ಜನಸ್ಪಂದನಾ ಟ್ರಸ್ಟ್ ಹಾಗೂ ವಿವಿಧ ಸಂಘಟನೆಗಳ ವತಿಯಿಂದ 'ಯುದ್ಧ ನಿಲ್ಲಲಿ ಶಾಂತಿ ನೆಲೆಸಲಿ' ಧ್ಯೇಯವಾಕ್ಯದೊಂದಿಗೆ ಗುರುವಾರ ಶಾಂತಿ ಸಂದೇಶ ಕಾರ್ಯಕ್ರಮ ನಡೆಸಲಾಯಿತು.

'ಮಾನವೀಯತೆ ದೊಡ್ಡದು', 'ನಾಗರಿಕರ ಆಸ್ತಿ ಪಾಸ್ತಿಗೆ ಬೆಲೆ ಇಲ್ಲವೆ', 'ಯುದ್ಧ ನಿಲ್ಲಿಸಿ ಮಕ್ಕಳನ್ನು ರಕ್ಷಿಸಿ', 'ನಾಶ ಬೇಡ ಬದುಕು ಬೇಕು' ಎಂಬಿತ್ಯಾದಿ ಸಂದೇಶಗಳುಳ್ಳ ಪೋಸ್ಟರ್‌ಗಳನ್ನಿಡಿದ ನೂರಾರು ಮಂದಿ, ಇರಾನ್-ಇಸ್ರೇಲ್ ಮತ್ತು ಅಮೆರಿಕಾ ನಡುವೆ ನಡೆಯುತ್ತಿರುವ ಯುದ್ಧ ನಿಲ್ಲಬೇಕು. ಜಗತ್ತಿನಲ್ಲಿ ಶಾಂತಿ ನೆಲೆಸಬೇಕು ಎಂದು ಆಗ್ರಹಿಸಿದರು.

ಈ ವೇಳೆ ಮಾಜಿ ಶಾಸಕ ಹಾಗೂ ಜನಸ್ಪಂದನ ಟ್ರಸ್ಟ್‌ನ ಎಂ.ಕೆ.ಸೋಮಶೇಖರ್ ಮಾತನಾಡಿ, ಯುದ್ಧದಿಂದಾಗಿ ಜೀವ ಸಂಕುಲವೇ ಸರ್ವನಾಶವಾಗಲಿದೆ. ಯುದ್ಧ ಮತ್ತು ಹಿಂಸೆಯಿಂದ ಏನನ್ನೂ ಸಾಧಿಸಲು ಸಾಧ್ಯವಿಲ್ಲ ಎಂಬುದನ್ನು ಇತಿಹಾಸ ಸ್ಪಷ್ಟವಾಗಿ ತಿಳಿಸಿದೆ. ಮಧ್ಯಪ್ರಾಚ್ಯ ಯುದ್ಧವು ಭಾರತದ ಮೇಲೆ ದೊಡ್ಡ ಪರಿಣಾಮ ಬೀರಿದ್ದು, ಜನ-ಜೀವನ ಅಸ್ತವ್ಯಸ್ತಗೊಂಡಿದೆ. ಆದ್ದರಿಂದ ಆದಷ್ಟು ಬೇಗನೆ ಯುದ್ಧ ಕೊನೆಗೊಳ್ಳಬೇಕು ಎಂದು ಆಗ್ರಹಿಸಿದರು.

ಜಗತ್ತಿನಲ್ಲಿ ಶಾಂತಿ ನೆಲೆಸಬೇಕಾದರೆ ಭಗವಾನ್ ಬುದ್ಧರ ಶಾಂತಿ ಸಂದೇಶಗಳು ಎಲ್ಲೆಡೆ ಪಸರಿಸಬೇಕು. ಪ್ರತಿಯೊಬ್ಬರಲ್ಲೂ ಸಹಾನುಭೂತಿ, ಮೈತ್ರಿಯ ಭಾವನೆ ಜಾಗೃತಗೊಳ್ಳಬೇಕು. ಈಗಾಗಲೇ ಯುದ್ಧದಿಂದ ಸಾಕಷ್ಟು ಕಳೆದುಕೊಂಡಿದ್ದೇವೆ. ಮುಂದಾದರೂ ನೆಮ್ಮದಿಯ ಜೀವನ ನಡೆಸಬೇಕಿದೆ. ವಿಶ್ವಕ್ಕೆ ಯುದ್ಧಗಳು ಅವಶ್ಯಕವಲ್ಲ. ಶಾಂತಿ ನೆಲೆಸಬೇಕು ಎಂದು ತಿಳಿಸಿದರು. ಸಾಮಾಜಿಕ ಹೋರಾಟಗಾರ ಪ್ರೊ.ಕಾಳಚನ್ನೇಗೌಡ, ಮಾಜಿ ಮೇಯರ್ ಟಿ.ಬಿ.ಚಿಕ್ಕಣ್ಣ, ನಗರಪಾಲಿಕೆ ಮಾಜಿ ಸದಸ್ಯರಾದ ಜೆ.ಗೋಪಿ, ಎಂ.ಸುನೀಲ್, ಅನಂತ್, ಆರ್.ಹೆಚ್.ಕುಮಾರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಜಿ.ಸೋಮಶೇಖರ್, ಶ್ರೀಧರ್, ಮಾಜಿ ಸೆನೆಟ್ ಸದಸ್ಯ ಗೋಪಿನಾಥ್, ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಬಾಲಕೃಷ್ಣ, ಸಾಗರೋತ್ತರ ಕನ್ನಡ ಸಂಘದ ರವಿ, ಜೈ ಭಾರತ್ ಸಂಘಟನೆ ಅಧ್ಯಕ್ಷ ಕಲೀಂ ಷರೀಫ್, ಮುಖಂಡರಾದ ಜೋಗಿ ಮಹೇಶ್, ಪಟಾಕಿ ಮಂಜುನಾಥ್, ಹೇಮಂತ್, ಪುಟ್ಟಣ್ಣ ಮತ್ತಿತರರಿದ್ದರು.

ಹಾರ್ಮುಜ್ ಜಲಸಂಧಿ ಮುಚ್ಚಿಸಿದ್ದ ಇರಾನ್‌ನ ಐಆರ್‌ಜಿಸಿ ನೌಕಾಪಡೆ ಮುಖ್ಯಸ್ಥ ಅಲಿರೆಜಾನ ಮುಗಿಸಿದ ಇಸ್ರೇಲ್!



ಟೆಹ್ರಾನ್: ಹಾರ್ಮುಜ್ ಜಲಸಂಧಿಯನ್ನು ಮುಚ್ಚಿಸಿ ಜಗತ್ತಿಗೆ ತೈಲ ಸಂಕಷ್ಟಕ್ಕೆ ಗುರಿಯಾಗುವಂತೆ ಮಾಡಿದ್ದ ಇರಾನ್‌ನ ಇಸ್ಲಾಮಿಕ್ ರೆವ ಲ್ಯೂಷನರಿ ಗಾರ್ಡ್ ಕಾರ್ಪ್ಸ್ (IRGC) ನೌಕಾಪಡೆಯ ಮುಖ್ಯಸ್ಥ ಅಲಿರೆಜಾ ತಂಗ್ಸಿರಿಯನ್ನು ಇಸ್ರೇಲ್ ವಾಯುದಾಳಿ ನಡೆಸಿ ಹತ್ಯೆ ಮಾಡಿದೆ. ಇಸ್ರೇಲ್ ಬಂದರ್ ಅಬ್ಬಾಸ್ ಮೇಲೆ ವಾಯುದಾಳಿ ನಡೆಸಿದ್ದು ಈ ದಾಳಿಯಲ್ಲಿ ಅಲಿರೆಜಾ ಸಾವನ್ನಪ್ಪಿದ್ದಾರೆ ಎಂದು ವರದಿಯಾಗಿದೆ.

ಹಾರ್ಮುಜ್ ಜಲಸಂಧಿಯ ಬಳಿ ಇರುವ ಬಂದರ್ ಅಬ್ಬಾಸ್ ಇರಾನ್‌ನ ಪ್ರಮುಖ ಬಂದರು ನಗರವಾಗಿದೆ. ಮಧ್ಯಪ್ರಾಚ್ಯದಲ್ಲಿ ಇರಾನ್, ಇಸ್ರೇಲ್ ಮತ್ತು ಯುನೈಟೆಡ್ ಸ್ಟೇಟ್ಸ್ ನಡುವೆ ಹೆಚ್ಚುತ್ತಿರುವ ಉದ್ವಿಗ್ನತೆಯ ಸಮಯದಲ್ಲಿ ಈ ದಾಳಿ ನಡೆದಿದೆ. ವಿಶ್ವದ ಪ್ರಮುಖ ಸಮುದ್ರ ಮಾರ್ಗಗಳಲ್ಲಿ ಒಂದಾದ ಹಾರ್ಮುಜ್ ಜಲಸಂಧಿಗೆ ಬಂದರ್ ಅಬ್ಬಾಸ್ ಬಹಳ ಹತ್ತಿರದಲ್ಲಿದೆ. ವಿಶ್ವದ ತೈಲ ಮತ್ತು ಅನಿಲ ವ್ಯಾಪಾರದ ಸರಿಸುಮಾರು ಶೇಕಡ 20ರಷ್ಟು ಅದರ ಮೂಲಕ ಹಾದುಹೋಗುತ್ತದೆ.

ಐಆರ್‌ಜಿಸಿ ನೌಕಾಪಡೆಯು ಇರಾನ್‌ನ ಕಡಲ ಕಾರ್ಯತಂತ್ರದ ಪ್ರಮುಖ ಭಾಗ ಮತ್ತು ಕೊಲ್ಲಿ ಪ್ರದೇಶದಲ್ಲಿ ಅದರ ಪ್ರಭಾವದ ಪ್ರಮುಖ ಅಂಶವಾಗಿದ್ದು ಈ ಮಧ್ಯೆ ತಂಗ್ಸಿರಿಯ ಮರಣವನ್ನು ಸಂಘರ್ಷದಲ್ಲಿ ಪ್ರಮುಖ ಬೆಳವಣಿಗೆ ಎಂದು ಪರಿಗಣಿಸಲಾಗಿದೆ. ಇರಾನ್ ಈಗ ಹಾರ್ಮುಜ್ ಜಲಸಂಧಿಯ ಮೇಲೆ ತನ್ನ ನಿಯಂತ್ರಣವನ್ನು ಔಪಚಾರಿಕವಾಗಿ ಕ್ರೋಢೀಕರಿಸಲು ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ಇದು ವಿಶ್ವದ ತೈಲ ಮತ್ತು ಅನಿಲದ ಗಮನಾರ್ಹ ಭಾಗವು ಹಾದುಹೋಗುವ ಪ್ರಮುಖ ಸಮುದ್ರ ಮಾರ್ಗವಾಗಿದೆ. ಪರಿಣಾಮವಾಗಿ, ಕದನ ವಿರಾಮದ ಪ್ರಯತ್ನಗಳು ದುರ್ಬಲಗೊಳ್ಳುತ್ತಿರುವಂತೆ ಕಾಣುತ್ತಿದೆ.

ದಟ್ಟಗಳ್ಳಿಯ ಪಾರ್ಕ್‌ನಲ್ಲಿ ಕಿರು ಅರಣ್ಯ ಅಭಿವೃದ್ಧಿಗೆ ಇಂದು ಚಾಲನೆ

ಮೈಸೂರು, ಮಾ.26(ಬಿಎಲ್‌ಯು)- ಮೈಸೂರಿನ ದಟ್ಟಗಳ್ಳಿಯ ಸಾಲು ಮರದ ತಿಮ್ಮಕ್ಕ ಉದ್ಯಾನವನದಲ್ಲಿ ಖಾಸಗಿ ಕಂಪನಿ ಸಹಯೋಗದೊಂದಿಗೆ ಮಿಯಾವಾಕಿ ಕಿರು ಅರಣ್ಯ ಅಭಿವೃದ್ಧಿಪಡಿಸುವ ಕಾರ್ಯಕ್ಕೆ ನಾಳೆ (ಮಾರ್ಚ್ 27) ಚಾಲನೆ ದೊರೆಯಲಿದೆ. ಸುಮಾರು ಒಂದೂವರೆ ಎಕರೆ ಜಾಗದಲ್ಲಿ 30 ವಿವಿಧ ರೀತಿಯ 15,000 ಸಸಿಗಳನ್ನು ನೆಡಲಾಗುತ್ತಿದೆ. ನಾಳೆ ಬೆಳಿಗ್ಗೆ 11 ಗಂಟೆಗೆ ನಗರಪಾಲಿಕೆ ಆಡಳಿತಾಧಿಕಾರಿಗಳೂ ಆದ ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್ ಅವರು ಇದಕ್ಕೆ ಚಾಲನೆ ನೀಡಲಿದ್ದಾರೆ. ನಗರಪಾಲಿಕೆ ಆಯುಕ್ತ ಷೇಕ್ ತನ್ವೀರ್ ಆಸೀಫ್ ಸೇರಿದಂತೆ ಖಾಸಗಿ ಕಂಪನಿಯ ಅಧಿಕಾರಿಗಳು ನಾಳೆಯ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ.

ಏ.1, ಮೈಸೂರಲ್ಲಿ ಮಕ್ಕಳ ಆರೋಗ್ಯ ಬೇಸಿಗೆ ಶಿಬಿರ

ಮೈಸೂರು: ಮೈಸೂರಿನ ಋಷಿ ಸಂಸ್ಕೃತಿ ವಿದ್ಯಾಕೇಂದ್ರ ಟ್ರಸ್ಟ್ ವತಿಯಿಂದ 8 ವರ್ಷದಿಂದ 14 ವರ್ಷದ ಮಕ್ಕಳಿಗೆ ಮಕ್ಕಳ ಆರೋಗ್ಯ ಬೇಸಿಗೆ ಶಿಬಿರ, ಸ್ಮರಣ ಶಕ್ತಿ ಯೋಗದ ಪರಿಚಯ ಕಾರ್ಯಕ್ರಮವನ್ನು ಏ.1ರಂದು ಬೆಳಗ್ಗೆ 10 ಗಂಟೆಗೆ ಕುವೆಂಪುನಗರದ ಆದಿಚುಂಚನಗಿರಿ ರಸ್ತೆಯಲ್ಲಿರುವ ಋಷಿ ಸಂಸ್ಕೃತಿ ವಿದ್ಯಾಕೇಂದ್ರದಲ್ಲಿ ಪ್ರಾರಂಭಿಸಲಾಗುತ್ತಿದೆ. ಆಸಕ್ತರು ನೋಂದಣಿಗಾಗಿ ಹೆಚ್.ಎಸ್.ರಮೇಶ್‌ಚಂದ್ರ- 94484 58050, ಪಿ.ಎ. ಮನೋಹರ್‌ರಾವ್- 86187 62110 ಸಂಪರ್ಕಿಸಲು ಕೋರಲಾಗಿದೆ.

ಶ್ರೀ ರಾಮನವಮಿ ಅಂಗವಾಗಿ ಮಕ್ಕಳಿಗೆ ನಾಳೆ ಶ್ರೀ ರಾಮ, ಸೀತೆ ವೇಷಭೂಷಣ ಸ್ಪರ್ಧೆ

ಯುವಜನರಿಗೆ ರಾಮನ ಆದರ್ಶ ಸ್ಫೂರ್ತಿದಾಯಕ: ಪ್ರೊ, ಭಾಷ್ಯಂ ಸ್ವಾಮೀಜಿ



ಕೃಷ್ಣಮೂರ್ತಿ ಪುರಂನಲ್ಲಿರುವ ಶ್ರೀರಾಮಮಂದಿರದಲ್ಲಿ ರಾಮನವಮಿ ಅಂಗವಾಗಿ 8 ವರ್ಷದೊಳಗಿನ ಮಕ್ಕಳಿಗೆ ಹಮ್ಮಿಕೊಂಡಿರುವ ಶ್ರೀ ರಾಮ, ಸೀತೆ ವೇಷಭೂಷಣ ಸ್ಪರ್ಧೆಯ ಪ್ರಚಾರ ಸಾಮಗ್ರಿಗಳನ್ನು ಪ್ರೊ. ಭಾಷ್ಯಂ ಸ್ವಾಮೀಜಿ ಬಿಡುಗಡೆಗೊಳಿಸಿದರು.

ಮೈಸೂರು,ಮಾ.26-ಕಲಾ ಉತ್ಸವ ಟ್ರಸ್ಟ್ ಮೈಸೂರು ಹಾಗೂ ಶ್ರೀ ಮಹಾಜನಾ ಸಭಾ ಟ್ರಸ್ಟ್ ಶ್ರೀರಾಮ ಮಂದಿರ ವತಿಯಿಂದ ಶ್ರೀ ರಾಮನವಮಿ ಅಂಗವಾಗಿ 8 ವರ್ಷದ ಒಳಗಿನ ಮಕ್ಕಳಿಗೆ ಶ್ರೀ ರಾಮ ಹಾಗೂ ಸೀತೆ ವೇಷಭೂಷಣ ಸ್ಪರ್ಧೆಯನ್ನು ಮಾ.28ರಂದು ಬೆಳಗ್ಗೆ 11.30ಕ್ಕೆ ಕೃಷ್ಣಮೂರ್ತಿಪುರಂನಲ್ಲಿರುವ ಶ್ರೀರಾಮಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ.

ಅದರ ಪ್ರಚಾರ ಸಾಮಗ್ರಿಗಳನ್ನು ಶ್ರೀ ಯೋಗ ನರಸಿಂಹಸ್ವಾಮಿ ದೇವಸ್ಥಾನದ ಸಂಸ್ಥಾಪಕರಾದ ನಾಡೋಜ ಪುರಸ್ಕೃತ ಪ್ರೊ. ಭಾಷ್ಯಂ ಸ್ವಾಮೀಜಿ ವಿಜಯನಗರದಲ್ಲಿರುವ ದೇವಸ್ಥಾನದಲ್ಲಿ ಬಿಡುಗಡೆಗೊಳಿಸಿ, ಶುಭ ಕೋರಿ ಮಾತನಾಡಿದರು.

ದೈವ ಪುರುಷನಾದ ರಾಮನ ಬದುಕಿನ ಆದರ್ಶಗಳು ಎಲ್ಲಾ ಧರ್ಮದ ಯುವಜನರಿಗೆ ಸ್ಫೂರ್ತಿ ಶ್ರೀರಾಮಚಂದ್ರನು ವನವಾಸಕ್ಕೆ ತೆರಳಿದಾಗ ಪತ್ನಿ ಸೀತಾ ಮಾತೆಯೂ ಜೊತೆಯಾಗಿ ಹೋಗುವ ಸನ್ನಿವೇಶ ಎಲ್ಲಾ ದಂಪತಿಗೆ ಅನ್ಯೋನ್ಯತೆ ಸಂದೇಶದ ಆದರ್ಶ ವಾಗಿದೆ. ಜೀವನದಲ್ಲಿ ಎಷ್ಟೇ ಕಷ್ಟ ಬಂದಾಗಲೂ ಪತಿ-ಪತ್ನಿ ಕೈಜೋಡಿಸಿ ಸಂಸಾರದ ನೌಕೆ ಸಾಗಿಸಬೇಕು ಎಂಬ ಸಂದೇಶ ಅದು ಸಾರುತ್ತದೆ ಎಂದರು.

ಜಯಂತಿಗಳು ಮೆರವಣಿಗೆ ಮಾಡುವುದರಿಂದ ಸಾರ್ಥಕ ಆಗುವುದಿಲ್ಲ. ಬದಲಿಗೆ ಮಹನೀಯರ ಆದರ್ಶಗಳನ್ನು ಬದುಕಿನಲ್ಲಿ ಆಚರಣೆಗೆ ತಂದಾಗ ಮಾತ್ರ ಅರ್ಥ ಬರುತ್ತದೆ ಎಂದು ಹೇಳಿದರು.

ಎಲ್ಲರೂ ಶ್ರೀರಾಮಾಯಣ ಭಗವದ್ಗೀತೆ ನಿತ್ಯ ಪಠಿಸಬೇಕು. ಅದರಲ್ಲಿನ ಮಾನವೀಯ ಮೌಲ್ಯಗಳನ್ನು ಎಲ್ಲರೂ ಪಾಲಿಸಬೇಕು ಎಂದರು.

ಕಾಲ ಉತ್ಸವ ಟ್ರಸ್ಟ್ ಮೈಸೂರು ಅಧ್ಯಕ್ಷ ಅಮಿತ್ ಮಾತನಾಡಿ 8ವರ್ಷದ ಮಕ್ಕಳು ಶ್ರೀರಾಮ ಹಾಗೂ ಸೀತೆ ವೇಷಭೂಷಣ ಸ್ಪರ್ಧೆಯಲ್ಲಿ ಭಾಗವಹಿಸಬಹುದು. ಪ್ರವೇಶ ಉಚಿತವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ 9880752727/ 7996021665 ಸಂಪರ್ಕಿಸಿ, ನೋಂದಾಯಿಸಿಕೊಳ್ಳಬಹುದು.

ಈ ಸಂದರ್ಭದಲ್ಲಿ ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಕೆ.ಬಿ.ಲಿಂಗರಾಜು, ಶೇಷಾದ್ರಿ, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್, ನಿರೂಪಕ ಅಜಯ್‌ಶಾಸ್ತ್ರಿ, ಅಮಿತ್, ಬಾಲಜಿ, ಶ್ರೀಧರ್ ಹಾಗೂ ಇನ್ನಿತರರು ಹಾಜರಿದ್ದರು.

ನಿಮ್ಮ ಪ್ರಾಣ ರಕ್ಷಣೆ, ಕುಟುಂಬದ ನೆಮ್ಮದಿಗಾಗಿ ತಪ್ಪದೇ ಹೆಲ್ಮೆಟ್ ಧರಿಸಿ...

● ವಿದ್ಯಾರ್ಥಿಗಳಿಗೆ ಸಂಚಾರ ಪೊಲೀಸ್ ಇನ್ಸ್‌ಪೆಕ್ಟರ್ ಲವ ಕಿವಿಮಾತು ● ವಿಶ್ವವಿದ್ಯಾನಿಲಯ ಸಂಜೆ ಕಾಲೇಜು ವಿದ್ಯಾರ್ಥಿಗಳಿಗೆ ಉಚಿತ ಹೆಲ್ಮೆಟ್ ವಿತರಣೆ

ಮೈಸೂರು, ಮಾ.26– ನಿಮ್ಮ ಪ್ರಾಣ ರಕ್ಷಣೆ ಹಾಗೂ ಕುಟುಂಬದ ನೆಮ್ಮದಿಗಾಗಿ ದ್ವಿಚಕ್ರ ವಾಹನ ಓಡಿಸುವಾಗ ಮರೆಯದೆ ಹೆಲ್ಮೆಟ್ ಧರಿಸುವಂತೆ ಮೈಸೂರಿನ ವಿವಿ ಪುರಂ ಸಂಚಾರ ಠಾಣೆ ಇನ್ಸ್‌ಪೆಕ್ಟರ್ ಎಂ.ಆರ್.ಲವ, ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ರಸ್ತೆ ಸುರಕ್ಷತಾ ಅಭಿಯಾನ ಅಂಗವಾಗಿ ಕಡಕೊಳದ ಸಿರೇನ್ ಇಂಡಿಯಾ ಕಂಪನಿ ವತಿಯಿಂದ ನಗರದ ವಿಶ್ವವಿದ್ಯಾಲಯ ಸಂಜೆ ಕಾಲೇಜಿನಲ್ಲಿ ಗುರುವಾರ ಏರ್ಪಡಿಸಿದ್ದ ವಿದ್ಯಾರ್ಥಿಗಳಿಗೆ ಉಚಿತ ಹೆಲ್ಮೆಟ್ ವಿತರಿಸುವ ಸಮಾರಂಭದಲ್ಲಿ ಅವರು ಮಾತನಾಡಿದರು.

ಪೊಲೀಸರು ದಂಡ ವಿಧಿಸುತ್ತಾರೆ ಎಂಬ ಭಯಕ್ಕೆ ಅವರಿರುವ ಸ್ಥಳದಲ್ಲಿ ಅಥವಾ ಕ್ಯಾಮರಾಗಳಿರುವ ಸ್ಥಳಗಳಲ್ಲಿ ಮಾತ್ರ ಹೆಲ್ಮೆಟ್ ಧರಿಸುವುದಲ್ಲ. ನಿಮ್ಮ ಪ್ರಾಣ ರಕ್ಷಣೆ ಜೊತೆಗೆ ಕುಟುಂಬದವರ ನೆಮ್ಮದಿ ಕಾಪಾಡಲು ವಾಹನ ಚಾಲನೆ ಮಾಡುವ ಪ್ರತೀ ಕ್ಷಣವೂ ಹೆಲ್ಮೆಟ್ ಧರಿಸಿಕೊಳ್ಳಬೇಕು. ವಾಹನ ಸವಾರರಿಗೆ ಜಾಗೃತಿ ಜೊತೆಗೆ ಎಚ್ಚರಿಕೆ ನೀಡಬೇಕೆಂಬ ಕಾರಣಕ್ಕೆ ನಗರದಲ್ಲಿ 27 ಕಡೆ ಎಐ (ಕೃತಕ ಬುದ್ಧಿಮತ್ತೆ) ಕ್ಯಾಮರಾಗಳನ್ನು ಅಳವಡಿಸ ಲಾಗಿದೆ ಎಂದು ತಿಳಿಸಿದರು.

ಸಂಚಾರ ಪೊಲೀಸರನ್ನು ಕಂಡರೆ ಗಾಬರಿಗೊಂಡು ವೇಗವಾಗಿ ವಾಹನ ಓಡಿಸಬೇಡಿ. ಶೇ.80–90ರಷ್ಟು ಅಪಘಾತಗಳು ನಮ್ಮ ತಪ್ಪಿನಿಂದ, ಕಾನೂನಿನ ಬಗೆಗಿನ ನಿರ್ಲಕ್ಷ್ಯದಿಂದ ಸಂಭವಿಸುತ್ತವೆ. ಅಪಘಾತ ಪ್ರಕರಣಗಳಲ್ಲಿ ಶೇ.40ರಷ್ಟು ವಿಮೆಯೇ ಇರುವುದಿಲ್ಲ ಇದರಿಂದ ಮೃತಪಟ್ಟ ಕುಟುಂಬದವರಿಗೆ ಪರಿಹಾರವೂ ಸಿಗುವುದಿಲ್ಲ. ಸ್ವಯಂ ಅಪಘಾತವಾದರೆ 15 ಲಕ್ಷ ಪರಿಹಾರ ಸಿಗುತ್ತದೆಯಷ್ಟೇ ಎಂದು ಹೇಳಿದರು.

ಸಬ್ ಇನ್ಸ್‌ಸ್ಪೆಕ್ಟರ್ ವಿ.ಆರ್.ಶಬರೀಶ್ ಮಾತನಾಡಿ, ನಮ್ಮ ಮೊಬೈಲ್ ಫೋನ್ ಬಿದ್ದರೆ ಒಡೆಯುತ್ತದೆ ಎಂದು ಬ್ಯಾಕ್ ಕವರ್ ಹಾಕಿಸುತ್ತೇವೆ. ಆದರೆ ಬೈಕ್ ಓಡಿಸುವಾಗ ಬಿದ್ದರೆ ಮೊದಲು ತಲೆಗೆ ಪೆಟ್ಟಾಗುತ್ತದೆ ಎಂದು ಗೊತ್ತಿದ್ದರೂ ಹೆಲ್ಮೆಟ್ ಧರಿಸುವುದಿಲ್ಲ ಅದು ಎಂತಹ ಸಂದರ್ಭವಾದರೂ ಹೆಲ್ಮೆಟ್ ಧರಿಸದೆ ವಾಹನಗಳನ್ನು ಓಡಿಸಬೇಡಿ ಎಂದರು.

ಸಿರೇನ್ ಇಂಡಿಯಾ ಕಂಪನಿಯ ನಿರ್ದೇಶಕ ಕೋರ್ಶೋ ಅಸಕುರ ಮಾತನಾಡಿ, ವಿದ್ಯಾರ್ಥಿಗಳು ದೇಶದ ಸಂಪತ್ತು. ನಿಮ್ಮ ಕನಸುಗಳನ್ನು ಸಾಕಾರಗೊಳಿಸಿಕೊಳ್ಳಬೇಕಾದರೆ ಮೊದಲು ಸುರಕ್ಷಿತವಾಗಿರಬೇಕು. ಸುರಕ್ಷತೆ ಎನ್ನುವುದು ನಿಯಮವಲ್ಲ, ನಮ್ಮ ಬದುಕು ಎಂದು ತಿಳಿಹೇಳಿದರು.

ವಿಶ್ವವಿದ್ಯಾಲಯ ಸಂಜೆ ಕಾಲೇಜಿನ ಪ್ರಾಂಶುಪಾಲ ಡಾ.ಕೆ.ತಿಮ್ಮಯ್ಯ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸಿರೇನ್ ಕಂಪನಿಯ ಮಾನವ ಸಂಪನ್ಮೂಲ ವಿಭಾಗದ ಹಿರಿಯ ವ್ಯವಸ್ಥಾಪಕ ಎನ್.ಪದ್ಮನಾಭ ಮತ್ತಿತರರು ಉಪಸ್ಥಿತರಿದ್ದರು.



ರಸ್ತೆ ಸುರಕ್ಷತಾ ಅಭಿಯಾನ ಅಂಗವಾಗಿ ಮೈಸೂರಿನ ವಿಶ್ವವಿದ್ಯಾಲಯದ ಸಂಜೆ ಕಾಲೇಜಿನ ವಿದ್ಯಾರ್ಥಿಗಳಿಗೆ ಕಡಕೊಳದ ಸಿರೇನ್ ಇಂಡಿಯಾ ಕಂಪೆನಿ ವತಿಯಿಂದ ಉಚಿತವಾಗಿ ಹೆಲ್ಮೆಟ್ ವಿತರಿಸಲಾಯಿತು.

ನಾಳೆಯಿಂದ ಐಪಿಎಲ್–2026
70 ಪಂದ್ಯಗಳ ವೇಳಾಪಟ್ಟಿ ಪ್ರಕಟ



ಮೈಸೂರು, ಮಾ.26(ವಿವಿಹೆಚ್)– ನಾಳೆಯಿಂದ(ಮಾ.28) ಬಹು ನಿರೀಕ್ಷಿತ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್)–2026 ಆರಂಭವಾಗಲಿದ್ದು, ಗುರುವಾರ ಬಿಸಿಸಿಐ ವೇಳಾಪಟ್ಟಿ ಬಿಡುಗಡೆ ಮಾಡಿದೆ.

ಐಪಿಎಲ್ ಪಂದ್ಯಗಳು ನಡೆಯುವ ರಾಜ್ಯಗಳಲ್ಲಿ ವಿಧಾನಸಭಾ ಚುನಾವಣೆಗಳು ನಡೆಯುವ ಕಾರಣ ಬಿಸಿಸಿಐ, ಐಪಿಎಲ್ ವೇಳಾಪಟ್ಟಿಯನ್ನು ಎರಡು ಭಾಗಗಳಾಗಿ ಪ್ರಕಟಿಸಿದೆ. ಅದರಂತೆ ಈ ಹಿಂದೆ ಮಾ.28 ರಿಂದ ಏ.12ರವರೆಗೆ ನಡೆಯುವ 20 ಪಂದ್ಯಗಳ ವೇಳಾಪಟ್ಟಿಯನ್ನು ಪ್ರಕಟಿಸಿತ್ತು. ಇದೀಗ ಏ.13ರಿಂದ ಮೇ 24ವರೆಗೆ ನಡೆಯುವ ಉಳಿದ 50 ಪಂದ್ಯಗಳ ವೇಳಾಪಟ್ಟಿಯನ್ನು ಪ್ರಕಟಿಸಿದೆ.

ಈ ಎಲ್ಲಾ ಪಂದ್ಯಗಳು ಬೆಂಗಳೂರು, ಮುಂಬೈ, ಚೆನ್ನೈ, ಕೋಲ್ಕತ್ತಾ, ದೆಹಲಿ, ಅಹಮದಾಬಾದ್, ಹೈದರಾಬಾದ್, ಲಕ್ನೋ, ಜೈಪುರ, ಧರ್ಮಶಾಲಾ, ರಾಯ್ಪುರ ಮತ್ತು ನ್ಯೂ ಚಂಡೀಗಢದಲ್ಲಿ ನಡೆಯಲಿವೆ.

ಪಂದ್ಯಾವಳಿಯಲ್ಲಿ ಒಟ್ಟು 12 ಡಬಲ್ ಹೆಡರ್ ಪಂದ್ಯಗಳು ನಡೆಯಲಿದ್ದು, ಮೊದಲ ಪಂದ್ಯ ಮಧ್ಯಾಹ್ನ 3.30, ಎರಡನೇ ಪಂದ್ಯ ಸಂಜೆ 7.30ಕ್ಕೆ ಪ್ರಾರಂಭವಾಗಲಿದೆ. ಲೀಗ್ ಹಂತದ ಪಂದ್ಯಗಳನ್ನು ಪ್ರಕಟಿಸಿರುವ ಬಿಸಿಸಿಐ ಪ್ಲೇಆಫ್ ಮತ್ತು ಫೈನಲ್ ಪಂದ್ಯಗಳ ದಿನಾಂಕಗಳನ್ನು ಲೀಗ್ ಹಂತದ ಕೊನೆ ವಾರದಲ್ಲಿ ಪ್ರಕಟಿಸಲಿದೆ.

ಸಂಪೂರ್ಣ ವೇಳಾಪಟ್ಟಿ

ದಿನಾಂಕ	ಪಂದ್ಯಗಳು	ಸ್ಥಳ – ಸಮಯ
ಮಾ.28:	**ಎಸ್‌ಆರ್‌ಹೆಚ್ v/s ಆರ್‌ಸಿಬಿ**	**(ಬೆಂಗಳೂರು, ಸಂಜೆ 7:30)**
ಮಾ.29:	ಕೆಕೆಆರ್ v/s ಎಂಐ	(ಮುಂಬೈ, ಸಂಜೆ 7:30)
ಮಾ.30:	ಸಿಎಸ್‌ಕೆ v/s ಆರ್‌ಆರ್	(ಗುವಾಹಟಿ, ಸಂಜೆ 7:30)
ಮಾ.31:	ಜಿಟಿ v/s ಪಿಬಿಕೆಎಸ್	(ನ್ಯೂ ಚಂಡೀಗಢ, ಸಂಜೆ 7:30)
ಏ.1:	ಡಿಸಿ v/s ಎಲ್‌ಎಸ್‌ಜಿ	(ಲಖನೌ, ಸಂಜೆ 7:30)
ಏ.2:	ಎಸ್‌ಆರ್‌ಹೆಚ್ v/s ಕೆಕೆಆರ್	(ಕೋಲ್ಕತ್ತಾ, ಸಂಜೆ 7:30)
ಏ.3:	ಪಿಬಿಕೆಎಸ್ v/s ಸಿಎಸ್‌ಕೆ	(ಚೆನ್ನೈ, ಸಂಜೆ 7:30)
ಏ.4:	ಎಂಐ v/s ಡಿಸಿ	(ದೆಹಲಿ, ಮಧ್ಯಾಹ್ನ 3:30)
ಏ4:	ಆರ್‌ಆರ್ v/s ಜಿಟಿ	(ಅಹಮದಾಬಾದ್, ಸಂಜೆ 7:30)
ಏ.5:	ಎಲ್‌ಎಸ್‌ಜಿ v/s ಎಸ್‌ಆರ್‌ಹೆಚ್	(ಹೈದರಾಬಾದ್, ಮಧ್ಯಾಹ್ನ 3:30)
ಏ.5:	**ಸಿಎಸ್‌ಕೆ v/s ಆರ್‌ಸಿಬಿ**	**(ಬೆಂಗಳೂರು, ಸಂಜೆ 7:30)**
ಏ.6:	ಪಿಬಿಕೆಎಸ್ v/s ಕೆಕೆಆರ್	(ಕೋಲ್ಕತ್ತಾ, ಸಂಜೆ 7:30)
ಏ.7:	ಎಂಐ v/s ಆರ್‌ಆರ್	(ಗುವಾಹಟಿ, ಸಂಜೆ 7:30)
ಏ.8:	ಜಿಟಿ v/s ಡಿಸಿ	(ಡೆಲ್ಲಿ, ಸಂಜೆ 7:30)
ಏ.9:	ಎಲ್‌ಎಸ್‌ಜಿ v/s ಕೆಕೆಆರ್	(ಕೋಲ್ಕತ್ತಾ, ಸಂಜೆ 7:30)
ಏ.10:	**ಆರ್‌ಸಿಬಿ v/s ಆರ್‌ಆರ್**	**(ಗುವಾಹಟಿ, ಸಂಜೆ 7:30)**
ಏ.11:	ಎಸ್‌ಆರ್‌ಹೆಚ್ v/s ಪಿಬಿಕೆಎಸ್	(ನ್ಯೂ ಚಂಡೀಗಢ ಮಧ್ಯಾಹ್ನ 3:30)
ಏ.11:	ಡಿಸಿ v/s ಸಿಎಸ್‌ಕೆ	(ಚೆನ್ನೈ, ಸಂಜೆ 7:30)
ಏ.12:	ಜಿಟಿ v/s ಎಲ್‌ಎಸ್‌ಜಿ	(ಲಖನೌ, ಮಧ್ಯಾಹ್ನ 3:30)
ಏ.12:	**ಆರ್‌ಸಿಬಿ v/s ಎಂಐ**	**(ಮುಂಬೈ, ಸಂಜೆ 7:30)**
ಏ.13:	ಆರ್‌ಆರ್ v/s ಎಸ್‌ಆರ್‌ಎಹೆಚ್	(ಹೈದರಾಬಾದ್, ಸಂಜೆ 7:30)
ಏ.14:	ಕೆಕೆಆರ್ v/s ಸಿಎಸ್‌ಕೆ	(ಚೆನ್ನೈ, ಸಂಜೆ 7:30)
ಏ.15:	**ಎಲ್‌ಎಸ್‌ಜಿ v/s ಆರ್‌ಸಿಬಿ**	**(ಬೆಂಗಳೂರು, ಸಂಜೆ 7:30)**
ಏ.16:	ಪಿಬಿಕೆಎಸ್ v/s ಎಂಐ	(ಮುಂಬೈ, ಸಂಜೆ 7:30)
ಏ.17:	ಕೆಕೆಆರ್ v/s ಜಿಟಿ	(ಅಹಮದಾಬಾದ್, ಸಂಜೆ 7:30)
ಏ.18:	**ಡಿಸಿ v/s ಆರ್‌ಸಿಬಿ**	**(ಬೆಂಗಳೂರು, ಮಧ್ಯಾಹ್ನ 3:30)**
ಏ.18:	ಸಿಎಸ್‌ಕೆ v/s ಎಸ್‌ಆರ್‌ಹೆಚ್	(ಹೈದರಾಬಾದ್, ಸಂಜೆ 7:30)
ಏ.19:	ಆರ್‌ಆರ್ v/s ಕೆಕೆಆರ್	(ಕೋಲ್ಕತ್ತಾ, ಮಧ್ಯಾಹ್ನ 3:30)
ಏ.19:	ಎಸ್‌ಎಸ್‌ಜಿ v/s ಪಿಬಿಕೆಎಸ್	(ನ್ಯೂ ಚಂಡೀಗಢ, ಸಂಜೆ 7:30)
ಏ.20:	ಎಂಐ v/s ಜಿಟಿ	(ಅಹಮದಾಬಾದ್, ಸಂಜೆ 7:30)
ಏ.21:	ಡಿಸಿ v/s ಎಸ್‌ಆರ್‌ಹೆಚ್	(ಹೈದರಾಬಾದ್, ಸಂಜೆ 7:30)
ಏ.22:	ಆರ್‌ಆರ್ v/s ಎಲ್‌ಎಸ್‌ಜಿ	(ಲಖನೌ, ಸಂಜೆ 7:30)
ಏ.23:	ಸಿಎಸ್‌ಕೆ v/s ಎಂಐ	(ಮುಂಬೈ, ಸಂಜೆ 7:30)
ಏ.24:	**ಜಿಟಿ v/s ಆರ್‌ಸಿಬಿ**	**(ಬೆಂಗಳೂರು, ಸಂಜೆ 7:30)**
ಏ.25:	ಪಿಬಿಕೆಎಸ್ v/s ಡಿಸಿ	(ಡೆಲ್ಲಿ, ಮಧ್ಯಾಹ್ನ 3:30)
ಏ.25:	ಎಸ್‌ಆರ್‌ಹೆಚ್ v/s ಆರ್‌ಆರ್	(ಜೈಪುರ, ಸಂಜೆ 7:30)
ಏ.26:	ಸಿಎಸ್‌ಕೆ v/s ಜಿಟಿ	(ಅಹಮದಾಬಾದ್, ಮಧ್ಯಾಹ್ನ 3:30)
ಏ.26:	ಕೆಕೆಆರ್ v/s ಎಲ್‌ಎಸ್‌ಜಿ	(ಲಖನೌ, ಸಂಜೆ 7:30)
ಏ.27:	**ಆರ್‌ಸಿಬಿ v/s ಡಿಸಿ**	**(ದೆಹಲಿ, ಸಂಜೆ 7:30)**
ಏ.28:	ಆರ್‌ಆರ್ v/s ಪಿಬಿಕೆಎಸ್	(ನ್ಯೂ ಚಂಡೀಗಢ, ಸಂಜೆ 7:30)
ಏ.29:	ಎಸ್‌ಆರ್‌ಹೆಚ್ v/s ಎಂಐ	(ಮುಂಬೈ, ಸಂಜೆ 7:30)
ಏ.30:	**ಆರ್‌ಸಿಬಿ v/s ಜಿಟಿ**	**(ಅಹಮದಾಬಾದ್, ಸಂಜೆ 7:30)**
ಮೇ 1:	ಡಿಸಿ v/s ಆರ್‌ಆರ್	(ಜೈಪುರ, ಸಂಜೆ 7:30)
ಮೇ 2:	ಎಂಐ v/s ಸಿಎಸ್‌ಕೆ	(ಚೆನ್ನೈ, ಸಂಜೆ 7:30)
ಮೇ 3:	ಕೆಕೆಆರ್ v/s ಎಸ್‌ಆರ್‌ಹೆಚ್	(ಹೈದರಾಬಾದ್, ಮಧ್ಯಾಹ್ನ 3:30)
ಮೇ 3:	ಪಿಬಿಕೆಎಸ್ v/s ಜಿಟಿ	(ಅಹಮದಾಬಾದ್, ಸಂಜೆ 7:30)
ಮೇ 4:	ಎಲ್‌ಎಸ್‌ಜಿ v/s ಎಂಐ	(ಮುಂಬೈ, ಸಂಜೆ 7:30)
ಮೇ 5:	ಸಿಎಸ್‌ಕೆ v/s ಡಿಸಿ	(ದೆಹಲಿ, ಸಂಜೆ 7:30)
ಮೇ 6:	ಪಿಬಿಕೆಎಸ್ v/s ಎಸ್‌ಆರ್‌ಹೆಚ್	(ಹೈದರಾಬಾದ್, ಸಂಜೆ 7:30)
ಮೇ 7:	**ಆರ್‌ಸಿಬಿ v/s ಎಲ್‌ಎಸ್‌ಜಿ**	**(ಲಖನೌ, ಸಂಜೆ 7:30)**
ಮೇ 8:	ಕೆಕೆಆರ್ v/s ಡಿಸಿ	(ದೆಹಲಿ, ಸಂಜೆ 7:30)
ಮೇ 9:	ಜಿಟಿ v/s ಆರ್‌ಆರ್	(ಜೈಪುರ, ಸಂಜೆ 7:30)
ಮೇ 10:	ಎಲ್‌ಎಸ್‌ಜಿ v/s ಸಿಎಸ್‌ಕೆ	(ಚೆನ್ನೈ, ಮಧ್ಯಾಹ್ನ 3:30)
ಮೇ 10:	**ಎಂಐ v/s ಆರ್‌ಸಿಬಿ**	**(ರಾಯ್ಪುರ, ಸಂಜೆ 7:30)**
ಮೇ 11:	ಡಿಸಿ v/s ಪಿಬಿಕೆಎಸ್	(ಧರ್ಮಶಾಲಾ, ಸಂಜೆ 7:30)
ಮೇ 12:	ಎಸ್‌ಆರ್‌ಹೆಚ್ v/s ಜಿಟಿ	(ಅಹಮದಾಬಾದ್, ಸಂಜೆ 7:30)
ಮೇ 13:	**ಕೆಕೆಆರ್ v/s ಆರ್‌ಸಿಬಿ**	**(ರಾಯ್ಪುರ, ಸಂಜೆ 7:30)**
ಮೇ 14:	ಎಂಐ v/s ಪಿಬಿಕೆಎಸ್	(ಧರ್ಮಶಾಲಾ, ಸಂಜೆ 7:30)
ಮೇ 15:	ಸಿಎಸ್‌ಕೆ v/s ಎಲ್‌ಎಸ್‌ಜಿ	(ಲಖನೌ, ಸಂಜೆ 7:30)
ಮೇ 16:	ಜಿಟಿ v/s ಕೆಕೆಆರ್	(ಕೋಲ್ಕತ್ತಾ, ಸಂಜೆ 7:30)
ಮೇ 17:	**ಆರ್‌ಸಿಬಿ v/s ಪಿಬಿಕೆಎಸ್**	**(ಧರ್ಮಶಾಲಾ, ಮಧ್ಯಾಹ್ನ 3:30)**
ಮೇ 17:	ಆರ್‌ಆರ್ v/s ಡಿಸಿ	(ದೆಹಲಿ, ಸಂಜೆ 7:30)
ಮೇ 18:	ಎಸ್‌ಆರ್‌ಹೆಚ್ v/s ಸಿಎಸ್‌ಕೆ	(ಚೆನ್ನೈ, ಸಂಜೆ 7:30)
ಮೇ 19:	ಎಲ್‌ಎಸ್‌ಜಿ v/s ಆರ್‌ಆರ್	(ಜೈಪುರ, ಸಂಜೆ 7:30)
ಮೇ 20:	ಎಂಐ v/s ಕೆಕೆಆರ್	(ಕೋಲ್ಕತ್ತಾ, ಸಂಜೆ 7:30)
ಮೇ 21:	ಜಿಟಿ v/s ಸಿಎಸ್‌ಕೆ	(ಚೆನ್ನೈ, ಸಂಜೆ 7:30)
ಮೇ 22:	**ಆರ್‌ಸಿಬಿ v/s ಎಸ್‌ಆರ್‌ಹೆಚ್**	**(ಹೈದರಾಬಾದ್, ಸಂಜೆ 7:30)**
ಮೇ 23:	ಪಿಬಿಕೆಎಸ್ v/s ಎಲ್‌ಎಸ್‌ಜಿ	(ಲಖನೌ, ಸಂಜೆ 7:30)
ಮೇ 24:	ಆರ್‌ಆರ್ v/s ಎಂಐ	(ಮುಂಬೈ, ಮಧ್ಯಾಹ್ನ 3:30)
ಮೇ 24:	ಡಿಸಿ v/s ಕೆಕೆಆರ್	(ಕೋಲ್ಕತ್ತಾ, ಸಂಜೆ 7:30)

ನರಸಿಂಹರಾಜ ಬಿಜೆಪಿ ಮಹಿಳಾ ಮೋರ್ಚಾದಿಂದ ಮಹಿಳಾ ದಿನಾಚರಣೆ



ಮೈಸೂರಿನ ನರಸಿಂಹರಾಜ(ಎನ್‌ಆರ್) ಕ್ಷೇತ್ರದ ಬಿಜೆಪಿ ಮಹಿಳಾ ಮೋರ್ಚಾ ವತಿಯಿಂದ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಗಣ್ಯರನ್ನು ಅಭಿನಂದಿಸಲಾಯಿತು.

ಮೈಸೂರು, ಮಾ.26– ಮೈಸೂರಿನ ನರಸಿಂಹರಾಜ(ಎನ್‌ಆರ್) ಕ್ಷೇತ್ರದ ಬಿಜೆಪಿ ಮಹಿಳಾ ಮೋರ್ಚಾ ವತಿಯಿಂದ ಅಂತರರಾಷ್ಟ್ರೀಯ ಮಹಿಳಾ ದಿನವನ್ನು ಆಚರಿಸಲಾಯಿತು.

ರಾಜಕುಮಾರ್ ರಸ್ತೆಯಲ್ಲಿರುವ ಲಕ್ಷ್ಮೀ ವೆಂಕಟೇಶ್ವರ ದೇವಸ್ಥಾನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮವನ್ನು ಎನ್‌ಆರ್ ಕ್ಷೇತ್ರದ ಬಿಜೆಪಿ ಮುಖಂಡ, ಮಾಜಿ ಮೇಯರ್ ಸಂದೇಶ್ ಸ್ವಾಮಿ ಉದ್ಘಾಟಿಸಿದರು.

ಈ ವೇಳೆ ಎನ್‌ಆರ್ ಪೊಲೀಸ್ ಠಾಣೆ ಸಬ್ ಇನ್ಸ್‌ಪೆಕ್ಟರ್ ಧನಲಕ್ಷ್ಮಿ, ಮಹಿಳಾ ಸುರಕ್ಷತೆ ಮತ್ತು ಸಬಲೀಕರಣ ಕುರಿತು ಮಾತನಾಡಿದರು. ಅಂತರರಾಷ್ಟ್ರೀಯ ಕ್ರೀಡಾಪಟು ಅಂಬಿಕಾ, ಸಿರಿಧಾನ್ಯಗಳ ಮಹತ್ವದ ಬಗ್ಗೆ ಮಾಹಿತಿ ನೀಡಿದರು.

ಕ್ಷೇತ್ರದ ಬಿಜೆಪಿ ಅಧ್ಯಕ್ಷ ಮಂಜುನಾಥ್ ಸ್ಮಾರ್ಟ್, ಜಿಲ್ಲಾ ಕಾರ್ಯದರ್ಶಿ ಜಿ.ಗಿರಿಧರ್, ನಗರ ಮಹಿಳಾ ಮೋರ್ಚಾ ಮುಖಂಡರಾದ ರೇಣುಕಾ ರಾಜು, ಚಂದ್ರಕಲಾ, ಶಾಂತ ಗೌಡ, ಮಾಲಿನಿ ಪಾಲಾಕ್ಷ, ಸರಸ್ವತಿ ಮತ್ತಿತರರು ಉಪಸ್ಥಿತರಿದ್ದರು.

ತಂಬಾಕಿಗೆ ಬೆಂಬಲ ಬೆಲೆ ನಿಗದಿಗೆ ಒತ್ತಾಯಿಸಿ ಪ್ರತಿಭಟನೆ

ಹುಣಸೂರು, ಮಾ.26– ಕೆಜಿ ತಂಬಾಕಿಗೆ 410 ರೂ. ಬೆಂಬಲ ಬೆಲೆ ನಿಗದಿಪಡಿಸಬೇಕು ಎಂದು ಒತ್ತಾಯಿಸಿ ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಕರ್ನಾಟಕ ರಾಜ್ಯ ತಂಬಾಕು ಬೆಳೆಗಾರರ ಹಿತರಕ್ಷಣಾ ಹೋರಾಟ ಸಮಿತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ನಗರದ ಉಪವಿಭಾಗಾಧಿಕಾರಿ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ತಂಬಾಕಿಗೆ ಬೆಂಬಲ ಬೆಲೆ ನಿಗದಿ ಮಾಡಬೇಕು. ರೈತ ಹೋರಾಟಕ್ಕೆ ಜಯವಾಗಲಿ. ತಂಬಾಕು ಬೆಳೆಗಾರರಿಗೆ ಅನ್ಯಾಯ ಮಾಡುತ್ತಿರುವ ರಾಜ್ಯ ಹಾಗೂ ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಜಿಲ್ಲಾ ಕಾರ್ಯದರ್ಶಿ ಜಗದೀಶ್ ಸೂರ್ಯ ಮಾತನಾಡಿ, ಸಾಲ ಸೋಲ ಮಾಡಿ ತಂಬಾಕು ಹದಗೊಳಿಸಿರುವ ರೈತರು ಉತ್ತಮ ಬೆಲೆ ನಿರೀಕ್ಷೆಯಲ್ಲಿದ್ದರು. ಆದರೆ ಸೂಕ್ತ ಬೆಲೆ ಸಿಗದೇ ಕಂಗಾಲಾಗಿದ್ದಾರೆ. ಹೀಗಾಗಿ ಕೇಂದ್ರ ಸರ್ಕಾರ ಮಧ್ಯ ಪ್ರವೇಶಿಸಿ ಕೆಜಿ ತಂಬಾಕಿಗೆ 410 ರೂ. ದರ ನಿಗದಿಪಡಿಸಬೇಕು ಎಂದು ಒತ್ತಾಯಿಸಿದ ಅವರು, ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಈಗಾಗಲೇ ಸಭೆ ನಡೆದರೂ ಯಾವುದೇ ಪ್ರಯೋಜನವಾಗಿಲ್ಲ. ಕೂಡಲೇ ಜಿಲ್ಲಾಧಿಕಾರಿಗಳು ಈ ಬಗ್ಗೆ ಕ್ರಮ ವಹಿಸಬೇಕು ಎಂದರು.

ಈ ಭಾಗದ ಜನಪ್ರತಿನಿಧಿಗಳು ಬೆಂಬಲ ಬೆಲೆ ನಿಗದಿಗೊಳಿಸುವಂತೆ ಕೇಂದ್ರದ ಮೇಲೆ ಒತ್ತಡ ಹೇರಬೇಕು. ಮಾರುಕಟ್ಟೆ ಆರಂಭದಲ್ಲಿ 320 ರೂ. ದರವಿತ್ತು ಇದೀಗ 240 ರಿಂದ 260 ರೂ. ಇರುವುದರಿಂದ ಕೆಜಿಗೆ 80 ರಿಂದ 100 ನಷ್ಟ ಅನುಭವಿಸುವಂತಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕೆಪಿಆರ್‌ಎಸ್‌ನ ಜಿಲ್ಲಾ ಉಪಾಧ್ಯಕ್ಷ ಕೆ. ಬಸವರಾಜು ಮಾತನಾಡಿದರು. ಪ್ರತಿಭಟನೆಯಲ್ಲಿ ಕೆಪಿಆರ್‌ಎಸ್ ಜಿಲ್ಲಾಧ್ಯಕ್ಷ ಚಿಕ್ಕಣ್ಣ ಗೌಡ, ತಾಲೂಕು ಅಧ್ಯಕ್ಷ ಚಂದ್ರಶೇಖರ್, ಕಾರ್ಯದರ್ಶಿ ಹೆಚ್.ಡಿ.ಬೀರೇಶ್ವರ್, ಮುಖಂಡರಾದ ಬಸವರಾಜು, ಗೋವಿಂದಯ್ಯ, ನಟರಾಜು, ಪುಟ್ಟರಾಜು, ಗೋವಿಂದೇಗೌಡ, ಕರಿಯಪ್ಪ, ಮೈಲಾರಿ, ಕರಿಯಣ್ಣ, ಸಿಂಧ್ಯಾ ಇತರರಿದ್ದರು.

ಕಂಪಲಾಪುರದಲ್ಲೂ ಪ್ರತಿಭಟನೆ



ತಂಬಾಕಿಗೆ ಸೂಕ್ತ ಬೆಂಬಲ ಬೆಲೆ ಸಿಗದೇ ಕಂಗಾಲಾಗಿರುವ ತಂಬಾಕು ಬೆಳೆಗಾರರು ಅಮು ಕಂಪಲಾಪುರದ ತಂಬಾಕು ಮಾರುಕಟ್ಟೆಯಲ್ಲಿ ತಲೆ ಮೇಲೆ ಹೊಗೆ ಸೊಪ್ಪನ್ನು ಇಟ್ಟು ಅದರ ಮೇಲೆ ಚಪ್ಪಲಿ ಇಟ್ಟು ಪ್ರತಿಭಟನೆ ನಡೆಸಿದರು.

ಒಳ ಮೀಸಲಾತಿ ಜಾರಿಗೆ ಆಗ್ರಹಿಸಿ ಆದಿಜಾಂಬವ ಸಂಘಟನೆ ಪ್ರತಿಭಟನೆ



ಒಳ ಮೀಸಲಾತಿ ಜಾರಿಗೆ ಆಗ್ರಹಿಸಿ ರಾಜ್ಯ ಆದಿಜಾಂಬವ ಸಂಘ ಮೈಸೂರು ವಿಭಾಗ ಸಮಿತಿ ವತಿಯಿಂದ ಗುರುವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಮಾ.26(ಎಂಕೆ)– ಪರಿಶಿಷ್ಟ ಜಾತಿ ಒಳ ಮೀಸಲಾತಿ ಜಾರಿಗೆ ಒತ್ತಾಯಿಸಿ ರಾಜ್ಯ ಆದಿಜಾಂಬವ ಸಂಘ ಮೈಸೂರು ವಿಭಾಗ ಸಮಿತಿ ವತಿಯಿಂದ ಗುರುವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಜಿಲ್ಲಾಧಿಕಾರಿ ಕಚೇರಿ ಎದುರು ಜಮಾವಣೆಗೊಂಡ ನೂರಾರು ಮಂದಿ ನ್ಯಾನಾಗಮೋಹನ್ ದಾಸ್ ವರದಿ ವೈಜ್ಞಾನಿಕವಾಗಿದ್ದು, ಸಮಪಾಲು–ಸಮಬಾಳಿಗಾಗಿ ಒಳ ಮೀಸಲಾತಿ ಜಾರಿ ಮಾಡುವಂತೆ ಒತ್ತಾಯಿಸಿದರು.

ಅಸಮಾನತೆ ಆಧಾರದ ಮೇಲೆ ವರ್ಗೀಕರಣವಾಗಿರುವ ಜಾತಿ ವ್ಯವಸ್ಥೆಯಲ್ಲಿ ಶೋಷಣೆಗೆ ಒಳಗಾಗಿರುವ ಪರಿಶಿಷ್ಟ ಜಾತಿಯ ಸಮುದಾಯಗಳು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯವಾಗಿ ಬೆಳೆಯಲು ಮೀಸಲಾತಿ ಅವಶ್ಯವಾಗಿದೆ. ಮೀಸಲಾತಿಯನ್ನು ವ್ಯವಸ್ಥಿತವಾಗಿ ಹಂಚಿಕೆ ಮಾಡುವ ಹಾಗೂ ಪರಿಶಿಷ್ಟ ಜಾತಿಯ ಎಲ್ಲಾ ಸಮುದಾಯಗಳಿಗೂ ನ್ಯಾಯ ಒದಗಿಸುವ ನಿಟ್ಟಿನಲ್ಲಿ ನ್ಯಾಹಾವನೂರು ಆಯೋಗ, ನ್ಯಾಯಮೂರ್ತಿ ಸದಾಶಿವ ಆಯೋಗ, ನ್ಯಾನಾಗಮೋಹನ್ ದಾಸ್ ಆಯೋಗ ಕೈಗೊಂಡ ಸಮೀಕ್ಷೆಯಲ್ಲಿ ಮಾದಿಗರ ಸಂಖ್ಯೆ ಹೆಚ್ಚಾಗಿರುವುದು ಸ್ಪಷ್ಟವಾಗಿದೆ ಎಂದರು.

ಜನಸಂಖ್ಯೆ ಆಧಾರದ ಮೇಲೆ ಒಳ ಮೀಸಲಾತಿಯಲ್ಲಿ ಹೆಚ್ಚಿನ ಪಾಲು ಪಡೆಯಲು ಮಾದಿಗ ಸಮುದಾಯ ಅರ್ಹವಿದೆ. ಆದರೆ, ಇದುವರೆಗೂ ಹೆಚ್ಚಿನ ಅವಕಾಶ ಪಡೆದವರೇ ಒಳ ಮೀಸಲಾತಿ ವಿರೋಧಿಸುತ್ತಿರುವುದು ಸಂವಿಧಾನ ವಿರೋಧಿ ನಡೆಯಾಗಿದೆ. ಇದೀಗ ರಾಜ್ಯ ಸರ್ಕಾರ 56,432 ಹುದ್ದೆಗಳ ನೇಮಕಾತಿಗೆ ಮುಂದಾಗಿದ್ದು, ಒಳ ಮೀಸಲಾತಿ ಜಾರಿಗೊಳಿಸುವ ಮೂಲಕ ಅನ್ಯಾಯಕ್ಕೊಳಗಾಗಿರುವ ಮಾದಿಗ ಸಮುದಾಯಕ್ಕೆ ಸರ್ಕಾರ ನ್ಯಾಯ ಒದಗಿಸಬೇಕು ಎಂದು ಆಗ್ರಹಿಸಿದರು.

ಬಳಿಕ ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು. ರಾಜ್ಯ ಆದಿಜಾಂಬವ ಸಂಘದ ವಿಭಾಗೀಯ ಅಧ್ಯಕ್ಷ ಎಡತೊರೆ ಎಂ.ನಿಂಗರಾಜ್, ಜಿಲ್ಲಾ ಮುಖಂಡರಾದ ಡಿ.ಕುಮಾರ್, ಎಂ. ಲೋಕೇಶ್, ತಾಲೂಕು ಮುಖಂಡರಾದ ಸ್ವಾಮಿ, ಕುಮಾರ್ ಕುಂಬ್ರಳ್ಳಿ ಮಠ, ಶೇಖರ್ ಮಾರ್ಬಳ್ಳಿಹುಂಡಿ ಮತ್ತಿತರರಿದ್ದರು.

ಹುಣಸೂರು ಆಭರಣದ ಅಂಗಡಿ ದರೋಡೆ ಪ್ರಕರಣದ ಖದೀಮರ ಬೇಟೆ ಮುಂದುವರೆದಿದೆ.!

ಮೈಸೂರು, ಮಾ.26(ಎಂಕೆ)– ಹುಣಸೂರಿನ ಸ್ಕೈ ಗೋಲ್ಡ್ ಮತ್ತು ಡೈಮಂಡ್ ಸ್ಟೋರ್ ದರೋಡೆ ಪ್ರಕರಣ ಸಂಬಂಧ ಇಬ್ಬರು ಆರೋಪಿಗಳ ಬಂಧನಕ್ಕೆ ವಿಶೇಷ ತಂಡ ರಚಿಸಲಾಗಿದ್ದು, ಕಾರ್ಯಾಚರಣೆ ಮುಂದುವರೆಸಲಾಗಿದೆ ಎಂದು ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದರು.

2025ರ ಡಿ.28 ರಂದು ನಡೆದ 10 ಕೋಟಿ ಮೌಲ್ಯದ 8.32 ಕೆಜಿ ಚಿನ್ನಾಭರಣ ದರೋಡೆ ಸಂಬಂಧ ಈಗಾಗಲೇ ಪ್ರಮುಖ ಆರೋಪಿಗಳಾದ ಪಂಕಜ್ ಕುಮಾರ್, ರಿಷಿಕೇಶ್ ಸಿಂಗ್ ಅಲಿಯಾಸ್ ಪತ್ತಲ್ ಸಿಂಗ್ ಅವರನ್ನು ಬಂಧಿಸಲಾಗಿದ್ದು, ಇಬ್ಬರು ಆರೋಪಿಗಳು ತಲೆಮರೆಸಿಕೊಂಡಿದ್ದಾರೆ ಎಂದರು.

ಆರೋಪಿಗಳನ್ನು ಪತ್ತೆಹಚ್ಚಲು ಮತ್ತು ಕದ್ದ ಚಿನ್ನವನ್ನು ವಶಪಡಿಸಿಕೊಳ್ಳುವ ಪ್ರಯತ್ನ ಮುಂದುವರೆದಿದೆ. ಆರೋಪಿಗಳು ಉತ್ತರ ಭಾರತದವರಾಗಿದ್ದು, ಯಾವುದೇ ಸುಳಿವು ನೀಡದೆ ಕಣ್ಮರೆಯಾಗಿದ್ದಾರೆ. ಬಂಧಿತ ಪಂಕಜ್ ಕುಮಾರ್ ಮತ್ತು ರಿಷಿಕೇಶ್ ಸಿಂಗ್ ನೀಡಿರುವ ಮಾಹಿತಿ ಆಧರಿಸಿ ಕಾರ್ಯಾಚರಣೆ ತೀವ್ರಗೊಳಿಸಲಾಗಿದೆ ಎಂದರು.

ಡಿ.ಕೆ.ಶಿವಕುಮಾರ್–ಮುನಿರತ್ನ ವಾಕ್ಸಮರ; ವಿಧಾನಸಭೆಯಲ್ಲಿ ಕೋಲಾಹಲ



ಡಿ.ಕೆ.ಶಿವಕುಮಾರ್



ಮುನಿರತ್ನ

ಬೆಂಗಳೂರು, ಮಾ.26– ವಿಧಾನ ಸಭೆಯಲ್ಲಿ ಇಂದು ಡಿಸಿಎಂ ಡಿಕೆ ಶಿವ ಕುಮಾರ್ ಹಾಗೂ ಆರ್‌ಆರ್ ನಗರದ ಬಿಜೆಪಿ ಶಾಸಕ ಮುನಿರತ್ನ ನಡುವೆ ತೀವ್ರ ಮಾತಿನ ಚಕಮಕಿ ನಡೆಯಿತು.

ಬೆಂಗಳೂರಿನ ಅಭಿವೃದ್ಧಿಗೆ ಸಂಬಂಧಿಸಿದ ಚರ್ಚೆಗೆ ಉತ್ತರ ನೀಡುತ್ತಿರುವ ಸಂದರ್ಭದಲ್ಲಿ ಡಿಕೆಶಿ ಹಾಗೂ ಮುನಿರತ್ನ ನಡುವೆ ಆಕ್ಷೇಪಾರ್ಹ ಪದ ಬಳಕೆ ನಡೆಯಿತು.

ಇದೇ ಸಂದರ್ಭದಲ್ಲಿ ಡಿಕೆಶಿ ಕುರಿತಾಗಿ ಆಡಿದ ಮಾತಿಗೆ ಕೆರಳಿದ ಕಾಂಗ್ರೆಸ್ ಶಾಸಕರು ಸದನದ ಬಾವಿಗಿಳಿದು ಧರಣಿ ನಡೆಸಿ ಮುನಿರತ್ನ ವಿರುದ್ಧ ಕ್ರಮಕ್ಕೆ ಆಗ್ರಹಿಸಿದರು. ಕೊನೆಗೂ ಸ್ಪೀಕರ್ ಯು.ಟಿ ಖಾದರ್ ಅವರು ಆಕ್ಷೇಪಾರ್ಹ ಪದಗಳನ್ನು ಸದನದ ಕಡತದಿಂದ ತೆಗೆದುಹಾಕುವಂತೆ ಸೂಚಿಸಿದರು.

ಮುನಿರತ್ನ ಕೇಸ್‌ಗಳ ಬಗ್ಗೆ ಮಾತನಾಡುವುದು ಬೇಕಾದಷ್ಟಿದೆ. ಆರ್.ಅಶೋಕ್‌ಗೆ ಹೇಗೆ... ಇಂಜೆಕ್ಷನ್ ಚುಚ್ಚೋಕೆ ಹೋದರು ಎಂದು ಎಫ್‌ಐಆರ್ ಇದೆ. ಅದರ ಬಗ್ಗೆ ಚರ್ಚೆ ಮಾಡಬೇಕು ಅಂದರೆ ಮಾಡುತ್ತೇನೆ ಎಂದು ಡಿಕೆಶಿ ಹೇಳಿದರು.

ಇದರಿಂದ ರೊಚ್ಚಿಗೆದ್ದ ಮುನಿರತ್ನ, ಈ ವೇಳೆ ಎಲ್ಲವನ್ನೂ ಹೇಳಿ ಎಂದು ಸವಾಲು ಹಾಕಿದರು. ಡಿಕೆಶಿ ಮಾತಿಗೆ ಅಶೋಕ್, ಅಶ್ವಥ್ ನಾರಾಯಣ್ ಆಕ್ಷೇಪ ವ್ಯಕ್ತಪಡಿಸಿದರು. ಆದರೆ ಮುನಿರತ್ನ ಚರ್ಚೆಗೆ ಪಟ್ಟು ಹಿಡಿದರು. ಹೀಗಾಗಿ ಸದನದಲ್ಲಿ ಭಾರೀ ಗದ್ದಲ ಉಂಟಾಯಿತು.

ಡಿಕೆಶಿ ಮಾತಿಗೆ ಕೆಂಡಾಮಂಡಲರಾದ ಮುನಿರತ್ನ, ಇವರಿಗೆ ಮಕ್ಕಳಿವೆ ಅದನ್ನು ಮರೆಯಬೇಡಿ ಎಂದು ಆಕ್ರೋಶ ವ್ಯಕ್ತಪಡಿಸಿದರು. ಇದಕ್ಕೆ, ಹೇ... ಕುಳಿತುಕೋ ಎಂದು ಡಿಕೆಶಿ ಕಿಡಿಕಾರಿದರು.

ನೀರಿನ ಮರು ಬಳಕೆಗೆ ಒತ್ತು ನೀಡುವುದು ಅವಶ್ಯ

ಬೆಂಗಳೂರು ವಿಜ್ಞಾನ ಸಂಸ್ಥೆ ನಿವೃತ್ತ ಪ್ರಾಧ್ಯಾಪಕ ಪ್ರೊ.ಎಚ್.ಎನ್.ಚಾಣಕ್ಯ ಅಭಿಮತ

ಮೈಸೂರು, ಮಾ.26(ವಿವಿಹೆಚ್)– ಮೈಸೂರಂತಹ ನಗರಗಳಲ್ಲಿ ದಿನೇ–ದಿನೇ ನೀರಿನ ಬಳಕೆ ಹೆಚ್ಚುತ್ತಿರುವುದರಿಂದ ನೀರಿನ ಗುಣಮಟ್ಟವನ್ನು ಕಾಪಾಡುವುದರ ಜೊತೆಗೆ ನೀರಿನ ಮರುಬಳಕೆಗೆ ಒತ್ತು ನೀಡುವುದು ಮುಖ್ಯ ಎಂದು ಬೆಂಗಳೂರು ವಿಜ್ಞಾನ ಸಂಸ್ಥೆ ನಿವೃತ್ತ ಪ್ರಾಧ್ಯಾಪಕ ಪ್ರೊ. ಎಚ್.ಎನ್.ಚಾಣಕ್ಯ ತಿಳಿಸಿದರು.

ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಇನ್ಸಿಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಂಭಾಗಣದಲ್ಲಿ ಗುರುವಾರ ನಡೆದ ಜಲ ಸಂರಕ್ಷಣೆ ಮತ್ತು ಪರಿಸರ ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ರಾಜ್ಯ ಮಾತ್ರವಲ್ಲದೇ ದೇಶಾದ್ಯಂತ ನೀರಿನ ಮಾಲಿನ್ಯ ಹೆಚ್ಚಾಗುತ್ತಿದೆ. ಹೀಗಿದ್ದರೂ ನೀರಿನ ಬಳಕೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಇದನ್ನು ಕಡಿಮೆ ಮಾಡಿ, ನೀರಿನ ಮರು ಬಳಕೆಗೆ ತಂತ್ರಜ್ಞಾನ ಮತ್ತು ಸಾರ್ವಜನಿಕರಿಗೆ ಅರಿವು ಮೂಡಿಸುವುದು ಅತ್ಯಗತ್ಯ ಎಂದು ಅಭಿಪ್ರಾಯಿಸಿದರು.

ನೀರಿನ ಮಾಲಿನ್ಯ, ಅಭಾವ ಹೆಚ್ಚಾಗುತ್ತಿರುವ ದಿನಗಳಲ್ಲಿ ದೈನಂದಿನ ಬಳಕೆಯಲ್ಲಿ ನೀರನ್ನು ಸಾಧ್ಯವಾದಷ್ಟು ಮಿತವಾಗಿ ಬಳಸಬೇಕು. ಕುಡಿಯುವ ನೀರನ್ನು ಇತರೆ ಕೆಲಸಗಳಿಗೆ ಬಳಸದೆ, ಮರು ಬಳಕೆ ಮಾಡಬಹುದಾದ ನೀರನ್ನು ಆಹಾರ ಕೃಷಿ, ಗೃಹ ಬಳಕೆ, ಕೈಗಾರಿಕೆಯಲ್ಲಿ ಬಳಸುವ ಮೂಲಕ ನೀರಿನ ಅಭಾವವನ್ನು ತಡೆಯಬಹುದಾಗಿದೆ ಎಂದರು.

ಹಳ್ಳಿಗಳಲ್ಲಿ ನೀರಿನ ಬಹು ಬಳಕೆ ಸಾಮಾನ್ಯವಾಗಿ ಕಂಡುಬರುತ್ತದೆ. ಆದರೆ ನಗರಗಳಲ್ಲಿ ನೀರಿನ ಸರಬರಾಜು ಮತ್ತು ಗುಣಮಟ್ಟ ಕಾಪಾಡಲು ಸರಿಯಾದ ಯೋಜನೆಯ ಅಗತ್ಯವಿದೆ ಎಂದು ಹೇಳಿದರು.

ಮೈಸೂರಿನಲ್ಲಿ ನೀರಿನ ಮೂಲಗಳು ಸೀಮಿತವಾಗಿರುವುದರಿಂದ ನೀರಿನ ಸಂರಕ್ಷಣೆ ಅತ್ಯಂತ ಅಗತ್ಯವಾಗಿದೆ. ಮಳೆನೀರು ಸಂಗ್ರಹಣೆ, ನೀರಿನ ಮರುಬಳಕೆ, ತ್ಯಾಜ್ಯ ನಿರ್ವಹಣೆ ಮತ್ತು ಶುದ್ಧೀಕರಣ ಕ್ರಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕಾಗಿದೆ ಎಂದರು.

ಕಾರ್ಯಕ್ರಮದಲ್ಲಿ ನಿವೃತ್ತ ಜಲ ಸಂಪನ್ಮೂಲ ಇಲಾಖೆಯ ಮಾಜಿ ಅಧೀಕ್ಷಕ ಅಭಿಯಂತರ ಎಚ್.ರಮೇಶ್, ಎಸ್‌ಜೆಸಿಇ ಕಾಲೇಜಿನ ಪ್ರಾಂಶುಪಾಲ ಸಿ.ನಟರಾಜು, ಪಾರ್ಯ ಸೆಲ್ಯೂಷನ್‌ನ ಸಂಸ್ಥಾಪಕ ಆರ್.ಅರ್ಜುನ್, ಐಇಐನ ಎಚ್.ಎಸ್.ಸುರೇಶ್ ಬಾಬು, ಕಾರ್ಯದರ್ಶಿ ನಂಜಯ್ಯ, ಎಸ್‌ಜೆಸಿಇ ಕಾಲೇಜಿನ ಪರಿಸರ ವಿಭಾಗದ ಅಧ್ಯಕ್ಷ ಡಾ.ಬಿ.ಎಂ. ಸದಾಶಿವಮೂರ್ತಿ ಉಪಸ್ಥಿತರಿದ್ದರು.



ಬೆಂಗಳೂರು ವಿಜ್ಞಾನ ಸಂಸ್ಥೆಯ ನಿವೃತ್ತ ಅಧ್ಯಾಪಕ ಪ್ರೊ. ಎಚ್.ಎನ್.ಚಾಣಕ್ಯ ಗಿಡಕ್ಕೆ ನೀರೆರೆಯುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು.

ಮೈಸೂರು ಮಿತ್ರ


ಇಂದಿನಿಂದ ಶ್ರೀರಾಮನವಮಿ ಸಂಗೀತ ಸುಧೆ

ಮೈಸೂರು: ಮೈಸೂರಿನ ಶಿವರಾಮ ಪೇಟೆಯಲ್ಲಿರುವ ಶ್ರೀರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್ ವತಿಯಿಂದ ಶ್ರೀರಾಮಾಭ್ಯುದಯ ಸಭಾದಲ್ಲಿ ಶ್ರೀರಾಮನವಮಿ ಸಂಗೀತ ಸುಧೆ, 136ನೇ ರಾಮೋತ್ಸವ ಹಾಗೂ ಸಂಗೀತೋತ್ಸವವನ್ನು ಮಾ.27ರಿಂದ ಏ.5ರವರೆಗೆ ಏರ್ಪಡಿಸಲಾಗಿದೆ.

ಮಾ.27ರಿಂದರಿಂದ ಏ.5ವರೆಗೂ ಆಲಮ್ಮ ಛತ್ರದಲ್ಲಿ ಸಂಗೀತೋತ್ಸವ ನಡೆಯಲಿದೆ. ನಂತರ ರಾಮೋತ್ಸವ ನಡೆಯಲಿದೆ. ಮಾ.27ರಂದು ಸಂಜೆ 5.30ಕ್ಕೆ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ವಿದುಷಿ ಸೂರ್ಯ ಗಾಂಯತ್ರಿ ಆಗಮಿಸಲಿದ್ದಾರೆ. ಮಾ.29ರಂದು ಸಂಜೆ 6.30ಕ್ಕೆ ಸಂಗೀತ ವಿದ್ವಾನ್ ಅನೂರ್ ಅನಂತ ಕೃಷ್ಣ ಶರ್ಮ ಮತ್ತು ವೃಂದದಿಂದ ವಿಶೇಷ ಕಾರ್ಯಕ್ರಮ ಆಯೋಜಿಸಲಾಗಿದೆ. ಮಾ.30ರಂದು ಸಂಗೀತ ಕಲಾನಿಧಿ ಪ್ರಶಸ್ತಿ ಪುರಸ್ಕೃತರಾದ ವಿದುಷಿ ಜಯಂತಿ ಕುಮರೇಸ್ ಅವರನ್ನು ಅಭಿನಂದಿಸಲಾಗುತ್ತದೆ. ಏ.5ರಂದು ಸಂಜೆ 5 ಗಂಟೆಗೆ ರಘು ಲೀಲಾ ಸ್ಕೂಲ್ ಆಫ್ ಮ್ಯೂಸಿಕ್‌ನಿಂದ ಸಂಕೀರ್ತನೆಯನ್ನು ಪ್ರಾರಂಭಿಸಲಾಗುತ್ತದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ನಾಳೆ ಮೈಸೂರಿಗೆ ಸಿಎಂ ಸಿದ್ದರಾಮಯ್ಯ

ಮೈಸೂರು,ಮಾ.26 (ಬಿಎಲ್‌ಯು) –ಎರಡು ದಿನಗಳ ಪ್ರವಾಸಕ್ಕಾಗಿ



ಮುಖ್ಯಮಂತ್ರಿ ಸಿದ್ದರಾಮಯ್ಯ ಮಾರ್ಚ್ 28ರಂದು ತವರು ಜಿಲ್ಲೆ ಮೈಸೂರಿಗೆ ಆಗಮಿಸಲಿದ್ದಾರೆ.

ಅಂದು ಮಧ್ಯಾಹ್ನ 3 ಗಂಟೆಗೆ ಹೆಚ್‌ಎಎಲ್ ವಿಮಾನ ನಿಲ್ದಾಣ ದಿಂದ ವಿಶೇಷ ವಿಮಾನದಲ್ಲಿ ಹೊರಟು 3.25 ಗಂಟೆಗೆ ಮೈಸೂರು ವಿಮಾನ ನಿಲ್ದಾಣಕ್ಕೆ ಆಗಮಿಸುವರು. ತರುವಾಯ 4, ಹಾಗೂ 5 ಗಂಟೆಗೆ ನಡೆಯುವ ಎರಡು ಪ್ರತ್ಯೇಕ ಖಾಸಗಿ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ. ಬಳಿಕ ಮೈಸೂರಲ್ಲೇ ವಾಸ್ತವ್ಯ ಹೂಡಲಿದ್ದಾರೆ. ಮಾ.29ರಂದು ಬೆಳಿಗ್ಗೆ 8 ಗಂಟೆಗೆ ಕರ್ನಾಟಕ ಪೊಲೀಸ್ ಅಕಾಡೆಮಿಯಲ್ಲಿ ನಡೆಯುವ 46ನೇ ತಂಡದ ಪೊಲೀಸ್ ಉಪನಿರೀಕ್ಷಕ ಪ್ರಶಿಕ್ಷಣಾರ್ಥಿಗಳ ನಿರ್ಗಮನ ಪಥ ಸಂಚಲನದಲ್ಲಿ ಪಾಲ್ಗೊಳ್ಳುವರು. ಮಧ್ಯಾಹ್ನ 3 ಗಂಟೆಗೆ ಮೈಸೂರು ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದಲ್ಲಿ ಬೆಂಗಳೂರಿಗೆ ತೆರಳಲಿದ್ದಾರೆ.

ಮಾ.29ರಂದು ಸಾಹಿತ್ಯ ಚಾವಡಿ ಕಾರ್ಯಕ್ರಮ

ಮೈಸೂರು: ಕಲಾ ಸುರುಚಿ ಸಂಸ್ಥೆ ವತಿಯಿಂದ ಸಾಹಿತ್ಯ ಚಾವಡಿ ಸಂವಾದ ಕಾರ್ಯಕ್ರಮವನ್ನು ಮಾ.29ರಂದು ಬೆಳಿಗ್ಗೆ 10.30ಕ್ಕೆ ಕುವೆಂಪುನಗರದ ಸುರುಚಿ ರಂಗಮನೆಯಲ್ಲಿ ಆಯೋಜಿಸಲಾಗಿದೆ ಕಾರ್ಯಕ್ರಮದಲ್ಲಿ 'ಮೇರು ಸ್ಮೃತಿ' ಮಹನೀಯರೊಂದಿಗಿನ ಒಡನಾಟದ ನೆನಪುಗಳು ವಿಷಯ ಕುರಿತು ಸಂಶೋಧಕ ಪ್ರೊ.ಟಿ.ವಿ.ವೆಂಕಟಾಚಲಶಾಸ್ತ್ರಿ ಭಾಷಣ ಮಾಡಲಿದ್ದಾರೆ. ಮಾಹಿತಿಗೆ ಮೊ.9880145427, 9844405342 ಸಂಪರ್ಕಿಸಿ.

ತಪಾಸಣಾ ಶಿಬಿರ

ಮೈಸೂರು: ಅಂತಾರಾಷ್ಟ್ರೀಯ ಮಹಿಳಾ ದಿನದ ಅಂಗವಾಗಿ ದಟ್ಟಗಳ್ಳಿಯ ಶ್ರೀರಂಗ ಆಯುರ್ವೇದ ಚಿಕಿತ್ಸಾ ಮಂದಿರದಲ್ಲಿ ಮಾ.28ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 2ರವರೆಗೆ ಮಹಿಳೆಯರಿಗಾಗಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ಮೊ. 8277888527.

ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ವಿಶ್ವ ಮೂತ್ರ ಪಿಂಡ ದಿನಾಚರಣೆ

ನರ್ಸಿಂಗ್‌ನಿಂದ ವೈದ್ಯರವರೆಗಿನ ವೃತ್ತಿ ಅತ್ಯಂತ ಮಹತ್ವದ್ದು



ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆ ಆವರಣದಲ್ಲಿ ವಿಶ್ವ ಮೂತ್ರಪಿಂಡ ದಿನಾಚರಣೆ ಅಂಗವಾಗಿ ಗುರುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಜಾವಗಲ್ ಶ್ರೀನಾಥ್ ಮಾತನಾಡಿದರು.

ಮೈಸೂರು,ಮಾ.26(ಜಿಎ)–ನರ್ಸಿಂಗ್‌ನಿಂದ ಹಿಡಿದು ವೈದ್ಯರವರೆಗಿನ ವೃತ್ತಿ ಅತ್ಯಂತ ಪ್ರಮುಖವಾದುದು ಎಂದು ಮಾಜಿ ಕ್ರಿಕೆಟರ್ ಜಾವಗಲ್ ಶ್ರೀನಾಥ್ ತಿಳಿಸಿದರು.

ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆ ಆವರಣದಲ್ಲಿ ವಿಶ್ವ ಮೂತ್ರಪಿಂಡ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನನ್ನ ತಾಯಿ ಕೂಡ ಕಳೆದ 7 ವರ್ಷ ಕಾಲ ಕಿಡ್ನಿ ಸಮಸ್ಯೆ ಎದುರಿಸಿದರು. ವೈದ್ಯರ ಆರೈಕೆಯಿಂದ ಅವರು ಇನ್ನಷ್ಟು ಕಾಲ ಬದುಕಲು ಸಾಧ್ಯವಾಯಿತು ಎಂದರು.

ರೋಗಿಗಳ ನಾಡಿ ಮಿಡಿತ ಅರಿತು ಅವರಿಗೆ ವೈದ್ಯಕೀಯ ಜ್ಞಾನ ನೀಡಿದರೆ ಅವರು ಚಿಕಿತ್ಸೆಗೆ ಉತ್ತಮ ರೀತಿಯಲ್ಲಿ ಸ್ಪಂದಿಸುತ್ತಾರೆ. ಕಿಡ್ನಿ ರೋಗಿಗಳು ಹೆಚ್ಚು ಡಯಾಲಿಸಿಸ್ ಸಮಸ್ಯೆ ಎದುರಿಸುತ್ತಾರೆ. ಹೆಚ್ಚಿನವರಿಗೆ ಇದರ ಜ್ಞಾನ ಇರುವುದಿಲ್ಲ. ಈ ನಿಟ್ಟಿನಲ್ಲಿ ಜೆಎಸ್‌ಎಸ್ ಎಲ್ಲಾ ವರ್ಗ–ಸಮುದಾಯಗಳ ಜನರಿಗೆ ಉತ್ತಮ ಸೇವೆ ನೀಡುತ್ತ ಬಂದಿದೆ. ಇದು ಸಮಾಜಕ್ಕೆ ನೀಡುತ್ತಿರುವ ಕೊಡುಗೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಕುಲಪತಿ ಡಾ.ಹೆಚ್.ಬಸನಗೌಡಪ್ಪ ಮಾತನಾಡಿ, ಕಿಡ್ನಿ ಬಹಳ ಪ್ರಮುಖ ಅಂಗ. ಸದಾ ಪೇನ್ ಕಿಲ್ಲರ್ ಮಾತ್ರೆ ಸೇವನೆಯಿಂದ ಕಿಡ್ನಿ ಆರೋಗ್ಯ ಹಾಳು ಮಾಡುತ್ತಿವೆ. ವೈದ್ಯರ ಸಲಹೆ ಇಲ್ಲದೇ ಯಾವುದೇ ಮಾತ್ರೆ ಪಡೆಯಬಾರದು. ಹಾಗೆಯೇ ವೈದ್ಯರ ಸಲಹೆ ಇಲ್ಲದೆ ಸಪ್ಲಿಮೆಂಟ್ ಪಡೆಯಬಾರದು ಎಂದರು.

ಕಿಡ್ನಿ ಕಾಯಿಲೆ ತುಂಬಾ ಸೈಲೆಂಟ್. ಬೇಗನೆ ಬೆಳಕಿಗೆ ಬರದು. ಹೀಗಾಗಿ ಆಗಾಗ್ಗೆ ಪರೀಕ್ಷೆಗೆ ಒಳಗಾಗಬೇಕು. ಮಧುಮೇಹಿಗಳು ಬಹಳ ಎಚ್ಚರ ವಹಿಸುವುದು ಅಗತ್ಯ. ಕಿಡ್ನಿ ಚಿಕಿತ್ಸೆ ಜಾಗತಿಕವಾಗಿ ಸುಲಭವಾಗಿ ಸಿಗುವಂತೆ ಆಗಬೇಕು. ಅಂಗಾಂಗ ದಾನದಿಂದ ನಾಲ್ಕಾರು ಜೀವ ಉಳಿಸಬಹುದು. ಈ ಬಗ್ಗೆ ಜನರಲ್ಲಿ ಜಾಗೃತಿ ಹೆಚ್ಚಬೇಕು. ಜೆಎಸ್‌ಎಸ್ ಆಸ್ಪತ್ರೆ 4 ದಶಕಗಳ ಹಿಂದೆ ಕಿಡ್ನಿ ಕಸಿಯಂತಹ ಚಿಕಿತ್ಸೆ ಆರಂಭಿಸಿದೆ. ಈಗ ಸಾಕಷ್ಟು ಆಧುನಿಕ ಚಿಕಿತ್ಸೆ ಲಭ್ಯ ಇದೆ. ಆದರೆ ಅದಕ್ಕಿಂತ ಕಿಡ್ನಿ ಹಾಳಾಗದಂತೆ ನೋಡಿಕೊಳ್ಳುವುದು ಉತ್ತಮ ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಕುಲಸಚಿವ ಡಾ.ಬಿ.ಮಂಜುನಾಥ್, ಮಂಜುನಾಥ ಶೆಟ್ಟಿ ಅಮೃತ್‌ರಾಜ್‌ಗೌಡ ಉಪಸ್ಥಿತರಿದ್ದರು.

ಮಾ.30ರ ಎಸ್‌ಎಸ್‌ಎಲ್‌ಸಿ ಹಿಂದಿ ಪರೀಕ್ಷೆ ಮಾ.31ಕ್ಕೆ ನಿಗದಿ

ಮೈಸೂರು, ಮಾ.26(ಎಂಟಿವೈ)–ರಾಜ್ಯ ಸರ್ಕಾರ ಈ ಹಿಂದೆ ಘೋಷಿಸಿದ್ದ ಮಹಾವೀರ ಜಯಂತಿ ರಜೆಯನ್ನು ಮಾರ್ಪಡಿಸಿದ ಹಿನ್ನೆಲೆಯಲ್ಲಿ ಮಾ.30ರಂದು ನಿಗದಿಯಾಗಿದ್ದ ಎಸ್‌ಎಸ್‌ಎಲ್‌ಸಿ ತೃತೀಯ ಭಾಷೆ ಹಿಂದಿ ಪರೀಕ್ಷೆ ಮಾ.31ಕ್ಕೆ ಮುಂದೂಡಲಾಗಿದ್ದು, ಮಾ.28ರಂದು ನಿಗದಿಯಾಗಿರುವ ಗಣಿತ ಪರೀಕ್ಷೆ ಎಂದಿನಂತೆ ನಡೆಯಲಿದೆ ಎಂದು ಡಿಡಿಪಿಐ ಡಿ.ಉದಯ್‌ಕುಮಾರ್ ಸ್ಪಷ್ಟಪಡಿಸಿದ್ದಾರೆ.

ಪ್ರಸಕ್ತ ಸಾಲಿನ ಮಹಾವೀರ ಜಯಂತಿ ಸಾರ್ವತ್ರಿಕ ರಜೆ ಈ ಹಿಂದೆ ಮಾ.31ಕ್ಕೆ ನಿಗದಿಯಾಗಿತ್ತು. ಆದರೆ ಹೊಸ ಆದೇಶದಂತೆ ಮಾ.31ರ ಬದಲಾಗಿ, ಮಾ.30ಕ್ಕೆ ಮಾರ್ಪಾಡು ಮಾಡಲಾಗಿದೆ. ಹಾಗಾಗಿ ಮಾ.30ರಂದು ನಿಗದಿಯಾಗಿದ್ದ ಎಸ್‌ಎಸ್‌ಎಲ್‌ಸಿ ತೃತೀಯ ಭಾಷೆ ಹಿಂದಿ ಪರೀಕ್ಷೆ ಮಾ.31ರಂದು ನಿಗದಿತ ಸಮಯದಲ್ಲಿ ನಡೆಯಲಿದೆ. ಎಂದಿನಂತೆ ಜಿಲ್ಲೆಯಲ್ಲಿ 136 ಪರೀಕ್ಷಾ ಕೇಂದ್ರದಲ್ಲಿ ಮಾ.28ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 1.15ರವರೆಗೆ ಗಣಿತ ಪರೀಕ್ಷೆ ನಡೆಯಲಿದೆ. ಇದುವರೆಗೂ ಮೂರು ಪತ್ರಿಕೆ ಪರೀಕ್ಷೆ ನಡೆದಿದ್ದು, ಎಲ್ಲಾ ಕೇಂದ್ರಗಳಲ್ಲೂ ಸುಗಮ ರೀತಿ ನೆರವೇರಿವೆ. ಯಾವುದೇ ಅಹಿತಕರ ಘಟನೆ ಅಥವಾ ನಕಲು ಮಾಡುವ ಪ್ರಕರಣ ವರದಿಯಾಗಿಲ್ಲ. ಎಲ್ಲಾ 2080 ಪರೀಕ್ಷಾ ಕೊಠಡಿಗಳಲ್ಲಿ ಸಿಸಿ ಕ್ಯಾಮರಾ ಅಳವಡಿಸಿ, ನೇರ ದೃಶ್ಯಾವಳಿ ಜಿಲ್ಲಾಧಿಕಾರಿ ಕಚೇರಿಯಲ್ಲಿರುವ ವೆಬ್‌ಕಾಸ್ಟಿಂಗ್ ಕೊಠಡಿಯಲ್ಲಿ ನಿರ್ವಹಣೆ ಆಗುತ್ತಿರುವುದರಿಂದ ಪರೀಕ್ಷೆಯಲ್ಲಿ ಅಕ್ರಮಕ್ಕೆ ಅವಕಾಶವಿಲ್ಲ ಎಂದರು.

ಮಾ.18ರಂದು ನಡೆದ ಪ್ರಥಮ ಭಾಷೆ ಪರೀಕ್ಷೆಯಲ್ಲಿ 36,571 ವಿದ್ಯಾರ್ಥಿಗಳಲ್ಲಿ 35,596 ವಿದ್ಯಾರ್ಥಿಗಳು ಹಾಜರಾಗಿ 398 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದರು. ಮಾ.23ರಂದು ನಡೆದ ವಿಜ್ಞಾನ ಪರೀಕ್ಷೆಯಲ್ಲಿ 450 ಮಂದಿ ಗೈರು, ಮಾ.25ರಂದು ನಡೆದ ದ್ವಿತೀಯ ಭಾಷೆಯಲ್ಲಿ 422 ಮಂದಿ ಗೈರಾಗಿದ್ದಾರೆ ಎಂದು ಮಾಹಿತಿ ನೀಡಿದರು.

ಮುಂದಿನ ಪರೀಕ್ಷೆಗಳು

ಮಾ.28ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 1.15ರವರೆಗೆ ಗಣಿತ

ಮಾ.31ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 1.15ರವರೆಗೆ ತೃತೀಯ ಭಾಷೆ ಹಿಂದಿ.

ಏ.2ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 1ರವರೆಗೆ ಸಮಾಜವಿಜ್ಞಾನ

ಮುಂದಿನ ಸಚಿವ ಸಂಪುಟದಲ್ಲಿ ಮುಖ್ಯಮಂತ್ರಿಗಳು ಒಳಮೀಸಲಾತಿ ಹಂಚಿಕೆ ಅನ್ಯಾಯ ಸರಿಪಡಿಸಲಿ

ದಲಿತ, ಪ್ರಗತಿಪರ ಸಂಘಟನೆಗಳ ಒಕ್ಕೂಟದ ಆಗ್ರಹ

ಮೈಸೂರು,ಮಾ.26(ಜಿಎ)–ಒಳ ಮೀಸಲಾತಿ ಹಂಚಿಕೆ ಅನ್ಯಾಯವನ್ನು ಮುಖ್ಯಮಂತ್ರಿಗಳು ಮುಂದಿನ ಸಚಿವ ಸಂಪುಟದಲ್ಲಿ ಸುಪ್ರೀಂಕೋರ್ಟ್ ಆದೇಶದಂತೆ ಪರಾಮರ್ಶೆ ಮಾಡಿ ಸರಿಪಡಿಸುವಂತೆ ದಲಿತ ಪ್ರಗತಿಪರ ಸಂಘಟನೆಗಳ ಒಕ್ಕೂಟದ ಸಂಚಾಲಕ ಪಿ.ರಾಜು ಅಶೋಕಪುರಂ ಒತ್ತಾಯಿಸಿದ್ದಾರೆ.

ಲಂಬಾಣಿ (ಬಂಜಾರ), ಭೋವಿ, ಕೊರಮ ಮತ್ತು ಕೊರಚ ಜಾತಿಗಳನ್ನು ಕರ್ನಾಟಕದ ಪರಿಶಿಷ್ಟ ಜಾತಿಗಳ ಪಟ್ಟಿಯಿಂದ ಕೈಬಿಡಲು ಆದೇಶಿಸುವಂತೆ ಕೋರಿ ಸಲ್ಲಿಸಲಾಗಿದ್ದ ಅರ್ಜಿ ಸಂಬಂಧ ಕೇಂದ್ರ ಹಾಗೂ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನೋಟಿಸ್ ಜಾರಿ ಮಾಡಿದೆ ಎಂದರು.

ಸ್ಪೃಶ್ಯ ಜಾತಿಗಳಾಗಿರುವ ಹಾಗೂ ಪರಿಶಿಷ್ಟ ಜಾತಿಗಳಲ್ಲದ ಲಂಬಾಣಿ (ಬಂಜಾರ) ಕೊರಮ, ಕೊರಚ ಮತ್ತು ಬೋವಿ ಜಾತಿಗಳನ್ನು ಕರ್ನಾಟಕ ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿ ಸೇರಿಸಲಾಗಿದೆ. ಇದು ಸಂವಿಧಾನದ 14, 16, 17, 46, 243(ಝಡ್), 330, 332, 341 ಮತ್ತು 366ನೇ ವಿಧಿಯ ಉಲ್ಲಂಘನೆಯಾಗಿದೆ ಎಂದು ತಿಳಿಸಿದ್ದಾರೆ.

ಈ ಜಾತಿಗಳನ್ನು ಕರ್ನಾಟಕ ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿ ಸೇರಿಸಿ ಹೊರಡಿಸಲಾದ ಆದೇಶ ರದ್ದು ಕೋರಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿದೆ. ಈ ಕುರಿತ ಮನವಿಯನ್ನು ರಾಷ್ಟ್ರೀಯ ಪರಿಶಿಷ್ಟ ಜಾತಿಗಳ ಆಯೋಗಕ್ಕೆ ಸಲ್ಲಿಸಬೇಕು. ಆಯೋಗವು ಆ ಮನವಿಯನ್ನು ಪರಿಶೀಲಿಸಿ ಸಕ್ಷಮ ಪ್ರಾಧಿಕಾರಕ್ಕೆ ವರದಿ ಸಲ್ಲಿಸಬೇಕು ಎಂದು 2020ರ ಫೆಬ್ರವರಿ 14ರಂದು ಸುಪ್ರೀಂ ಕೋರ್ಟ್ ಆದೇಶಿಸಿತ್ತು ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ.

ಅಂದು ಆಡಳಿತದಲ್ಲಿ ಇದ್ದ ಬಿಜೆಪಿ ನೇತೃತ್ವದ ಬಸವರಾಜ ಬೊಮ್ಮಾಯಿ ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸದೆ ನಿರ್ಲಕ್ಷ್ಯ ವಹಿಸಿತ್ತು. ಈಗಿನ ಸರ್ಕಾರ ಈ ಆದೇಶದ ಮೇಲೆ ಬೆಳಕು ಚೆಲ್ಲುವುದನ್ನ ಮರೆತು ನಾಗಮೋಹನ್ ದಾಸ್ ಅವರು ಸಹ ಪರಿಶೀಲಿಸಿದೆ ಅವೈಜ್ಞಾನಿಕ ಒಳಮೀಸಲಾತಿ ಸಂಬಂಧ ವರದಿ ನೀಡಿ ಅಕ್ರಮ ಎಸಗಿದ್ದಾರೆ. ಅದರಿಂದ ಮುಖ್ಯಮಂತ್ರಿಗಳು ಮುಂದಿನ ಸಚಿವ ಸಂಪುಟದಲ್ಲಿ ಸುಪ್ರೀಂಕೋರ್ಟ್ ಆದೇಶದಂತೆ ಪರಾಮರ್ಶೆ ಮಾಡಿ ಒಳಮೀಸಲಾತಿ ಹಂಚಿಕೆ ಅನ್ಯಾಯವನ್ನು ಸರಿಪಡಿಸಿ ಮರುವಿಂಗಡಣೆ ಮಾಡಿ ನೈಜ ಅಸ್ಪೃಶ್ಯರಿಗೆ ಮೀಸಲಾತಿ ನ್ಯಾಯ ಒದಗಿಸುವಂತೆ ಪ್ರಕಟಣೆ ಮೂಲಕ ಆಗ್ರಹಿಸಿದ್ದಾರೆ.

ಶ್ರೀ ಶಂಕರ ಜಯಂತಿ ಸಭಾದಿಂದ ಶ್ರೀ ರಾಮನವಮಿ ಕಾರ್ಯಕ್ರಮ

ಮೈಸೂರು, ಮಾ.26– ಶ್ರೀ ರಾಮನವಮಿ ಪ್ರಯುಕ್ತ ಶ್ರೀ ಶಂಕರ ಜಯಂತಿ ಸಭಾ ವತಿಯಿಂದ ನಗರದ ಸರಸ್ವತಿಪುರಂ, 2ನೇ ಮುಖ್ಯರಸ್ತೆಯ ತೆಂಗಿನ ತೋಪು ಸಮುದಾಯ ಭವನದಲ್ಲಿ ಆಯೋಜಿಸಿರುವ ಮೂರು ದಿನಗಳ ಪೂಜಾ ಕೈಂಕರ್ಯ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಗುರುವಾರ ಚಾಲನೆ ದೊರಕಿದೆ. ಇಂದು ಬೆಳಗ್ಗೆ 9.30ರಿಂದ



ಅಭಿಷೇಕ, ಅರ್ಚನೆ ಇತ್ಯಾದಿ ಪೂಜಾ ಕೈಂಕರ್ಯಗಳು ಜರುಗಿದವು. ಸಂಜೆ 5.30ರಿಂದ 6.30 ರವರೆಗೆ ವಿದ್ವಾನ್ ಹರೀಶ ಪಾಂಡವ್ ಮತ್ತು ಸಂಗಡಿಗರು ಸ್ಯಾಕ್ಸೋಫೋನ್ ವಾದನ ಪ್ರಸ್ತುತಪಡಿಸಿದರು. ಶುಕ್ರವಾರ ಸಂಜೆ ವಿದುಷಿ ಶ್ರೀಮತಿ ಕೃಪಾಫಡ್ಕೆ ಅವರ ಶಿಷ್ಯರಿಂದ ಭರತನಾಟ್ಯ ಹಾಗೂ ಶನಿವಾರ ಸಂಜೆ ವಿದುಷಿ ಶ್ರೀಮತಿ ರೇಖಾ ವೆಂಕಟೇಶ್ ಮತ್ತು ಸಂಗಡಿಗರಿಂದ ಕರ್ನಾಟಕ ಪ್ರಸ್ತುತಿ ಇರಲಿದೆ. ಭಕ್ತರು ಶ್ರೀರಾಮ ದೇವರ ಅರ್ಚನೆಗೆ ಹೂವು ತುಳಸಿಗಳನ್ನು ನೀಡಬಹುದು, ಸಂಕಲ್ಪ ಪೂಜೆ ಮಾಡಿಸಬಹುದು ಎಂದು ಸಭಾದ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮೈಸೂರಲ್ಲಿ ಅವೈಜ್ಞಾನಿಕ ಸಿಗ್ನಲ್ ಲೈಟ್‌ಗಳ ಬಗ್ಗೆ ಮಾಹಿತಿ ನೀಡದ ಪೊಲೀಸ್ ಇಲಾಖೆ

ಹಿರಿಯ ವಕೀಲ ಎ.ಎಂ.ಭಾಸ್ಕರ್ ಆರೋಪ

ಮೈಸೂರು,ಮಾ.26(ಜಿಎ)–ಮೈಸೂರು ನಗರಾದ್ಯಂತ ಅವೈಜ್ಞಾನಿಕವಾಗಿ ಅಳವಡಿಸಿರುವ ಟ್ರಾಫಿಕ್ ಸಿಗ್ನಲ್ ಲೈಟ್ ಕುರಿತು ಮಾಹಿತಿ ಹಕ್ಕು ಕಾಯ್ದೆ ಅಡಿಯಲ್ಲಿ ಕೇಳಿದ್ದ ಪ್ರಶ್ನೆಗಳಿಗೆ ಪೊಲೀಸ್ ಇಲಾಖೆ ಸಮರ್ಪಕ ಉತ್ತರ ನೀಡಿಲ್ಲ ಎಂದು ಹಿರಿಯ ವಕೀಲ ಎ.ಎಂ.ಭಾಸ್ಕರ್ ಆರೋಪಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ನಗರದಲ್ಲಿ ಏಕಾಏಕಿ ಎಲ್ಲಾ ಕಡೆ ಟ್ರಾಫಿಕ್ ಸಿಗ್ನಲ್ ಲೈಟ್ ಅಳವಡಿಸಿದ್ದಾರೆ. ಅದರಲ್ಲಿಯೂ ಅಗತ್ಯವಿಲ್ಲದ ಜಂಕ್ಷನ್‌ಗಳಲ್ಲಿಯೂ ಸಿಗ್ನಲ್ ಅಳವಡಿಸಿರುವ ಹಿನ್ನೆಲೆಯಲ್ಲಿ ನಗರದಲ್ಲಿ ಟ್ರಾಫಿಕ್ ಸಮಸ್ಯೆ ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ಇದರಿಂದ ಅನುಕೂಲವಾಗುವ ಬದಲು ಸಮಸ್ಯೆಯೇ ಹೆಚ್ಚಾಗಿದೆ. ಹೀಗಾಗಿ ಇವುಗಳನ್ನು ಅಳವಡಿಸುವ ಮುನ್ನ ಯಾವು ದಾದರೂ ಸರ್ವೆ ನಡೆದಿದೆಯೇ, ಪಾಲಿಕೆ, ಮುಡಾ, ಭಾರತೀಯ ರಸ್ತೆ ಕಾಂಗ್ರೆಸ್‌ನ ಅನುಮತಿ ಪಡೆಯಲಾಗಿದೆಯೇ ಎಂದು ತಾವು ಮಾಹಿತಿ ಹಕ್ಕು ಕಾಯ್ದೆ ಅಡಿಯಲ್ಲಿ ಕೇಳಿದ್ದ ಪ್ರಶ್ನೆಗಳಿಗೆ ಪೊಲೀಸ್ ಇಲಾಖೆ ಯಿಂದ ನಕಾರಾತ್ಮಕ ಉತ್ತರ ನೀಡಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಈ ಎಲ್ಲಾ ಟ್ರಾಫಿಕ್ ಸಿಗ್ನಲ್‌ಗಳನ್ನು ಅಳವಡಿಸಿದ ಬಳಿಕ ಜನದಟ್ಟಣೆ, ಸಂಚಾರ ದಟ್ಟಣೆ ಗೊಂದಲಕಾರಿಯಾಗಿ ಕಂಡು ಬರುತ್ತಿರುವುದು ತಮ್ಮ ಗಮನಕ್ಕೆ ಬಂದಿತ್ತು. ಹೀಗಾಗಿ ಈ ಕುರಿತು ಪೊಲೀಸ್ ಆಯುಕ್ತರಿಗೆ ಆರ್‌ಟಿಐ ಅಡಿಯಲ್ಲಿ ಅರ್ಜಿ ಹಾಕಿ ಯಾವ ಯಾವ ವೃತ್ತದಲ್ಲಿ ಸರ್ವೆ ನಡೆದಿದೆ, ಎಷ್ಟು ವೆಚ್ಚವಾಗಿದೆ, ಸಂಬಂಧಿಸಿದವರ ಅನುಮತಿ ಪಡೆಯಲಾಗಿದೆಯೇ ಎಂಬ 14 ಪ್ರಶ್ನೆ ಕೇಳಿದ್ದೆ ಎಂದರು.



ಸುದ್ದಿಗೋಷ್ಠಿಯಲ್ಲಿ ಹಿರಿಯ ವಕೀಲ ಎ.ಎಂ.ಭಾಸ್ಕರ್ ಮಾತನಾಡಿದರು.

ಪೊಲೀಸ್ ಆಯುಕ್ತರು, ಸಂಚಾರ ವಿಭಾಗದ ಸಹಾಯಕ ಪೊಲೀಸ್ ಆಯುಕ್ತರಿಗೆ ಮಾಹಿತಿ ನೀಡುವಂತೆ ತಿಳಿಸಿದ್ದಾರೆ. ಆದರೆ, ನಾವು ಕೇಳಿದ 14 ಪ್ರಶ್ನೆಯಲ್ಲಿ ಕೇವಲ 3 ವರ್ಷಗಳ ಅವಧಿಯಲ್ಲಿ ವಿವಿಧ ಠಾಣೆಯ ವ್ಯಾಪ್ತಿಯಲ್ಲಿ ನಡೆದಿರುವ ಅಪಘಾತಗಳ ಬಗ್ಗೆ ಮಾಹಿತಿ ನೀಡಿದ್ದಾರೆ ಹೊರತು ಮಿಕ್ಕ 13 ಪ್ರಶ್ನೆಗಳಿಗೆ ಈ ಕಚೇರಿಯಲ್ಲಿ ಲಭ್ಯವಿರುವುದಿಲ್ಲ ಎಂದು ಮಾಹಿತಿ ನೀಡಿದ್ದಾರೆ.

ಪೊಲೀಸ್ ಇಲಾಖೆ ಸಾರ್ವಜನಿಕರಿಗೆ ಉತ್ತರ ಕೊಡಬೇಕಾದ ಜವಾಬ್ದಾರಿ ಇದೆ. ಈ ಹಿನ್ನೆಲೆಯಲ್ಲಿ ಯಾವ ಕಾರಣಕ್ಕೆ ನಗರದಾದ್ಯಂತ ಸಿಗ್ನಲ್ ಲೈಟ್ ಅಳವಡಿಸಲಾಗಿದೆ ಎಂಬುದನ್ನು ಇನ್ನು 15 ದಿನಗಳೊಳಗೆ ಆಯುಕ್ತರು ಉತ್ತರ ನೀಡಬೇಕು. ಇಲ್ಲದಿದ್ದಲ್ಲಿ ಇಲ್ಲಿ ಭ್ರಷ್ಟಾಚಾರದ ವಾಸನೆ ಕಂಡುಬರುತ್ತಿರುವ ಕಾರಣ ಲೋಕಾಯುಕ್ತರಿಗೆ ದೂರು ನೀಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ಮೈಸೂರು ಮಹಾನಗರ ಪಾಲಿಕೆ, ಮೈಸೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ಜಿಲ್ಲಾಧಿಕಾರಿಗಳ ಅನುಮತಿ ಪಡೆದಿಲ್ಲ. ಈ ಕುರಿತು ಸಂಬಂಧಿಸಿದವರಿಗೆ ದೂರು ನೀಡಿದಲ್ಲಿ ಸುಮಾರು 1ಲಕ್ಷ ರೂ.ವರೆಗೆ ದಂಡ ಸಹ ವಿಧಿಸಬಹುದು. ಜೊತೆಗೆ, ಇಲ್ಲಿ ಸಂಭವಿಸಿರುವ ಅಪಘಾತಗಳ ಮಾಹಿತಿ ಕೇಳಿದಾಗ ನೀಡಿರುವ ಉತ್ತರ ಸಮಾಧಾನಕರವಾಗಿಲ್ಲ. ಯಾವುದೇ ಸರ್ವೆ ಸಹ ನಡೆಸಿಲ್ಲ. ಸಿಗ್ನಲ್ ದೀಪ ಅಳವಡಿಸುವ ಮುನ್ನ ಟೆಂಡರ್ ಪ್ರಕಟಣೆ ನಡೆದಿಲ್ಲ. ಸಾರ್ವಜನಿಕರ ಅಹವಾಲು ಸಹಾ ಆಲಿಸಿಲ್ಲ ಎಂದು ದೂರಿದರು.

ಮುಂದಿನ ಹಂತವಾಗಿ ಪೊಲೀಸ್ ಉನ್ನತ ಅಧಿಕಾರಿಗಳಿಗೆ ಹಾಗೂ ಗೃಹ ಮಂತ್ರಿಗಳಿಗೆ ದೂರು ನೀಡಲಾಗುತ್ತದೆ. ಅದಕ್ಕೂ ಸೂಕ್ತ ಉತ್ತರ ಬರದಿದ್ದರೆ, ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿಯ ಅರ್ಜಿ ಸಲ್ಲಿಸುತ್ತೇವೆ. ಆದ್ದರಿಂದ ಪೊಲೀಸ್ ಆಯುಕ್ತರು 15 ದಿನಗಳೊಳಗೆ ಸೂಕ್ತ ಉತ್ತರ ನೀಡಬೇಕೆಂದು ಆಗ್ರಹಿಸಿದರು. ಗೋಷ್ಠಿಯಲ್ಲಿ ಮತ್ತೋರ್ವ ವಕೀಲ ಸಚಿನ್, ಸಾಮಾಜಿಕ ಕಾರ್ಯಕರ್ತ ಪ್ರದೀಪ್ ಉಪಸ್ಥಿತರಿದ್ದರು.

ವಂಚಿತರಿಗೆ ಗ್ರಾಹಕ ಸಂರಕ್ಷಣಾ ಕಾಯ್ದೆಯಡಿ ಪರಿಹಾರದ ಹಕ್ಕಿದೆ

■ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷೆ ಎ.ಕೆ.ನವೀನಕುಮಾರಿ ಭರವಸೆ ■ ಮೈಸೂರಲ್ಲಿ ವಿಶ್ವ ಗ್ರಾಹಕರ ದಿನಾಚರಣೆ

ಮೈಸೂರು,ಮಾ.26(ಎಂಕೆ)– ಗ್ರಾಹಕರು ಒಂದು ರೂಪಾಯಿ ಮೋಸ ಹೋದರು ಗ್ರಾಹಕ ಸಂರಕ್ಷಣಾ ಕಾಯ್ದೆಯಡಿ ದೂರು ದಾಖಲಿಸಿ ಪರಿಹಾರ ಪಡೆಯಬಹುದಾಗಿದೆ ಎಂದು ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷರಾದ ಎ.ಕೆ.ನವೀನ ಕುಮಾರಿ ತಿಳಿಸಿದರು.

ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಶಾರದ ವಿಲಾಸ ಶಿಕ್ಷಣ ಸಂಸ್ಥೆ ಸಭಾಂಗಣದಲ್ಲಿ ಜಿಲ್ಲಾಡಳಿತ, ಆಹಾರ, ನಾಗರಿಕರ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ಆಯೋಜಿಸಿದ್ದ ವಿಶ್ವ ಗ್ರಾಹಕರ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ನೊಂದ ಗ್ರಾಹಕರು ಆನ್‌ಲೈನ್ ಮೂಲಕವೇ ದೂರು ದಾಖಲಿಸುವ ವ್ಯವಸ್ಥೆ ಮಾಡಲಾಗಿದೆ ಎಂದರು.



ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಶಾರದ ವಿಲಾಸ ಶಿಕ್ಷಣ ಸಂಸ್ಥೆ ಸಭಾಂಗಣದಲ್ಲಿ ಬುಧವಾರ ವಿಶ್ವ ಗ್ರಾಹಕರ ದಿನಾಚರಣೆ ನಡೆಯಿತು.

ಮುಖ್ಯವಾಗಿ ಗ್ರಾಹಕರು ಸರ್ಕಾರದಿಂದ ದೃಢೀಕರಿಸಿರುವ ಹಾಗೂ ಐಎಸ್‌ಐ ಹಾಲ್ ಮಾರ್ಕ್ ಚಿಹ್ನೆಯುಳ್ಳ ಚಿನ್ನಾಭರಣ ಮತ್ತು ಇನ್ನಿತರೆ ವಸ್ತುಗಳನ್ನು ಖರೀದಿ ಮಾಡಬೇಕು. ವಸ್ತುಗಳನ್ನು ಖರೀದಿಸುವಾಗ ಗುಣಮಟ್ಟದ ಜೊತೆಗೆ ಬಳಕೆ ಅವಧಿ ಪರಿಶೀಲನೆ ಮುಖ್ಯ. ವಸ್ತುವಿನ ಗುಣಮಟ್ಟದ ಕಳಪೆಯಾಗಿದ್ದಲ್ಲಿ ಸ್ಯಾಂಪಲ್ ಜೊತೆಗೆ ದೂರು ಸಲ್ಲಿಸಿ ಎಂದು ಹೇಳಿದರು.

ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಸದಸ್ಯೆ ಎಂ.ಕೆ.ಲಲಿತಾ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಮೋಸಕ್ಕೆ ಒಳಗಾಗುತ್ತಿದ್ದಾರೆ. ಆದ್ದರಿಂದ ವಸ್ತುಗಳನ್ನು ಖರೀದಿಸುವಾಗ ಹಾಗೂ ಮೋಸ ಹೋದಾಗ ಯಾವ ರೀತಿ ದೂರು ಸಲ್ಲಿಸಬೇಕು ಎಂಬುದನ್ನು ತಿಳಿದುಕೊಂಡಿರಬೇಕು. 18 ವರ್ಷ ತುಂಬಿದ ಯಾವುದೇ ವ್ಯಕ್ತಿಯು ಗ್ರಾಹಕ ಸಂರಕ್ಷಣಾ ಕಾಯ್ದೆಯಡಿ ದೂರು ದಾಖಲಿಸಬಹುದು ಎಂದು ಸಲಹೆ ನೀಡಿದರು.

> "ಬ್ಯಾಂಕುಗಳಲ್ಲಿ ನಿಗದಿತ ಬಡ್ಡಿಗಿಂತ ಹೆಚ್ಚಿನ ಬಡ್ಡಿ ವಿಧಿಸಿದ್ದರೆ, ಜಾಹಿರಾತುಗಳನ್ನು ನಂಬಿ ಮೋಸ ಹೋದರು ಸಹ ದೂರನ್ನು ದಾಖಲಿಸಬಹುದು. ಹಾಗೆಯೇ ವಿಮಾ ಕಂಪನಿಗಳು ಮೋಸ ಮಾಡಿದಾಗ, ವೈದ್ಯಕೀಯ ವಸ್ತು ಹಾಗೂ ಔಷಧಿಗಳ ಖರೀದಿಯಲ್ಲಿ ಮೋಸವಾದರೆ ಗ್ರಾಹಕರ ಕಾಯ್ದೆಯಡಿ ಪರಿಹಾರವನ್ನು ಪಡೆದುಕೊಳ್ಳುವಂತಹ ಹಕ್ಕನ್ನು ನೀಡಲಾಗಿದೆ. –ಎ.ಕೆ.ನವೀನಕುಮಾರಿ

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮತ್ತು ಹಿರಿಯ ಸಿವಿಲ್ ನ್ಯಾಯಾಧೀಶರಾದ ಕೆ.ಕೆ. ಅಮರನಾಥ್ ಮಾತನಾಡಿ, ವಸ್ತುಗಳನ್ನು ಖರೀದಿಸಿದಾಗ ರಶೀದಿಯಲ್ಲಿ ಜಿಎಸ್‌ಟಿ ಸಂಖ್ಯೆ ಇರುವುದನ್ನು ಖಾತ್ರಿಪಡಿಸಿಕೊಳ್ಳಬೇಕು. ಮೋಸ ಹೋದ ಸಂದರ್ಭದಲ್ಲಿ ಗ್ರಾಹಕರ ವೇದಿಕೆಯಲ್ಲಿ ದೂರು ಸಲ್ಲಿಸಲು ಅನುಕೂಲವಾಗುತ್ತದೆ ಎಂದು ತಿಳಿಸಿದರು.

ಆಹಾರ ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆ ಜಂಟಿ ನಿರ್ದೇಶಕ ಡಾ. ಮಂಟೇಸ್ವಾಮಿ, ಶಾರದ ವಿಲಾಸ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಆರ್.ದಿನೇಶ್, ಪ್ರಾಂಶುಪಾಲೆ ಡಾ.ಎಂ. ದೇವಿಕಾ, ಆಹಾರ ನಾಗರಿಕ ಸರಬರಾಜು ಹಾಗೂ ಗ್ರಾಹಕ ವ್ಯವಹಾರಗಳ ಇಲಾಖೆ ಸಹಾಯಕ ನಿರ್ದೇಶಕ ಎನ್.ಶ್ರೀಧರ್ ಮತ್ತಿತರರು ಉಪಸ್ಥಿತರಿದ್ದರು.

ಸುತ್ತೂರು ಕ್ಷೇತ್ರದಲ್ಲಿ ಯುವಜನರ ಶಿಬಿರ

ಮೈಸೂರು,ಮಾ.26–ಸುತ್ತೂರು ಶ್ರೀಮಠ, ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಗಳ ಸಂಯುಕ್ತಾಶ್ರಯದಲ್ಲಿ ಏ.25ರಿಂದ 27ರವರೆಗೆ ಯುವಜನರ (ಪದವೀಧರರು) ಶಿಬಿರ ಏರ್ಪಡಿಸಲಾಗಿದೆ ಶಿಬಿರದಲ್ಲಿ ಸಾಮೂಹಿಕ ಪ್ರಾರ್ಥನೆ, ಯೋಗ, ವಿಶೇಷ ಉಪನ್ಯಾಸ, ಚಿಂತನ–ಮಂಥನ, ದೇಸಿ ಆಟಗಳು, ಸಾಂಸ್ಕೃತಿಕ ಕಾರ್ಯಕ್ರಮಗಳಿರುತ್ತವೆ.

ಶಿಬಿರದಲ್ಲಿ ಭಾಗವಹಿಸಲಿಚ್ಛಿಸುವವರು ಶಿಬಿರದ ಸಂಚಾಲಕರಾದ ನಿರಂಜನ ಮೂರ್ತಿ (8884471974), ಡಾ.ಮಹೇಶ್ (8970723663), ಡಾ.ರಾಜೇಂದ್ರ ಪ್ರಸಾದ್ (9880547493), ಸಂತೋಷ್ ಕುಮಾರ್ (9886710073), ಡಾ.ಸುಶ್ಮಿತಾ (9900372725), ಡಾ.ರೂಪ (8217009530), ಡಿ.ಜಿ.ಪಲ್ಲವಿ (9035440579) ಅವರನ್ನು ದೂರವಾಣಿ ಮೂಲಕ ಸಂಪರ್ಕಿಸಿ ವಿವರಗಳನ್ನು ಪಡೆದು ನೋಂದಾಯಿಸಿಕೊಳ್ಳಬಹುದಾಗಿದೆ.

ದೇಶ - ವಿದೇಶ

ನೀರಿನ ಬ್ಯಾರಲ್‌ಗೆ ನೂರಾರು ಲೀಟರ್ ಡೀಸೆಲ್ ತುಂಬಿಸಿಕೊಂಡ!

ಮಧ್ಯಪ್ರದೇಶ: ಮಧ್ಯಪ್ರಾಚ್ಯದಲ್ಲಿ ಸಂಘರ್ಷ ಮುಂದುವರೆದಿರುವುದರಿಂದ ಭಾರತದಲ್ಲಿ ತೈಲ ಹಾಗೂ ಅನಿಲ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂಬ ವದಂತಿಯಿಂದ ವ್ಯಕ್ತಿಯೊಬ್ಬ, ನೀರಿನ ಬೃಹತ್ ಬ್ಯಾರೆಲ್‌ವೊಂದನ್ನು ಪೆಟ್ರೋಲ್ ಬಂಕ್‌ಗೆ ತೆಗೆದುಕೊಂಡು ಬಂದು ಬರೋಬ್ಬರಿ 82,500 ರೂ.ಗೆ ಡೀಸೆಲ್ ತುಂಬಿಸಿರುವ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಜೊತೆಗೆ ಹಲವರು ಮನೆಯಲ್ಲಿರುವ ಬಕೆಟ್, ಕುಕ್ಕರ್‌ಗಳನ್ನು ತೆಗೆದುಕೊಂಡು ಬಂದು ಅದರಲ್ಲೇ ಪೆಟ್ರೋಲ್ ಮತ್ತು ಡೀಸೆಲ್ ತುಂಬಿಸಿಕೊಳ್ಳುತ್ತಿರುವ ವೀಡಿಯೋಗಳು ಹರಿದಾಡುತ್ತಿವೆ. ಈ ವದಂತಿಗಳಿಗೆ ಪ್ರತಿಕ್ರಿಯಿಸಿರುವ ತೈಲ ಪೂರೈಕೆದಾರ ಕಂಪನಿ ಭಾರತ್ ಪೆಟ್ರೋಲಿಯಂ, ದೇಶದಲ್ಲಿ ತೈಲ ಪೂರೈಕೆಯಲ್ಲಿ ಯಾವುದೇ ಕೊರತೆಯಾಗಿಲ್ಲ. ಆದರೆ ಜನ ಸಾಮಾಜಿಕ ಮಾಧ್ಯಮಗಳಲ್ಲಿನ ವದಂತಿಗಳಿಂದ ಭಯಗೊಂಡು ಮುಂಗಡವಾಗಿ ಅಧಿಕ ಪ್ರಮಾಣದ ಪೆಟ್ರೋಲ್ ಮತ್ತು ಡೀಸೆಲ್ ಖರೀದಿ ಮಾಡುತ್ತಿದ್ದಾರೆ ಎಂಬ ಮಾಹಿತಿ ಇದೆ. ಆದರೆ ಹೀಗೆ ಬಕೆಟ್, ಕುಕ್ಕರ್, ಪ್ಲಾಸ್ಟಿಕ್ ಪಾತ್ರೆಗಳಲ್ಲಿ ತೈಲಗಳನ್ನು ಸಂಗ್ರಹಿಸುವುದು ಅತ್ಯಂತ ಅಪಾಯಕಾರಿ. ಇದರಿಂದ ಬೆಂಕಿ ಅವಘಡಗಳು ಸಂಭವಿಸುತ್ತವೆ ಎಂದು ಎಚ್ಚರಿಸಿದೆ.



ಬಸ್ ನದಿಗೆ ಉರುಳಿ 24 ಪ್ರಯಾಣಿಕರ ದುರ್ಮರಣ; ಹಲವರ ಸ್ಥಿತಿ ಗಂಭೀರ

ಢಾಕಾ: ಬಾಂಗ್ಲಾದೇಶದ ರಾಜ್‌ಬರಿ ಜಿಲ್ಲೆಯ ದೌಲತ್ದಿಯಾ ಟರ್ಮಿನಲ್‌ನಲ್ಲಿ 50 ಪ್ರಯಾಣಿಕರಿದ್ದ ಬಸ್ ನದಿಗೆ ಉರುಳಿ, ಸುಮಾರು 24 ಮಂದಿ ದುರಂತ ಸಾವಿಗೀಡಾಗಿದ್ದಾರೆ.



ಈ ಅಪಘಾತದಲ್ಲಿ ಹಲವರು ಗಂಭೀರವಾಗಿ ಗಾಯಗೊಂಡಿದ್ದು, ಅವರಿಗೆ ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಗಾಯಗೊಂಡವರಲ್ಲಿ ಕೆಲವರ ಸ್ಥಿತಿ ಗಂಭೀರವಾಗಿರುವುದರಿಂದ ಸಾವಿನ ಸಂಖ್ಯೆ ಹೆಚ್ಚಾಗುವ ಸಾಧ್ಯತೆಯಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈದ್ ರಜಾದಿನಗಳನ್ನು ಮುಗಿಸಿ ಅನೇಕ ಮಂದಿ ರಾಜ್ಬರಿಯಿಂದ ಢಾಕಾಗೆ ಮರಳುತ್ತಿದ್ದಾಗ ಬುಧವಾರ ಸಂಜೆ ದೌಲತ್ದಿಯಾದ ದೋಣಿ ನಿಲ್ದಾಣದ ಬಳಿ ಬಸ್ ನದಿಗೆ ಉರುಳಿ ಈ ಭೀಕರ ಅಪಘಾತ ಸಂಭವಿಸಿದೆ. ಬಸ್ ರಾಜ್ಬರಿಯಿಂದ ಢಾಕಾಗೆ ಹೋಗುತ್ತಿತ್ತು. ಅಪಘಾತದ ಸ್ಥಳ ಢಾಕಾದಿಂದ ಸುಮಾರು 128 ಕಿ.ಮೀ ದೂರದಲ್ಲಿದೆ. ಬಸ್ ಅಪಘಾತದ ಬಗ್ಗೆ ಮಾಹಿತಿ ತಿಳಿದ ನಂತರ ರಕ್ಷಣಾ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ರಕ್ಷಣಾ ಕಾರ್ಯಾಚರಣೆ ಪ್ರಾರಂಭಿಸಿದರು. ಇಂದೂ ಕೂಡ ಕಾರ್ಯಾಚರಣೆ ಮುಂದುವರೆಸಿದ್ದಾರೆ. ಬಾಂಗ್ಲಾದೇಶ ಪ್ರಧಾನಿ ತಾರಿಕ್ ರೆಹಮಾನ್ ಅವರು ಘಟನೆ ಬಗ್ಗೆ ತೀವ್ರ ಆಘಾತ ವ್ಯಕ್ತಪಡಿಸಿ, ಅಪಘಾತದ ಬಗ್ಗೆ ಸಮಗ್ರ ತನಿಖೆಗೆ ಆದೇಶಿಸಿದ್ದಾರೆ.

ರೈಲ್ವೆ ಯೋಜನೆಗೆ ಅಡ್ಡಲಾಗಿದ್ದ ಪ್ರಾರ್ಥನಾ ಮಂದಿರದ ಸುರಕ್ಷಿತ ಸ್ಥಳಾಂತರ ಆರಂಭ

ಕೇರಳಂ: ರೈಲ್ವೆ ಹಳಿಗಳ ವಿಸ್ತರಣೆ ಯೋಜನೆಗಾಗಿ ಎರ್ನಾಕುಲಂ ಕೊಂತುರುತಿಯ ಸೇಂಟ್ ಜಾನ್ಸ್ ನೆಪೊಮುಸೆನ್ ಚರ್ಚ್ ಬಳಿ ಇರುವ ಹಳೆಯ ಪ್ರಾರ್ಥನಾ ಮಂದಿರವನ್ನು ಅತ್ಯಾಧುನಿಕ ಶಿಫ್ಟಿಂಗ್ ತಂತ್ರಜ್ಞಾನ ಬಳಸಿಕೊಂಡು ಸುರಕ್ಷಿತವಾಗಿ ಸ್ಥಳಾಂತರಿಸಲಾಗುತ್ತಿದೆ. ರೈಲ್ವೆ ಹಳಿಗಳ ವಿಸ್ತರಣೆ ಯೋಜನೆ ವ್ಯಾಪ್ತಿಯಲ್ಲಿರುವ ಈ ಐತಿಹಾಸಿಕ ಕುರುಹನ್ನು ಧ್ವಂಸಗೊಳಿಸದೆ ಉಳಿಸಿಕೊಳ್ಳುವ ಪ್ರಯತ್ನ ನಡೆಸಲಾಗುತ್ತಿದೆ. 2 ಶತಮಾನಗಳ ಹಿಂದೆ, 1823ರಲ್ಲಿ ಮುಖ್ಯ ಚರ್ಚ್ ಜೊತೆಗೆ ನಿರ್ಮಿಸಲಾದ ಈ ಪ್ರಾರ್ಥನಾ ಮಂದಿರವು ವಿಶಿಷ್ಟವಾದ ಪೋರ್ಚುಗೀಸ್ ವಾಸ್ತುಶಿಲ್ಪ ಶೈಲಿಯಲ್ಲಿದ್ದು, 15 ಅಡಿ ಎತ್ತರ ಮತ್ತು 6 ಮೀಟರ್ ಅಗಲವಿದೆ. 1992ರಲ್ಲಿ ಚರ್ಚ್ ಕೆಡವಿ ಪುನರ್ನಿರ್ಮಿಸಿದಾಗಲೂ ಈ ಪ್ರಾರ್ಥನಾ ಮಂದಿರವನ್ನು ಅದರ ಮೂಲ ರೂಪದಲ್ಲೇ ಉಳಿಸಿಕೊಳ್ಳಲಾಗಿತ್ತು. ಇದೀಗ ಈ ಪ್ರಾರ್ಥನಾ ಮಂದಿರವನ್ನು ಸ್ಥಳಾಂತರಿಸುವ ಸವಾಲಿನ ಕಾರ್ಯವನ್ನು ಹರಿಯಾಣ ಮೂಲದ ಶ್ರೀರಾಮ್ ಬಿಲ್ಡಿಂಗ್ ಮತ್ತು ಲಿಫ್ಟಿಂಗ್ ಕಂಪನಿಗೆ ವಹಿಸಲಾಗಿದೆ. ಲ್ಯಾಟರೈಟ್ ಕಲ್ಲುಗಳು ಮತ್ತು ಸಾಂಪ್ರದಾಯಿಕ ಸುರ್ಖಿ ಮಿಶ್ರಣ ಬಳಸಿ ನಿರ್ಮಿಸಿರುವ ಮಂದಿರವನ್ನು 9 ದಿನಗಳಲ್ಲಿ ಮೇಲೆತ್ತಿದೆ. ಮುಂದಿನ ಭಾನುವಾರದೊಳಗೆ ಕಟ್ಟಡವನ್ನು ನಿಗದಿತ ಜಾಗಕ್ಕೆ ಸ್ಥಳಾಂತರಿಸಲಾಗುವುದು ಎಂದು ಚರ್ಚ್ ಟ್ರಸ್ಟಿಗಳು ತಿಳಿಸಿದ್ದಾರೆ.



ಪಶ್ಚಿಮ ನೇಪಾಳದಲ್ಲಿ ಮತ್ತೆ ಭೂಕಂಪ; ದಶಕದ ಹಿಂದಿನ ಕರಾಳ ನೆನಪಿನ ಆತಂಕ!



ಕಠ್ಮಂಡು: ನೇಪಾಳದ ಪಶ್ಚಿಮ ಭಾಗದಲ್ಲಿರುವ ಸುದುರ್ಪಶ್ಚಿಮ್ ಪ್ರಾಂತ್ಯದಲ್ಲಿ ಗುರುವಾರ(ಮಾ.26) ಬೆಳಗ್ಗೆ 4.0 ತೀವ್ರತೆಯ ಭೂಕಂಪ ಸಂಭವಿಸಿದ್ದು, ಸದ್ಯ ಯಾವುದೇ ಹಾನಿಯ ವರದಿಯಾಗಿಲ್ಲ. ರಾಷ್ಟ್ರೀಯ ಭೂಕಂಪ ಮಾನಿಟರಿಂಗ್ ಮತ್ತು ಸಂಶೋಧನಾ ಕೇಂದ್ರದ ಮಾಹಿತಿ ಪ್ರಕಾರ, ಇಂದು ಬೆಳಗ್ಗೆ 8.32ಕ್ಕೆ ಭೂಕಂಪ ಸಂಭವಿಸಿದ್ದು, ನೆರೆಯ ಬೈತಾಡಿ ಮತ್ತು ಬಜಂಗ್ ಜಿಲ್ಲೆಗಳಲ್ಲೂ ಇದರ ಅನುಭವವಾಗಿದೆ. ನಿರ್ದಿಷ್ಟ ವರ್ಷದಲ್ಲಿ ಹಲವಾರು ಭೂಕಂಪಗಳನ್ನು ಅನುಭವಿಸುವ ನೇಪಾಳವು, ವಿಶ್ವದ ಅತ್ಯಂತ ಭೂಕಂಪ ಪೀಡಿತ ದೇಶಗಳಲ್ಲಿ 11ನೇ ಸ್ಥಾನದಲ್ಲಿದೆ. 2015 ರಲ್ಲಿ ಸಂಭವಿಸಿದ 7.8 ತೀವ್ರತೆಯ ಭೀಕರ ಭೂಕಂಪದಲ್ಲಿ ಸುಮಾರು 9 ಸಾವಿರ ಜನ ಸಾವನ್ನಪ್ಪಿ, 22 ಸಾವಿರ ಜನ ಗಾಯಗೊಂಡಿದ್ದರು. ಲಕ್ಷಾಂತರ ಜನ ನಿರಾಶ್ರಿತರಾಗಿದ್ದರು. ಮನೆಗಳು, ಶಾಲೆಗಳು, ರಸ್ತೆಗಳು ಮತ್ತು ಶತಮಾನಗಳಷ್ಟು ಹಳೆಯ ತಾಣಗಳು ಧ್ವಂಸವಾಗಿದ್ದರಿಂದ 2.8 ಮಿಲಿಯನ್ ಜನರನ್ನು ಸ್ಥಳಾಂತರಿಸಲಾಯಿತು.

'ವಂದೇ ಭಾರತ್' ಉಪಾಹಾರದಲ್ಲಿ ಹುಳು ಪ್ರಕರಣ: ರೈಲ್ವೆ ಸಚಿವಾಲಯದಿಂದ ಶಿಸ್ತು ಕ್ರಮ

ನವದೆಹಲಿ: ವಂದೇ ಭಾರತ್ ಎಕ್ಸ್‌ಪ್ರೆಸ್‌ನಲ್ಲಿ ಪ್ರಯಾಣಿಕರಿಗೆ ನೀಡಲಾದ ಆಹಾರದಲ್ಲಿ ಹುಳು ಪತ್ತೆಯಾದ ವೀಡಿಯೊ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆದ ಬೆನ್ನಲ್ಲೇ, ರೈಲ್ವೆ ಸಚಿವಾಲಯ ತಪ್ಪಿತಸ್ಥರ ವಿರುದ್ಧ ಶಿಸ್ತು ಕ್ರಮ ಕೈಗೊಂಡಿದೆ. ಇತ್ತೀಚಿಗೆ ಪಾಟ್ನಾದ ವಂದೇ ಭಾರತ್ ಎಕ್ಸ್‌ಪ್ರೆಸ್‌ನಲ್ಲಿ ಪ್ರಯಾಣಿಸುತ್ತಿದ್ದ ವ್ಯಕ್ತಿಯೊಬ್ಬರು ತಮಗೆ ಉಪಹಾರದ ಜೊತೆ ನೀಡಿದ್ದ ಮೊಸರಿನ ಪ್ಯಾಕೇಟ್‌ಅನ್ನು ತೆರೆದಾಗ ಅದರಲ್ಲಿ ಜೀವಂತ ಹುಳುಗಳು ಓಡಾಡುವುದನ್ನು ಗಮನಿಸಿ, ಅದನ್ನು ವೀಡಿಯೊ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದರು. ಈ ಬಗ್ಗೆ ದೂರು ಬಂದ ಕೂಡಲೇ ರೈಲ್ವೆ ಅಧಿಕಾರಿಗಳು ಪ್ರಯಾಣಿಕನ ಆಸನದ ಬಳಿ ತೆರಳಿ ಆಹಾರದ ಗುಣಮಟ್ಟದ ಬಗ್ಗೆ ಪರಿಶೀಲನೆ ನಡೆಸಿದರು. ಆಗ ಮೊಸರಿನಲ್ಲಿ ಹುಳುಗಳು ಇರುವುದನ್ನು ಗಮನಿಸಿದ ಅಧಿಕಾರಿಗಳು ಸಂಬಂಧಪಟ್ಟ ಕ್ಯಾಟರಿಂಗ್ ಗುತ್ತಿಗೆದಾರನ ಮೇಲೆ ಕ್ರಮಕ್ಕೆ ಮುಂದಾದರು. ವೀಡಿಯೊ ವೈರಲ್ ಆಗುತ್ತಿದ್ದಂತೆಯೇ ಎಚ್ಚೆತ್ತ ರೈಲ್ವೆ ಸಚಿವಾಲಯವೂ ಕೂಡ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ, ಗುತ್ತಿಗೆದಾರರ ಮೇಲೆ ಮಾತ್ರವಲ್ಲದೆ ಇಡೀ ಕ್ಯಾಟರಿಂಗ್ ವ್ಯವಸ್ಥೆ ಉಸ್ತುವಾರಿ ಹೊತ್ತಿರುವ ಐಆರ್‌ಸಿಟಿಸಿ ಮೇಲೆಯೇ ಕ್ರಮಕ್ಕೆ ತೆಗೆದುಕೊಂಡು ಬರೋಬ್ಬರಿ 10 ಲಕ್ಷ ರೂ. ದಂಡ ವಿಧಿಸಿದೆ. ಜೊತೆಗೆ, ಜವಾಬ್ದಾರಿಯುತ ಖಾಸಗಿ ಅಡುಗೆ ಸೇವಾ ಪೂರೈಕೆದಾರರಿಗೆ 50 ಲಕ್ಷ ರೂ. ದಂಡ ವಿಧಿಸಿ, ಅವರೊಂದಿಗಿನ ಒಪ್ಪಂದವನ್ನು ರದ್ದುಪಡಿಸಿದೆ.



ಹುಲಿ ಸೆರೆಗೆ ಕೂಂಬಿಂಗ್ ಕಾರ್ಯಾಚರಣೆ



ಮಡಿಕೇರಿ, ಮಾ.26– ನಗರಕ್ಕೆ ಹೊಂದಿಕೊಂಡಿರುವ ಇಬ್ನಿವಳವಾಡಿ ಗ್ರಾಮದ ಕಾಫಿ ತೋಟದಲ್ಲಿ ಹುಲಿ ಕಂಡು ಬಂದ ಹಿನ್ನೆಲೆಯಲ್ಲಿ ಎರಡನೇ ದಿನವೂ ಹುಲಿಗಾಗಿ ಕೂಂಬಿಂಗ್ ಕಾರ್ಯಾಚರಣೆ ನಡೆಸಲಾಯಿತು. ದುಬಾರೆ ಸಾಕಾನೆ ಶಿಬಿರದ ಕಂಜನ್, ಈಶ್ವರ ಮತ್ತು ಪ್ರಶಾಂತ್ ಆನೆಗಳ ಸಹಿತ ಮಡಿಕೇರಿ, ಕುಶಾಲನಗರ, ದುಬಾರೆ ಅರಣ್ಯ ವಲಯಗಳ ಅಧಿಕಾರಿಗಳು ಡಿಸಿಎಫ್ ಅಭಿಶೇಕ್ ನೇತೃತ್ವದಲ್ಲಿ ಶೋಧ ಕಾರ್ಯಾಚರಣೆ ನಡೆಸಿದರು. 3 ಡ್ರೋಣ್‌ಗಳನ್ನು ಬಳಿಸಿ ಹುಲಿ ಪತ್ತೆಗೆ ಮುಂದಾದರೂ ಹುಲಿ ಮಾತ್ರ ಕಂಡು ಬರಲಿಲ್ಲ.

ಕಾಫಿ ತೋಟದ ಕೆಲವು ಕಡೆಗಳಲ್ಲಿ ಮಾತ್ರವೇ ಹುಲಿ ಹೆಜ್ಜೆಗಳು ಪತ್ತೆಯಾಗಿದ್ದು, ಹುಲಿ ಇರುವ ನಿಖರ ಸ್ಥಳ ಪತ್ತೆ ಸಾಧ್ಯವಾಗಿಲ್ಲ. ಸ್ಥಳದಲ್ಲಿ ಸಾರ್ವಜನಿಕರಿಗೆ ಪ್ರವೇಶ ನಿಷೇಧ ಮಾಡಲಾಗಿದ್ದು, ಆರ್‌ಆರ್‌ಟಿ ಮತ್ತು ಇಟಿಎಫ್ ಸಿಬ್ಬಂದಿಗಳು ಸ್ಥಳದಲ್ಲಿ ಬೀಡು ಬಿಟ್ಟಿದ್ದಾರೆ. ಹುಲಿ ಸೆರೆಗೂ ಸರಕಾರದಿಂದ ಅನುಮತಿ ದೊರೆತಿದ್ದು, ರಾತ್ರಿಯೂ ಕಾರ್ಯಾಚರಣೆ ಮುಂದುವರೆಯಲಿದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಇದೀಗ ಕಂಡು ಬಂದಿರುವ ಹುಲಿ ನಾಗರಹೊಳೆ, ಮಾಲ್ದಾರೆ ಅರಣ್ಯ ಮೂಲಕ ಇಬ್ನಿವಳವಾಡಿ ಗ್ರಾಮದ ಕಾಫಿ ತೋಟಕ್ಕೆ ಬಂದಿರುವ ಸಾಧ್ಯತೆ ಇದೆ. ತೋಟ ವ್ಯಾಪ್ತಿಯ 10 ಕಿ.ಮೀ ವ್ಯಾಪ್ತಿಯಲ್ಲಿ ಕೂಂಬಿಂಗ್ ನಡೆಸಲಾಗಿರುವ ಹಿನ್ನೆಲೆಯಲ್ಲಿ ಹುಲಿ ಮತ್ತೆ ಅರಣ್ಯ ಪ್ರವೇಶಿಸಿರುವ ಸಾಧ್ಯತೆಗಳಿವೆ.

ದೇವಟ್ ಪರಂಬುವಿನಲ್ಲಿ ಸಿಎನ್‌ಸಿ ಪುಷ್ಪ ನಮನ

ಹಕ್ಕೊತ್ತಾಯ ಮಂಡಿಸಿ ಹೋರಾಟಕ್ಕೆ ಜಯ ಕೋರಿದ ಎನ್.ಯು.ನಾಚಪ್ಪ



ದೇವಟ್ ಪರಂಬುವಿನಲ್ಲಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಪುಷ್ಪನಮನ ಸಲ್ಲಿಸಿತು.

ಮಡಿಕೇರಿ, ಮಾ.26– ಕೊಡವರ ನರಮೇಧ ನಡೆದ ದೇವಟ್ ಪರಂಬುವಿನಲ್ಲಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಪುಷ್ಪನಮನ ಸಲ್ಲಿಸಿತು. ಮರಣ ಹೊಂದಿದ ಹಿರಿಯರನ್ನು ಸ್ಮರಿಸಿದ ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ವಿವಿಧ ಹಕ್ಕೊತ್ತಾಯಗಳನ್ನು ಮಂಡಿಸಿ ಹೋರಾಟಕ್ಕೆ ಜಯ ಕೋರಿದರು.

ಕೊಡವಲ್ಯಾಂಡ್ ಭೌಗೋಳಿಕ–ರಾಜಕೀಯ ಪ್ರಾದೇಶಿಕ ಸ್ವಾಯತ್ತತೆ ನೀಡಬೇಕು, ಬುಡಕಟ್ಟು ಸ್ಥಾನಮಾನ ಕಲ್ಪಿಸಬೇಕು. ಕೊಡವ ಭೂಮಿ, ಭಾಷೆ, ಸಂಸ್ಕೃತಿ, ಆರ್ಥಿಕ ಮತ್ತು ರಾಜಕೀಯ ಸ್ವಾತಂತ್ರ್ಯಕ್ಕಾಗಿ ಸಂವಿಧಾನದಡಿ ವಿಶೇಷ ಖಾತರಿ ನೀಡಬೇಕು. ದೇವಟ್ ಪರಂಬುವಿನಲ್ಲಿ ಸ್ಮಾರಕ ತಾಣ ಸ್ಥಾಪಿಸಬೇಕು. ವಿಶ್ವ ರಾಷ್ಟ್ರ ಸಂಸ್ಥೆಯ ಹತ್ಯಾಕಾಂಡ ಸ್ಮಾರಕ ಪಟ್ಟಿಯಲ್ಲಿ ದೇವಟ್ ಪರಂಬ್ ಕೊಡವ ನರಮೇಧವನ್ನು ಸೇರಿಸಬೇಕು. 2027ರ ರಾಷ್ಟ್ರೀಯ ಜನಗಣತಿಯಲ್ಲಿ ಕೊಡವ ಸಮುದಾಯಕ್ಕೆ ಪ್ರತ್ಯೇಕ ಕೋಡ್ ಮತ್ತು ಕಾಲಂ ನೀಡಬೇಕು. ಕೊಡವ ಸಮುದಾಯವನ್ನು ಒಂದು ವಿಶಿಷ್ಟವಾದ ಗುಂಪಾಗಿ ಗುರುತಿಸಬೇಕು. ಕೊಡವ ವಿಶಿಷ್ಟ ಸಾಂಸ್ಕೃತಿಕ ಗುರುತನ್ನು ರಕ್ಷಿಸಬೇಕು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿದರು. ಬುಡಕಟ್ಟು ಜನಾಂಗ ಕೊಡವರ ಹಕ್ಕುಗಳನ್ನು ಸಿಎನ್‌ಸಿ ಸಂಘಟನೆ ನಿರಂತರವಾಗಿ ಪ್ರತಿಪಾದಿಸುತ್ತಾ ಬರುತ್ತಿದ್ದು, ಶಾಂತಿಯುತ ಹೋರಾಟಗಳನ್ನು ನಡೆಸುತ್ತಿದೆ. ಈ ಹೋರಾಟಕ್ಕೆ ಕೊಡವರ ಬೆಂಬಲ ಬೇಕಾಗಿದೆ ಎಂದು ಎನ್.ಯು. ನಾಚಪ್ಪ ತಿಳಿಸಿದರು.

ನಂದಿನೆರವಂಡ ರೇಖಾ ನಾಚಪ್ಪ, ಕಲಿಯಂಡ ಪ್ರಕಾಶ್, ಅಳಮಂಡ ಜೈ ಗಣಪತಿ, ಪಟ್ಟಮಾಡ ಕುಶ, ಅರೆಯಡ ಗಿರೀಶ್, ಮಂದಪಂಡ ಮನೋಜ್ ಮಂದಣ್ಣ, ಚೀಯಬೆರ ಸತೀಶ್, ಮಂದಪಂಡ ಸೂರಜ್, ಮಂಗೇರಿರ ಜಗದೀಶ್ ಹಾಗೂ ಪಟ್ಟಮಾಡ ರಿನಿತ್ ಕಾರ್ಯಪ್ಪ ಹಾಜರಿದ್ದು ಪುಷ್ಪ ನಮನ ಸಲ್ಲಿಸಿದರು.

ವಸತಿ ನಿಲಯಕ್ಕೆ ದಹನ ಯಂತ್ರ ವಿತರಣೆ



ಮಡಿಕೇರಿ, ಮಾ.26– ರೋಟರಿ ಮಡಿಕೇರಿ ವತಿಯಿಂದ ನಗರದ ಶ್ರೀ ರಾಜರಾಜೇಶ್ವರಿ ಶಾಲೆ ಮತ್ತು ಶ್ರೀ ರಮಾದೇವಿ ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯಕ್ಕೆ ದಹನ ಯಂತ್ರವನ್ನು ವಿತರಿಸಲಾಯಿತು.

ರೋಟರಿ ಸಂಸ್ಥೆಯು ಸಾಮಾಜಿಕ ಕಳಕಳಿ, ಶಿಕ್ಷಣ, ಆರೋಗ್ಯ ಜಾಗೃತಿ, ವೃತ್ತಿಪರ ಕೌಶಲ್ಯ, ಸ್ವಚ್ಛತೆ ಮತ್ತು ಪರಿಸರದ ಬಗ್ಗೆ ಹೆಚ್ಚು ಕಾಳಜಿ ಹೊಂದಿದೆ. ದಹನ ಯಂತ್ರ ವಿತರಿಸುವ ಮೂಲಕ ಇದನ್ನು ಸಾಬೀತುಪಡಿಸಿದೆ ಎಂದು ರೋಟರಿ ಮಡಿಕೇರಿ ಪ್ರಮುಖರು ತಿಳಿಸಿದರು.

ರೋಟರಿ ಮಡಿಕೇರಿ ಅಧ್ಯಕ್ಷೆ ಲಲಿತಾ ರಾಘವನ್, ಸಮುದಾಯ ಸೇವಾ ವಿಭಾಗದ ನಿರ್ದೇಶಕ ಸುದಯ್ ನಾಣಯ್ಯ, ಯುವಸೇವಾ ನಿರ್ದೇಶಕ ಅನಿಲ್ ಕೃಷ್ಣಾನಿ, ಮಲ್ಲಿಗೆ ಪೈ, ರೋ.ಈಶ್ವರ್ ಭಟ್, ಶ್ರೀ ರಾಜರಾಜೇಶ್ವರಿ ಶಾಲೆಯ ಶಿಕ್ಷಕ ವೃಂದ, ವಿದ್ಯಾರ್ಥಿಗಳು ಹಾಗೂ ಶ್ರೀ ರಮಾದೇವಿ ವಸತಿ ನಿಲಯದ ಸಿಬ್ಬಂದಿಗಳು ಹಾಜರಿದ್ದರು.

ಸರೋಜಾ ನಿಧನ



ನಾಪೋಕ್ಲು: ಇಲ್ಲಿಗೆ ಸಮೀಪದ ಪಾರಾಣೆ ಕಿರುದಾಡು ಗ್ರಾಮದ ನಿವಾಸಿ ದಿವಂಗತ ಕಷ್ಯದ ಪುರಂದರ ಅವರ ಧರ್ಮಪತ್ನಿ ಸರೋಜಾ (ಜಾಂಬವತಿ–85) ಬುಧವಾರ ನಿಧನರಾದರು. ಮೃತರ ಅಂತ್ಯಕ್ರಿಯೆ ಗುರುವಾರ ಕಿರುದಾಡು ಗ್ರಾಮದಲ್ಲಿ ನೆರವೇರಿತು. ಮೃತರು ಇಬ್ಬರು ಪುತ್ರರು, ಓರ್ವ ಪುತ್ರಿ, ಅಪಾರ ಬಂಧುಬಳಗವನ್ನು ಅಗಲಿದ್ದಾರೆ.

ಜೂಬಿ ಮೇದಪ್ಪ



ನಾಪೋಕ್ಲು: ಸ್ಥಳಿಯ ನಿವಾಸಿ ದಿವಂಗತ ಮಾಜಿ ಸೈನಿಕ ಅರೆಯಡ ಮೇದಪ್ಪ ಅವರ ಧರ್ಮಪತ್ನಿ ಜೂಬಿ ಮೇದಪ್ಪ (93) ಗುರುವಾರ ನಿಧನರಾದರು. ಮೃತರ ಅಂತ್ಯಕ್ರಿಯೆಯು ಶುಕ್ರವಾರ ಕುಟುಂಬದ ರುದ್ರಭೂಮಿಯಲ್ಲಿ ನಡೆಯಲಿದೆ. ಮೃತರು ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ.

ಪೂಣಚ್ಚ



ನಾಪೋಕ್ಲು: ಇಲ್ಲಿಗೆ ಸಮೀಪದ ಬಲ್ಲಮಾವಟಿ ಪೇರೂರು ಗ್ರಾಮದ ನಿವಾಸಿ ಜನಪದ ಕಲಾವಿದ, ಸಾಹಿತಿ, ಬೊಟ್ಟೋಳಂಡ ಮಿಟ್ಟು ಪೂಣಚ್ಚ (69) ಗುರುವಾರ ನಿಧನರಾದರು. ಮೃತರ ಅಂತ್ಯಕ್ರಿಯೆಯು ಶುಕ್ರವಾರ ಕುಟುಂಬದ ರುದ್ರಭೂಮಿಯಲ್ಲಿ ನಡೆಯಲಿದೆ. ಮೃತರು ಪತ್ನಿ ಹಾಗೂ ಇಬ್ಬರು ಪುತ್ರರನ್ನು ಅಗಲಿದ್ದಾರೆ.

ಬ್ರಿಟಿಷರ ಕಾಲದ ಸೇತುವೆ ಮೇಲೆ ಪೈಪ್‌ಲೈನ್ ಅಳವಡಿಕೆ

ಸಾರ್ವಜನಿಕರ ಓಡಾಟಕ್ಕೆ ಅಡ್ಡಿ; ರಸ್ತೆ ತಡೆ ಎಚ್ಚರಿಕೆ

ಮಡಿಕೇರಿ, ಮಾ.26–ಕೂಡಿಗೆ–ಕೂಡುಮಂಗಳೂರು ಭಾಗದಲ್ಲಿರುವ ಬ್ರಿಟಿಷರ ಕಾಲದ ಸೇತುವೆಯ ಮೇಲ್ಭಾಗ 'ಅಮೃತ್ 2' ಯೋಜನೆಯಡಿ ಕುಶಾಲನಗರಕ್ಕೆ ಶಾಶ್ವತ ಕುಡಿಯುವ ನೀರು ಕಲ್ಪಿಸುವ ಯೋಜನೆಯಡಿ ಪೈಪ್ ಲೈನ್ ಅಳವಡಿಸಿದ್ದು, ಈ ಸೇತುವೆ ಮೇಲ್ಭಾಗ ಸಾರ್ವಜನಿಕರು ತಿರುಗಾಡಲು ತೊಂದರೆಯಾಗುತ್ತಿದೆ. ಮುಂದಿನ ದಿನಗಳಲ್ಲಿ ಇದನ್ನು ಸರಿಪಡಿಸದೆ ಇದ್ದಲ್ಲಿ ರಸ್ತೆ ತಡೆ ನಡೆಸಲಾಗುವುದು ಎಂದು ಈ ವ್ಯಾಪ್ತಿಯ ಸಾರ್ವಜನಿಕರು ಎಚ್ಚರಿಸಿದ್ದಾರೆ.

ಈ ಕುರಿತು ಬಸವನಹಳ್ಳಿ ಲ್ಯಾಂಪ್ ಸೊಸೈಟಿ ಅಧ್ಯಕ್ಷ ಎಸ್.ಆರ್ ಅರುಣ್ ರಾವ್ ಮಾತನಾಡಿ, ಕೂಡಿಗೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಅಮೃತ್ 2 ಯೋಜನೆಯಡಿ ಶಾಶ್ವತ ಕುಡಿಯುವ ನೀರನ್ನು ಕಲ್ಪಿಸುವ ಯೋಜನೆಯಡಿ ಹಾರಂಗಿ ನದಿ ಸಂಗಮದಿಂದ ಕೂಡಿಗೆ ಮಾರ್ಗವಾಗಿ ಕುಶಾಲನಗರಕ್ಕೆ ಶಾಶ್ವತ ಕುಡಿಯುವ ನೀರನ್ನು ಸರಬರಾಜು ಮಾಡಲು ಕಾಮಗಾರಿಯೂ ನಡೆದಿದೆ. ಕಾಮಗಾರಿಯ ಸಂದರ್ಭದಲ್ಲಿ ಪೈಪ್ ಲೈನ್ ಮುಚ್ಚುವ ಕಾಮಗಾರಿಯೂ ಸರಿಯಾಗಿ ಮಾಡಿಲ್ಲ. ದೊಡ್ಡ ಕಲ್ಲುಗಳು, ಗಾರೆಯ ತುಂಡುಗಳು ಅಲ್ಲಲ್ಲೇ ಬಿದ್ದಿದ್ದು ಇದರಿಂದ ಸಾರ್ವಜನಿಕರ ಸಂಚಾರಕ್ಕೆ ತೊಂದರೆಯಾಗುತ್ತಿದೆ. ಅವೈಜ್ಞಾನಿಕವಾಗಿ ಪೈಪ್‌ಲೈನ್ ಅಳವಡಿಸಿದ್ದು, ಸಂಬಂಧಪಟ್ಟ ಇಲಾಖೆ ಅಧಿಕಾರಿಗಳಿಗೆ ತಿಳಿಸಿದರೂ ಸ್ಪಂದಿಸುತ್ತಿಲ್ಲ. ಮುಂದಿನ ದಿನಗಳಲ್ಲಿ ಈ ರಸ್ತೆ ತಡೆದು ಪ್ರತಿಭಟನೆ ಮಾಡಲಾಗುವುದು ಎಂದು ಎಚ್ಚರಿಸಿದರು.



ಕರವೇ ಜಿಲ್ಲಾಧ್ಯಕ್ಷ ಕೆ.ಪಿ.ರಾಜು, ಬಾಲಕೃಷ್ಣ, ಗ್ರಾಮಸ್ಥರಾದ ಮಲ್ಲೇಶ್, ರಂಗ, ಸಂತೋಷ, ಜಯಂತ್, ಪ್ರಸನ್ನ ಸೇರಿದಂತೆ ಮತ್ತಿತರರು ಹಾಜರಿದ್ದರು.

ಶಿಕ್ಷಣದ ಜೊತೆಗೆ ಜೀವನದ ಪಾಠ ಕಲಿಯಿರಿ

ವಿದ್ಯಾರ್ಥಿ ವಿನಿಮಯ ಕಾರ್ಯಕ್ರಮದಡಿ 8 ವಿದ್ಯಾರ್ಥಿಗಳು ಜಪಾನ್‌ಗೆ



ಜಪಾನ್‌ಗೆ ತೆರಳುತ್ತಿರುವ ವಿದ್ಯಾರ್ಥಿಗಳಿಗೆ ಡಿಸಿ ಡಾ.ಕುಮಾರ್ ಶುಭ ಹಾರೈಸಿದರು.

ಮಂಡ್ಯ, ಮಾ.26– ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಮೌಲ್ಯಗಳು, ಸ್ವತಂತ್ರವಾಗಿ ಬದುಕುವ ಹಾಗೂ ಸಮಸ್ಯೆ, ಸವಾಲುಗಳನ್ನು ಎದುರಿಸುವ ಜೀವನದ ಪಾಠ ಕಲಿಯಬೇಕು ಎಂದು ಜಿಲ್ಲಾಧಿಕಾರಿ ಡಾ.ಕುಮಾರ್ ತಿಳಿಸಿದರು.

ನಗರದ ಹೊರವಲಯದ ರಿಪಬ್ಲಿಕ್ ಎಜುಕೇಷನ್ ಟ್ರಸ್ಟ್‌ನಿಂದ 4ನೇ ಬಾರಿಗೆ ಜಪಾನ್‌ನಲ್ಲಿ ನಡೆಯುವ ವಿದ್ಯಾರ್ಥಿ ವಿನಿಮಯ ಕಾರ್ಯಕ್ರಮಕ್ಕೆ ತೆರಳುತ್ತಿರುವ ವಿದ್ಯಾರ್ಥಿಗಳಿಗೆ ಶುಭ ಹಾರೈಸಿ ಮಾತನಾಡಿದ ಅವರು, ಜೀವನದಲ್ಲಿ ಶಿಸ್ತು, ಸಂಯಮ, ಸಮಯ ಪಾಲನೆ ಅಗತ್ಯವಾಗಿದೆ. ಇಂತಹ ಪ್ರವಾಸಗಳಿಂದ ಹೊಸ ತನ್ನು ಕಲಿಯುವ ಮೂಲಕ ಹೊಸ ಅನುಭವ ಪಡೆಯಬೇಕು. ಅವಕಾಶಗಳನ್ನು ಸದ್ಬಳಕೆ ಮಾಡಿಕೊಂಡು ಮುನ್ನಡೆಯಬೇಕು ಎಂದರು.

ಜಪಾನ್ ದೇಶದ ಸಂಸ್ಕೃತಿ ಹಾಗೂ ಭಾಷೆ ಇತರೆ ದೇಶಗಳಿಗಿಂತ ವಿಭಿನ್ನವಾಗಿದೆ. ಅಲ್ಲಿ ಹೆಚ್ಚು ವಯಸ್ಕರು ಇದ್ದಾರೆ. ಕಾರಣ ಅಲ್ಲಿನ ಜೀವನ ಶೈಲಿಯಾಗಿದೆ. ಚಿಕ್ಕಂದಿನಿಂದಲೇ ಮಕ್ಕಳಿಗೆ ಬದುಕುವ ಸಂಸ್ಕಾರ, ಸಂಸ್ಕೃತಿ ಹಾಗೂ ಯಾರ ಮೇಲೂ ಅವಲಂಬಿತರಾಗದೆ ಸ್ವತಂತ್ರವಾಗಿ ಬದುಕುವುದನ್ನು ಕಲಿಸುತ್ತಾರೆ. ಇದರಿಂದ 120 ರಿಂದ 130 ವರ್ಷಗಳವರೆಗೆ ಬದುಕುತ್ತಾರೆ ಎಂಬುದನ್ನು ಓದಿದ್ದೇನೆ ಎಂದರು.

ವಿದ್ಯಾರ್ಥಿಗಳು ಹೆಚ್ಚು ಪುಸ್ತಕಗಳನ್ನು ಓದಬೇಕು. ಎಷ್ಟು ಜನ ಸ್ನೇಹಿತರಿದ್ದಾರೆ ಎನ್ನುವುದಕ್ಕಿಂತ ಎಷ್ಟು ಪುಸ್ತಕಗಳನ್ನು ಓದಿದ್ದೇನೆ ಎಂಬುದನ್ನು ಅರಿಯಬೇಕು. ಪುಸ್ತಕಗಳನ್ನು ಓದಿದಷ್ಟು ಜ್ಞಾನ ಹೆಚ್ಚಾಗುತ್ತದೆ. ಸದಾ ಮಾನಸಿಕ ಹಾಗೂ ದೈಹಿಕ ಸ್ಥಿರತೆ ಕಾಪಾಡಿಕೊಳ್ಳಬೇಕು. ಜೀವನದಲ್ಲಿ ಸಮಯ ದೊಡ್ಡ ವರ ಇದ್ದಂತೆ. ಅದನ್ನು ಸದ್ಬಳಕೆ ಮಾಡಿಕೊಂಡು ಈಗಿನಿಂದಲೇ ಜೀವನ ಹಾಗೂ ವ್ಯಕ್ತಿತ್ವ ರೂಪಿಸಿಕೊಳ್ಳಬೇಕು ಎಂದರು.

ಟ್ರಸ್ಟ್ ಅಧ್ಯಕ್ಷ ಮಂಜು ಮಾತನಾಡಿ, ನಮ್ಮ ಶಾಲೆಯ 8 ವಿದ್ಯಾರ್ಥಿಗಳು 4ನೇ ಬಾರಿಗೆ ಜಪಾನ್‌ನಲ್ಲಿ ನಡೆಯುವ ಹ್ಯೊಗೋ ಇಂಟರ್ ನ್ಯಾಷನಲ್ ಅಸೋಸಿಯೇಷನ್ ಕೋಬ್, ಹ್ಯೋ ಜಪಾನ್ ಎಂಬ ವಿದ್ಯಾರ್ಥಿ ವಿನಿಮಯ ಕಾರ್ಯಕ್ರಮಕ್ಕೆ ಆಯ್ಕೆಯಾಗಿದ್ದು, 10 ದಿನಗಳ ಕಾಲ ವಿದ್ಯಾರ್ಥಿ ವಿನಿಮಯ ಕಾರ್ಯಕ್ರಮದಲ್ಲಿ ಭಾಗವಹಿ ಸುವರು ಎಂದರು.

ವಿದ್ಯಾರ್ಥಿಗಳಾದ ವಿಸ್ಮಯ್.ಆರ್, ನಿಶ್ಚಯ್.ಆರ್, ಸಾನ್ವಿ ಶ್ರೀಧರ್, ಸಿರಿಲಕ್ಷ್ಮಿ, ಹಿತೇಶ್ ಸಿಂಗ್, ಪರಿಣಿತ್ ಜೆ.ಗೌಡ, ಮನ್ವಿತ್ ರಾಜ್ ದತ್ತಾತ್ರೇಯ, ದುಶ್ಯಂತ್ ಆಯ್ಕೆಯಾಗಿದ್ದು, ನಮ್ಮ ಶಾಲೆ ಚಟುವಟಿಕೆ ಆಧಾರಿತವಾಗಿ ಶಿಕ್ಷಣ ನೀಡುತ್ತಿದೆ. ಕರಾಟೆ, ಯೋಗ, ಕ್ರೀಡೆಯಲ್ಲೂ ಮಕ್ಕಳು ಅತ್ಯುತ್ತಮ ಸಾಧನೆ ಮಾಡಿದ್ದಾರೆ ಎಂದು ಶ್ಲಾಘಿಸಿದರು.

ಕುರುಬರ ಸಂಘದ ಜಿಲ್ಲಾಧ್ಯಕ್ಷರಿಗೆ ಘೇರಾವ್; ಕಪ್ಪು ಮಸಿ ಎರಚಿ ಸದಸ್ಯರ ಆಕ್ರೋಶ



ಕುರುಬರ ಸಂಘದ ಜಿಲ್ಲಾಧ್ಯಕ್ಷ ಸುರೇಶ್ ಮೇಲೆ ಸದಸ್ಯರು ಮಸಿ ಎರಚಿರುವುದು

ಮಂಡ್ಯ, ಮಾ.26– ನಗರದ ಜಿಲ್ಲಾ ಕುರುಬರ ಸಂಘದ ಆವರಣದಲ್ಲಿ ಸಂಘದ ಜಿಲ್ಲಾಧ್ಯಕ್ಷ ಮಳವಳ್ಳಿ ಸುರೇಶ್ ಅವರಿಗೆ ಸಂಘದ ಸದಸ್ಯರೇ ಘೇರಾವ್ ಹಾಕಿ, ಮೈ ಮೇಲೆ ಕಪ್ಪು ಮಸಿ ಎರಚಿ ಪ್ರತಿಭಟನೆ ನಡೆಸಿದ ಘಟನೆ ಗುರುವಾರ ನಡೆದಿದೆ.

ಸಂಘದ ಜಿಲ್ಲಾಧ್ಯಕ್ಷ ಮಳವಳ್ಳಿ ಸುರೇಶ್ ಅವರು ಸಂಘದ ಆವರಣಕ್ಕೆ ಆಗಮಿಸುತ್ತಿದ್ದಂತೆಯೇ ಸಂಘದ ಕೆಲವು ಸದಸ್ಯರು ಅವಧಿ ಮುಗಿದರೂ ಸಂಘದ ಅಧ್ಯಕ್ಷ ಸ್ಥಾನದಲ್ಲಿ ಮುಂದುವರೆಯುತ್ತಿರುವುದನ್ನು ಖಂಡಿಸಿ ಘೇರಾವ್ ಮಾಡಿ ಕಪ್ಪು ಮಸಿ ಎರಚಿ ಆಕ್ರೋಶ ವ್ಯಕ್ತಪಡಿಸಿದರು.

ಜಿಲ್ಲಾಧ್ಯಕ್ಷ ಸ್ಥಾನದ 5 ವರ್ಷದ ಅವಧಿ ಮಾ.6ಕ್ಕೆ ಮುಕ್ತಾಯವಾಗಿದೆ. ಆದರೆ ಸಂಘದ ಅಧ್ಯಕ್ಷ ಸುರೇಶ್ ಹಿಂದಿನ ಆಡಳಿತ ಮಂಡಳಿಯವರನ್ನು ಕಟ್ಟಿಕೊಂಡು ಹಿಂಬಾಗಿಲಿನಿಂದ ಹುನ್ನಾರ ನಡೆಸಿ ಸಂಘದಲ್ಲಿ ಹಣ ಲಪಟಾಯಿಸಲು ಹುನ್ನಾರ ನಡೆಸುತ್ತಿದ್ದಾರೆ. ಮತ್ತೊಂದು ಅವಧಿಗೆ ಈಗಿನ ಆಡಳಿತ ಮಂಡಳಿಯನ್ನು ಮುಂದುವರೆಸುತ್ತಿದ್ದಾರೆ ಎಂದು ಹರಿಹಾಯ್ದರು.

ಹಿಂದಿನ ಆಡಳಿತ ಮಂಡಳಿ ಮುಂದುವರೆಸುವ ಸಂಬಂಧ ಈ ಹಿಂದೆ ನಡೆದ ಸರ್ವ ಸದಸ್ಯರ ವಾರ್ಷಿಕ ಮಹಾ ಸಭೆಯಲ್ಲೂ ಸದಸ್ಯರು ವಿರೋಧ ವ್ಯಕ್ತಪಡಿಸಿದ್ದಾರೆ. ಇದರಿಂದಾಗಿ ಅಂದಿನ ಸಭೆಯೂ ಸಹ ರದ್ದಾಗಿತ್ತು. ಆದರೂ ಸಹ, ಅಧ್ಯಕ್ಷರು ಅಧಿಕಾರ ದುರ್ಬಳಕೆ ಮಾಡಿಕೊಂಡು ಸಭೆಯಲ್ಲಿ ನಿರ್ಣಯವಾಗಿದೆ ಎಂದು ಸುಳ್ಳು ಮಾಹಿತಿ ನೀಡಿ ಆಡಳಿತ ಮಂಡಳಿ ಮುಂದುವರೆಸಿದ್ದಾರೆ ಎಂದು ಕಿಡಿಕಾರಿದರು.

ಅಧ್ಯಕ್ಷ ಸುರೇಶ್ ಸಿಎಂ ಆಪ್ತ ದಡದಪುರ ಶಿವಣ್ಣ ಅವರ ಬಲದಿಂದ ಅಧಿಕಾರ ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ನೀವು ಸಂಘದ ಬೈಲಾ ಪ್ರಕಾರ 5 ವರ್ಷಕ್ಕೆ ರಾಜೀನಾಮೆ ನೀಡಿ, ಬಳಿಕ ಚುನಾವಣೆ ನಡೆಸಿ ಮತ್ತೆ ಗೆದ್ದು ಬಾ, ಮತ್ತೆ ಅಧ್ಯಕ್ಷನಾಗಿ ಅಧಿಕಾರ ನಡೆಸು ಆದರೆ ಹಿಂಬಾಗಿಲಿನಿಂದ ಅಧಿಕಾರ ಹಿಡಿಯಬೇಡ ಎಂದು ಹರಿಹಾಯ್ದರು.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಪೊಲೀಸರ ಎದುರೇ ಅಧ್ಯಕ್ಷರಿಗೆ ಸದಸ್ಯರು ತರಾಟೆ ತೆಗೆದುಕೊಂಡರು. ಬಳಿಕ ಪೊಲೀಸರ ರಕ್ಷಣೆಯಲ್ಲಿ ಅಧ್ಯಕ್ಷ ಸುರೇಶ್ ಸ್ಥಳದಿಂದ ಕಾರ್‌ನಲ್ಲಿ ತೆರಳಲು ಯತ್ನಿಸಿದಾಗ ಸದಸ್ಯರು ಕಾರ್ ಮುಂದೆ ಘೇರಾವ್ ಹಾಕಿ ಪ್ರತಿಭಟನೆ ನಡೆಸಲು ಮುಂದಾದರು. ಬಳಿಕ ಪೊಲೀಸರು ಸದಸ್ಯರನ್ನು ಸಮಾಧಾನಪಡಿಸಿ ಅಧ್ಯಕ್ಷ ಸುರೇಶ್ ಅವರನ್ನು ಕಳುಹಿಸಿಕೊಟ್ಟರು.

ಪ್ರತಿಭಟನೆಯಲ್ಲಿ ಚಂದಹಳ್ಳಿ ಶ್ರೀಧರ್, ಸ್ವಾಮಿ, ಶ್ರೀರಂಗಪಟ್ಟಣ ಮಂಜು, ಮದ್ದೂರು ಬೀರೇಶ್, ಅಣಸಾಲೆ ಶಿವಣ್ಣ, ಶಿವರಾಮು, ಗೋಪಾಲ್, ರಮೇಶ್ ಸೇರಿದಂತೆ ಹಲವರು ಹಾಜರಿದ್ದರು.

ಏ.6ರಂದು ದಿಶಾ ಸಭೆ

ಮಂಡ್ಯ, ಮಾ.26– ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕೆ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ಏ.6ರಂದು ಬೆಳಗ್ಗೆ 11 ಗಂಟೆಗೆ ಮಂಡ್ಯ ಜಿಪಂ ಕಾವೇರಿ ಸಭಾಂಗಣದಲ್ಲಿ ದಿಶಾ ಸಮಿತಿ ಸಭೆ ಆಯೋಜಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಕಟ್ಟೇರಿ ಡೈರಿ ಅಧ್ಯಕ್ಷರಾಗಿ ರಾಮಚಂದ್ರು ಅವಿರೋಧ ಆಯ್ಕೆ

ಪಾಂಡವಪುರ, ಮಾ.26– ತಾಲೂಕಿನ ಕಟ್ಟೇರಿ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಕೆ.ಜೆ.ರಾಮಚಂದ್ರು, ಉಪಾಧ್ಯಕ್ಷರಾಗಿ ನಾಗರಾಜು ಅವಿರೋಧವಾಗಿ ಆಯ್ಕೆಯಾದರು.

ಈ ಹಿಂದಿನ ಅಧ್ಯಕ್ಷೆ ರಜನಿ, ಉಪಾಧ್ಯಕ್ಷೆ ಶಶಿಕಲಾ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಗಳಿಗೆ ಗುರುವಾರ ಚುನಾವಣೆ ನಿಗದಿಯಾಗಿತ್ತು. ಅಧ್ಯಕ್ಷ ಸ್ಥಾನಕ್ಕೆ ಕೆ.ಜೆ.ರಾಮಚಂದ್ರು, ಉಪಾಧ್ಯಕ್ಷ ಸ್ಥಾನಕ್ಕೆ ನಾಗರಾಜು ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿಯೂ ಆದ ಸಂಘದ ಕಾರ್ಯದರ್ಶಿ ದೇವರಾಜು ಅವಿರೋಧ ಆಯ್ಕೆಯನ್ನು ಘೋಷಿಸಿದರು.

ನೂತನ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆಯಾಗುತ್ತಿದ್ದಂತೆಯೇ ಸಂಘದ ಆವರಣದಲ್ಲಿ ನೆರೆದಿದ್ದ ಅಭಿಮಾನಿಗಳು ಹಾಗೂ ಜೆಡಿಎಸ್ ಮುಖಂಡರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಾಚರಣೆ ನಡೆಸಿದರು. ಅಲ್ಲದೇ ನೂತನ ಪರಿಷ್ಠರನ್ನು ಸನ್ಮಾನಿಸಿದರು.

ನೂತನ ಅಧ್ಯಕ್ಷ ಕೆ.ಜೆ.ರಾಮಚಂದ್ರು ಮಾತನಾಡಿ, ಮಾಜಿ ಸಚಿವ ಸಿ.ಎಸ್. ಪುಟ್ಟರಾಜು ಹಾಗೂ ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಅವರ ಆಶೀರ್ವಾದದಿಂದ ಡೇರಿ ಅಧ್ಯಕ್ಷನಾಗಿ ಅವಿರೋಧವಾಗಿ ಆಯ್ಕೆಯಾಗಿದ್ದೇನೆ. ಸಂಘದ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇನೆ. ಎಲ್ಲರೂ ಸಹಕಾರ ನೀಡಬೇಕು. ಒಕ್ಕೂಟದಿಂದ ದೊರೆಯುವ ಎಲ್ಲಾ ಸೌಲಭ್ಯಗಳನ್ನು ಒದಗಿಸಿಕೊಡುವ ಪ್ರಾಮಾಣಿಕ ಕೆಲಸ ಮಾಡುತ್ತೇನೆ ಎಂದರು.



ಕಟ್ಟೇರಿ ಡೇರಿ ಅಧ್ಯಕ್ಷರಾಗಿ ಕೆ.ಜೆ.ರಾಮಚಂದ್ರು ಉಪಾಧ್ಯಕ್ಷರಾಗಿ ನಾಗರಾಜು ಆಯ್ಕೆಯಾದರು.

ಈ ವೇಳೆ ನಿರ್ದೇಶಕರಾದ ಅನಂತು, ಕೆ.ಎಸ್.ಸತೀಶ್, ಕೆ.ವಿ.ರಘು, ಅನಿಲ್ ಕುಮಾರ್, ಕುಮಾರ್, ಯಶೋಧಮ್ಮ, ಮಂಜು, ಅನಂತು, ಮುಖಂಡರಾದ ಕೆ.ಜೆ. ರಾಜೇಂದ್ರ ಕುಮಾರ್, ವಿ.ಕೆ.ನಾಗೇಗೌಡ, ಕೆ.ಎಸ್.ಚಂದ್ರಶೇಖರ್, ಕೆ.ಎಸ್.ಕಾಳೇಗೌಡ, ಇಂದ್ರಕುಮಾರ್, ಕೆ.ಜೆ.ಪರಮೇಶ್, ಕೆ.ಆರ್.ನಾಗರಾಜು, ಕೃಷ್ಣೇಗೌಡ, ಕೆ.ಎಸ್.ವರದ, ಸಿಬ್ಬಂದಿಗಳಾದ ಪರಮೇಶ್, ಸುದೀಪ್, ಲತಾ ಇದ್ದರು.

ಒಳಮೀಸಲಾತಿ ಜಾರಿಗೆ ಒತ್ತಾಯಿಸಿ ಬೃಹತ್ ಪ್ರತಿಭಟನೆ

ಚಾಮರಾಜನಗರದಲ್ಲಿ ಎಡಗೈ ಸಮುದಾಯದವರ ಶಕ್ತಿ ಪ್ರದರ್ಶನ

ಚಾಮರಾಜನಗರ, ಮಾ.26– ಒಳ ಮೀಸಲಾತಿ ಜಾರಿಗೆ ಒತ್ತಾಯಿಸಿ ಡಾ. ಬಾಬುಜಗ ಜೀವನರಾಂ ಸಂಘಟನೆಗಳ ಒಕ್ಕೂಟ ಹಾಗೂ ಮಾದಿಗ ಸಂಘಟನೆಗಳ ಒಕ್ಕೂಟ ವತಿಯಿಂದ ನಗರದಲ್ಲಿಂದು ಬೃಹತ್ ಪ್ರತಿಭಟನೆ ನಡೆಸಲಾಯಿತು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದ ಆವರಣದಲ್ಲಿ ಸಮಾವೇಶಗೊಂಡ ಪ್ರತಿಭಟನಾನಿರತರು ಅಲ್ಲಿಂದ ಮೆರವಣಿಗೆ ಹೊರಟು ದೊಡ್ಡಂಗಡಿ, ಚಿಕ್ಕಂ ಗಡಿ ಬೀದಿ, ಸಂತೇಮರಳ್ಳಿ ವೃತ್ತ, ಪಚ್ಚಪ್ಪ ವೃತ್ತದಲ್ಲಿ ಕೆಲಕಾಲ ಮಾನವ ಸರಪಳಿ ರಚಿಸಿ ರಾಷ್ಟ್ರೀಯ ಹೆದ್ದಾರಿ ತಡೆದು ರಾಜ್ಯ ಸರ್ಕಾರದ ವಿರುದ್ಧ ಅಕ್ರೋಶ ವ್ಯಕ್ತಪಡಿಸಿದರು.

ನಂತರ ಮೆರವಣಿಗೆಯು ,ಬಿ.ರಾಚಯ್ಯ ಜೋಡಿರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಕೆಲಕಾಲ ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿಗಳ ಮುಖಾಂತರ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಡಾ.ಬಾಬುಜಗಜೀವನರಾಂ ಸಂಘಟನೆಗಳ ಒಕ್ಕೂಟದ ಜಿಲ್ಲಾ ಗೌರವಾಧ್ಯಕ್ಷ ಬಸವನಪುರ ರಾಜಶೇಖರ ಮಾತನಾಡಿ, ಕಳೆದ 36 ವರ್ಷಗಳಿಂದಲೂ ಒಳಮೀಸಲಾತಿಗಾಗಿ ಹೋರಾಟ ಮಾಡಿಕೊಂಡು ಬರಲಾಗಿದ್ದು, ಒಳ ಮೀಸಲಾತಿ ವಿಧೇಯಕವು ರಾಜ್ಯಪಾಲರ ಸಹಿ ಪಡೆದು ಅನುಮೋದನೆಗೊಂಡಿದೆ ಎಂದು ಸಂತೋಷ ಪಡುವ ಸಂದರ್ಭದಲ್ಲಿ ಒಳ ಮೀಸಲಾತಿ ಅನ್ವಯವಾಗದಂತೆ 56,462 ಸಾವಿರ ಹುದ್ದೆಗಳನ್ನು ಭರ್ತಿ ಮಾಡುತ್ತೇವೆ ಎಂಬ ಮಾರ್ಚ್16ರ ಸಚಿವ ಸಂಪುಟದ ತೀರ್ಮಾನ ಸಂವಿಧಾನ ಮತ್ತು ಸಾಮಾಜಿಕ ನ್ಯಾಯಕ್ಕೆ ಬಗೆದ ಘೋರ ಅನ್ಯಾಯವಾಗಿದೆ. ಆ ಮೂಲಕ 35 ವರ್ಷಗಳ ಒಳ ಮೀಸಲಾತಿ ಹೋರಾಟಕ್ಕೆ ಮಹಾದ್ರೋಹ ಎಸೆಯಲಾಗಿದೆ. ಸರ್ಕಾರದ ಈ ತೀರ್ಮಾನವನ್ನು ತೀವ್ರವಾಗಿ ಖಂಡಿಸಲಾಗುತ್ತದೆ ಎಂದರು.

ಚುನಾವಣೆ ಪೂರ್ವದಲ್ಲಿ ಸರ್ಕಾರ ಬಂದ ಮೊದಲನೇ ಅಧಿವೇಶನದಲ್ಲಿಯೇ ಒಳ ಮೀಸಲಾತಿಯನ್ನು ನಮ್ಮ ಸರ್ಕಾರ ಜಾರಿಗೊಳಿಸುತ್ತದೆ ಎಂದು ಪ್ರಣಾಳಿಕೆಯಲ್ಲಿ ಕಾಂಗ್ರೆಸ್ ಘೋಷಿಸಿತ್ತು. ಚಿತ್ರದುರ್ಗ ಸಮಾವೇಶದಲ್ಲಿಯೂ ಅದೇ ಭರವಸೆ ನೀಡಲಾಗಿತ್ತು. ಸರ್ಕಾರ ಬಂದು 2 ವರ್ಷ ಮುಗಿಯುತ್ತಿದ್ದರೂ ಒಳಮೀಸಲಾತಿಯನ್ನು ಜಾರಿಗೊಳಿಸುವ ಪ್ರಾಮಾಣಿಕ ಪ್ರಯತ್ನ ನಡೆಸಲಿಲ್ಲ. ಅಂತಿಮವಾಗಿ ಸುಪ್ರೀಂ ಕೋರ್ಟಿನ ತೀರ್ಪಿನ ನಂತರ ಹೋರಾಟದ ಒತ್ತಡಕ್ಕೆ ಮಣಿದು ಸಚಿವ ಸಂಪುಟದಲ್ಲಿ ಒಳ ಮೀಸಲಾತಿ ಜಾರಿಗೆ ತರುತ್ತೇವೆಂದು ತಾತ್ವಿಕವಾಗಿ ಒಪ್ಪಿಕೊಂಡು 2025 ಆಗಸ್ಟ್ 25 ರಂದು ಆದೇಶ ಹೊರಡಿಸಿದ್ದೀರಿ. 2025ರ ಚಳಿಗಾಲದ ಅಧಿ ವೇಶನದಲ್ಲಿ ಶಾಸನ ಬದ್ಧ ಕಾಯ್ದೆ ಮಾಡಿಕೊಂಡು ರಾಜ್ಯಪಾಲರಿಂದ ಅಂತಿಮ ಅಂಗೀಕಾರ ಪಡೆಯಲಾಗಿದೆ. ಇಷ್ಟೆಲ್ಲ ಇದ್ದೂ ಒಳ ಮೀಸಲಾತಿ ಇಲ್ಲದೇ ನೇಮಕಾತಿಗಳನ್ನು ಭರ್ತಿ ಮಾಡುವಂತೆ ಸಚಿವ ಸಂಪುಟ ತೀರ್ಮಾನ ತೆಗೆದುಕೊಳ್ಳುವುದು ಸರ್ಕಾರಕ್ಕೆ ಆತ್ಮಸಾಕ್ಷಿ ಇಲ್ಲ ಎಂಬುದನ್ನು ಸಾರುತ್ತದೆ ಎಂದರು.



ಒಳಮೀಸಲಾತಿಯನ್ನು ಸಂಪೂರ್ಣ ಜಾರಿ ಮಾಡುವಂತೆ ಒತ್ತಾಯಿಸಿ ಚಾಮರಾಜನಗರದಲ್ಲಿ ಡಾ.ಬಾಬು ಜಗಜೀವನರಾಂ ಹಾಗೂ ಮಾದಿಗ ಸಂಘಟನೆಗಳ ಒಕ್ಕೂಟ ವತಿಯಿಂದ ಬೃಹತ್ ಪ್ರತಿಭಟನೆ ನಡೆಯಿತು.

ಭಾರತದ ಹಲವಾರು ರಾಜ್ಯದಲ್ಲಿ ಪ.ಜಾತಿ/ಪ.ಪಂಗಡ ಸಮುದಾಯಗಳಿಗೆ ಜನಸಂಖ್ಯೆಗೆ ಅನುಗುಣವಾಗಿ ಸಂವಿಧಾನ ಬದ್ಧವಾಗಿ ಮೀಸಲಾತಿ ಪ್ರಮಾಣ ಹೆಚ್ಚಿಸಿ ಅನುಷ್ಠಾನಗೊಳಿಸಲಾಗಿದೆ. ಆದರೆ ಕರ್ನಾಟಕದಲ್ಲಿ 2022 ಡಿಸೆಂಬರ್ 28 ರಂದು ಜಾರಿಗೆ ಬಂದ ಪ.ಜಾ 17% ಮತ್ತು ಪ.ಪಂ 7% ಮೀಸಲು ಪ್ರಮಾಣ ಹೆಚ್ಚಳ ದಂತೆ ಉದ್ಯೋಗಗಳನ್ನು ನೀಡದೆ ಪರಿಶಿಷ್ಟ ಜಾತಿಗೆ 2% ಕಡಿತ ಎಂದರೆ 1129 ಮತ್ತು ಪರಿಶಿಷ್ಟ ಪಂಗಡಕ್ಕೆ 4% ಕಡಿತ ಎಂದರೆ 2,258 ಒಟ್ಟು ಪ.ಜಾ–ಪ.ಪ ದಲಿತ ಸಮುದಾಯಕ್ಕೆ ಸಿಗಬೇಕಾದ 3387ಕ್ಕು ಹೆಚ್ಚಿನ ಹುದ್ದೆಗಳನ್ನು ತಪ್ಪಿಸಿ 56,432ಹುದ್ದೆಗಳ ಭರ್ತಿಗೆ ಮುಂದಾದ ಪರಿಶಿಷ್ಟ ಜಾತಿಗಳ ವಿರೋಧಿ ನೀತಿಯ ಆದೇಶ ಹಿಂಪಡೆಯಬೇಕು. ಸರ್ಕಾರ ನುಡಿದಂತೆ ನಡೆಯಬೇಕು ಇಲ್ಲದಿದ್ದರೆ ಮುಂದಿನ ಚುನಾವಣೆಯಲ್ಲಿ ತಕ್ಕಪಾಠ ಕಲಿಸಬೇಕಾಗುತ್ತದೆ ಎಂದು ಸರ್ಕಾರವನ್ನು ಎಚ್ಚರಿಸಿದರು.

ಅಧ್ಯಕ್ಷ ಹೆಚ್.ಹೆಚ್ ನಾಗರಾಜು ಮಾತನಾಡಿ, ನ್ಯಾ.ನಾಗಮೋಹನ್ ದಾಸ್ ಅವರ ಒಳಮೀಸಲಾತಿಯನ್ನು ಸರ್ಕಾರ ಕೂಡಲೇ ಯಥಾವತ್ತಾಗಿ ಜಾರಿ ಮಾಡಬೇಕು. ಒಳ ಮೀಸಲಾತಿ ಇಲ್ಲದೆ ರಾಜ್ಯ ಸರ್ಕಾರವು ಯಾವುದೇ ಹುದ್ದೆಗಳನ್ನು ಭರ್ತಿ ಮಾಡಬಾರದು. ಒಳಮೀಸಲಾತಿಯನ್ನು ಯಥಾವತ್ತಾಗಿ ಜಾರಿ ಮಾಡಬೇಕು ಎಂದು ಒತ್ತಾಯಿಸಿದರು.

ಮುಖಂಡರಾದ ಅರಕಲವಾಡಿ ಜವರಯ್ಯ, ಅರಕಲವಾಡಿ ನಾಗೇಂದ್ರ, ಚಾ.ಗು. ನಾಗರಾಜ್, ವಕೀಲರಾದ ಬೂದಿತಿಟ್ಟು ರಾಜೇಂದ್ರ, ಬ್ಯಾಂಕ್ ಬಸವರಾಜು, ಎಲ್ ಐಸಿ ರಾಜಣ್ಣ, ಹಸಗೂಲಿ ಸಿದ್ದಯ್ಯ, ಮೂಡಹಳ್ಳಿ ಮೂರ್ತಿ ಮಾತನಾಡಿದರು.

ಪ್ರತಿಭಟನೆಯಲ್ಲಿ ಒಕ್ಕೂಟದ ಜಿಲ್ಲಾ ಉಪಾಧ್ಯಕ್ಷ ಮೂಡಹಳ್ಳಿ ಮೂರ್ತಿ, ಪ್ರಧಾನ ಕಾರ್ಯದರ್ಶಿ ಎಂ.ಶಿವಕುಮಾರ್, ಮುಖಂಡರಾದ ಎಲ್‌ಐಸಿ ರಾಜಣ್ಣ, ಕೆಸ್ತೂರುಮರಪ್ಪ, ಸಿ.ಎಚ್. ರಂಗಸ್ವಾಮಿ, ಮೂಡಹಳ್ಳಿ ರಾಚಪ್ಪ, ರಾಮಸಮುದ್ರ ಶಿವಣ್ಣ, ದ್ವಾರ್ಕಿ ಬಸವ ರಾಜು, ಶಿವಮಲ್ಲು, ಗೋಪಿ, ಸುನೀಲ್, ವಸಂತ್, ಹನುಮಂತು, ಚಂದ್ರು, ಹನೂರು ಗುರುಸ್ವಾಮಿ, ಬೂದುಬಾಳು ಮಹದೇವ್ರು, ಡಾ.ದುಂಡಯ್ಯ ವಕೀಲರಾದ ಸಿದ್ದೇಶ್, ಸಿದ್ದಯ್ಯ, ಪ್ರಭು, ಬೆಳ್ಳಿಯಪ್ಪ ಸುಂದರ್, ಲಿಂಗರಾಜು, ನಾಗಮಲ್ಲು, ಶಿವಣ್ಣ, ಮುರುಗೇಶ್, ಗಣೇಶಪ್ಪ ಇತರರು ಭಾಗವಹಿಸಿದ್ದರು.

ಹುಲಿ ಸೆರೆಗೆ ತಡವಾಗಿ ಬಂದ ಅರಣ್ಯಾಧಿಕಾರಿ, ಸಿಬ್ಬಂದಿ

ಜಮೀನು ಪ್ರವೇಶಿಸದಂತೆ ತಡೆದು ಆಕ್ರೋಶ



ಗುಂಡ್ಲುಪೇಟೆ, ಮಾ.26– ತಾಲೂಕಿನ ಚನ್ನಮಲ್ಲೀಪುರ ಗ್ರಾಮದ ಬಾಳೆತೋಟದಲ್ಲಿ ಬೀಡುಬಿಟ್ಟಿರುವ ಹುಲಿ ಸೆರೆ ಹಿಡಿಯಲು ಅರಣ್ಯ ಇಲಾಖೆ ವಿಳಂಬ ಮಾಡುತ್ತಿರುವುದು ಈ ಭಾಗದ ರೈತರನ್ನು ಕೆರಳಿಸಿದೆ.

ಕಳೆದ ಎರಡು ದಿನಗಳಿಂದ ಹುಲಿ ನಾಗಪ್ಪ ಅವರ ಜಮೀನಿನಲ್ಲಿ ಬೀಡುಬಿಟ್ಟಿದ್ದರೂ ಅರಣ್ಯ ಇಲಾಖೆಯವರು ಸೆರೆಹಿಡಿಯುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದ ರೈತರು ತಡವಾಗಿ ಡ್ರೋನ್ ಕ್ಯಾಮೆರಾದೊಡನೆ ಬಂದ ಅರಣ್ಯಾಧಿಕಾರಿಗಳನ್ನು ತಮ್ಮ ಜಮೀನುಗಳಿಗೆ ಪ್ರವೇಶಿಸದಂತೆ ಬಹಿಷ್ಕಾರ ಹಾಕಿ ವಾಪಸ್ ಕಳಿಸಿದರು.

ಗುರುವಾರ ಬೆಳಗ್ಗೆ ಹುಲಿಗಳು ರಾಷ್ಟ್ರೀಯ ಹೆದ್ದಾರಿ ಬದಿಯಲ್ಲಿರುವ ಅನಿಲ್ ಎಂಬುವರ ಜಮೀನಿನಲ್ಲಿ ಕಾಣಿಸಿಕೊಂಡ ವಿಷಯ ತಿಳಿದ ಪ್ರಯಾಣಿಕರು ಹಾಗೂ ಅಕ್ಕಪಕ್ಕದ ಗ್ರಾಮಗಳ ರೈತರು ಹೆಚ್ಚಿನ ಸಂಖ್ಯೆಯಲ್ಲಿ ನೆರೆದಿದ್ದರಿಂದ ಹೆದ್ದಾರಿಯಲ್ಲಿ ವಾಹನಗಳ ಸಂಚಾರಕ್ಕೆ ಅಡ್ಡಿಯುಂಟಾಯಿತು.

ನಂತರ ಸ್ಥಳಕ್ಕೆ ಆಗಮಿಸಿದ ಪೊಲೀಸರು ಸ್ಥಳೀಯರನ್ನು ಚದುರಿಸಲು ಮುಂದಾದಾಗ ರೈತರೊಂದಿಗೆ ಮಾತಿನ ಚಕಮಕಿ ನಡೆಯಿತು. ನಂತರ ಸರ್ಕಲ್ ಇನ್ಸ್‌ಪೆಕ್ಟರ್ ಜಯಕುಮಾರ್ ಮತ್ತು ಸಬ್‌ಇನ್ಸ್‌ಪೆಕ್ಟರ್ ನರೇಶ್ ಕುಮಾರ್ ಜನರನ್ನು ಮನವೊಲಿಸಿ ದೂರಕ್ಕೆ ಕಳುಹಿಸಿದರು.

ರೈತ ಮುಖಂಡ ಚನ್ನಮಲ್ಲೀಪುರ ಸುರೇಶ್ ಮಾತನಾಡಿ, ಸೋಮವಾರ ಹುಲಿ ಸೆರೆ ಕಾರ್ಯಾಚರಣೆ ಕೈಗೊಂಡ ಅರಣ್ಯಾಧಿಕಾರಿಗಳು ಜಮೀನುಗಳಲ್ಲಿ ಕಾರ್ಮಿಕರು ಕೆಲಸ ಮಾಡುತ್ತಿದ್ದರೂ ಮುನ್ನೆಚ್ಚರಿಕೆ ಕೈಗೊಳ್ಳದ ಪರಿಣಾಮ ಅರಿವಳಿಕೆ ನೀಡಿದರೂ ಹುಲಿ ಅವರತ್ತಲೇ ಓಡಿಹೋಗಿದೆ. ಜನರು ಜೋರಾಗಿ ಕೂಗಿಕೊಳ್ಳದಿದ್ದರೆ ಹುಲಿ ಅವರನ್ನು ಕೊಂದುಹಾಕುತ್ತಿತ್ತು. ನಾಗಪ್ಪ ಅವರ ಮನೆಯಲ್ಲಿ ಮೂರು ಹೆಣ್ಣುಮಕ್ಕಳಿದ್ದು ಒಬ್ಬಳು ಗರ್ಭಿಣಿ ಹೆಣ್ಣುಮಗಳು ತಮ್ಮ ಮನೆಯ ಮುಂದೆ ಪ್ರತ್ಯಕ್ಷವಾದ ಹುಲಿಯನ್ನು ನೋಡಿ ಆಘಾತಕ್ಕೊಳಗಾಗಿದ್ದಾರೆ. ಮತ್ತಿಬ್ಬರು ಹೆದರಿಕೆಯಿಂದ ಹಾಸಿಗೆ ಹಿಡಿದಿದ್ದಾರೆ. ಆದರೆ ಅರಣ್ಯ ಇಲಾಖೆಯವರು ಮಾತ್ರ ಮೂರು ದಿನಗಳಿಂದ ಕಾಲಹರಣ ಮಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಇಂದು ಕಾರ್ಯಾಚರಣೆ ಕೈಗೊಳ್ಳದಿದ್ದರೆ ನಾಳೆ ರಸ್ತೆ ತಡೆ ನಡೆಸುವುದಾಗಿ ಎಚ್ಚರಿಕೆ ನೀಡಿದರು.

ಹುಲಿ ಕಾಣಿಸಿಕೊಂಡ ಬಗ್ಗೆ ವಿಷಯ ತಿಳಿದ ಅರಣ್ಯ ಸಿಬ್ಬಂದಿ ಡ್ರೋಣ್ ಕ್ಯಾಮೆರಾ ಹಾರಿಸಿ ಹುಲಿಯ ಚಲನವಲನ ಪತ್ತೆ ಹಚ್ಚಿದರು. ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಆಗಮಿಸಿದ ಸಾರ್ವಜನಿಕರು ಹುಲಿಯನ್ನು ಸೆರೆ ಹಿಡಿಯುವಂತೆ ಅಧಿಕಾರಿಗಳನ್ನು ಒತ್ತಾಯಿಸಿದರು.

ತಂದೆ–ಮಗನ ಬಾಂಧವ್ಯದ ಸುತ್ತ 'ನಾನು ಕರುಣಾಕರ'



ಕುಟುಂಬದಲ್ಲಿ ತಂದೆಯ ಜವಾಬ್ದಾರಿ, ಮಗನ ಪುಟ್ಟ ಆಸೆ ಪೂರೈಸಲು ಆ ತಂದೆ ಪಡುವ ಕಷ್ಟ, ಜತೆಗೆ ಪತ್ನಿಯ ಕನಸು ಸಾಕಾರಗೊಳಿಸುವ ಜವಾಬ್ದಾರಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಆರ್ಯನ್ ತೇಜಸ್ ನಿರ್ದೇಶನ ಮಾಡಿರುವ ಚಿತ್ರ ನಾನು ಕರುಣಾಕರ. ಈ ಚಿತ್ರದ ನಿರ್ದೇಶನದ ಜತೆಗೆ ನಾಯಕನ ಪಾತ್ರಕ್ಕೂ ಸಹ ಅವರೇ ಜೀವ ತುಂಬಿದ್ದಾರೆ.

ಈ ಹಿಂದೆ ಪಾರ್ಕ್ ರೋಡ್ 100 ರೂಪಾಯಿ ಚಿತ್ರ ನಿರ್ದೇಶಿಸಿದ್ದ ಆರ್ಯನ್ ತೇಜಸ್ ಅವರ ಎರಡನೇ ಚಿತ್ರವಿದು. ನಮನ್ ನಾರಾಯಣ್ ಹಾಗೂ ವೈಭವ್ ಸುರೇಶ್ ಸೇರಿ ಈ ಚಿತ್ರವನ್ನು ನಿರ್ಮಿಸಿದ್ದಾರೆ. ಇತ್ತೀಚೆಗೆ ಈ ಚಿತ್ರದ ಟ್ರೈಲರ್ ಬಿಡುಗಡೆ ಕಾರ್ಯಕ್ರಮ ನಡೆಯಿತು.


ಪ್ರತಿಯೊಬ್ಬರ ಜೀವನಕ್ಕೂ ಕನೆಕ್ಟ್ ಆಗುವ, ಅಪ್ಪ ಮಗನ ಬಾಂಧವ್ಯ ಹಾಗೂ ಗಂಡ–ಹೆಂಡತಿಯ ಸಂಬಂಧದ ಸುತ್ತ ನಡೆಯೋ ಕಥೆಯಿದು. ಏಪ್ರಿಲ್ 3ರಂದು ರಿಲೀಸಾಗುತ್ತಿರುವ ಈ ಚಿತ್ರದ ನಾಯಕನಾಗಿ ಆರ್ಯನ್ ತೇಜಸ್ ಹಾಗೂ ಪತ್ನಿಯಾಗಿ ರಾಧಾ ಭಗವತಿ ಕಾಣಿಸಿಕೊಂಡಿದ್ದಾರೆ. ಉಳಿದಂತೆ ಕರಿಸುಬ್ಬು ಎಂಕೆ.ಮಠ, ಬಿ.ಎಂ.ವೆಂಕಟೇಶ, ಅಪೂರ್ವ ನಟಿಸಿದ್ದಾರೆ. ಆರ್ಯನ್ ತೇಜಸ್ ಮಾತನಾಡುತ್ತ ಪ್ರತಿಯೊಬ್ಬರ ಮನೆಯಲ್ಲೂ ಒಬ್ಬ ಕರುಣಾಕರ ಇರ್ತಾನೆ, ಮಧ್ಯಮ ವರ್ಗದ ಪ್ರತಿ ಫ್ಯಾಮಿಲಿಯಲ್ಲೂ ನಡೆಯುವ ಕಥೆ. ಮೈಸೂರು ಮೇಲುಕೋಟೆ, ಹಾಗೂ ಬೆಂಗಳೂರಿನ ಯಲಹಂಕ ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ. ಒಬ್ಬ ಅಸಿಸ್ಟೆಂಟ್ ಡೈರೆಕ್ಟರ್ ತನ್ನ ಕುಟುಂಬವನ್ನು ಮುನ್ನಡೆಸಿಕೊಂಡು ಹೋಗಲು ಎಷ್ಟೆಲ್ಲಾ ಕಷ್ಟ ಪಡುತ್ತಾನೆ ಎಂಬುದನ್ನು ಚಿತ್ರದಲ್ಲಿ ಹೇಳಿದ್ದೇವೆ, ಆ ಕುಟುಂಬದ ಯಜಮಾನನಾಗಿ ನಾನು ನಟಿಸಿದ್ದೇನೆ ಎಂದರು.

ನಾಯಕಿ ರಾಧ ಭಗವತಿ ಮಾತನಾಡುತ್ತ ಇದು ನನ್ನ 5ನೇ ಚಿತ್ರ, ನಾನೀ ಚಿತ್ರದಲ್ಲಿ ಮಿಡಲ್ ಕ್ಲಾಸ್ ಫ್ಯಾಮಿಲಿಯ ಗೃಹಿಣಿಯಾಗಿ ನಟಿಸಿದ್ದು, ನನಗೂ ಸ್ವಂತವಾಗಿ ಏನಾದರೂ ಮಾಡಬೇಕೆಂಬ ಆಸೆಯಿದ್ದರೂ, ಗಂಡ, ಮಗನಿಗೋಸ್ಕರ ಕನಸನ್ನು ಬದಿಗೊತ್ತಿ ಅವರಿಗೆ ಸಪೋರ್ಟ್ ಮಾಡುತ್ತೇನೆ ಎಂದರು.

ನಿರ್ಮಾಪಕರಾದ ವೈಭವ್ ಸುರೇಶ್ ಮಾತನಾಡಿ, ಒಂದು ಒಳ್ಳೇ ಸಿನಿಮಾ ಮಾಡಬೇಕೆಂದು ತುಂಬಾ ವರ್ಷಗಳಿಂದ ಕನಸಿತ್ತು. ಅದು ಈ ಸಿನಿಮಾ ಮೂಲಕ ನನಸಾಗಿದೆ. ನಾನು ನಮನ ನಾರಾಯಣ ಸೇರಿ ಈ ಚಿತ್ರ ನಿರ್ಮಾಣ ಮಾಡಿದ್ದೇವೆ. ಚಿಕ್ಕ ಮಕ್ಕಳು ತಂದೆಗೆ ಹೇಗೆ ಕಷ್ಟ ಕೊಡುತ್ತವೆ, ಅದನ್ನೆಲ್ಲಾ ತಂದೆ ಹೇಗೆ ನಿಭಾಯಿಸ್ತಾನೆ ಏನು ಮಾಡುತ್ತಾನೆ ಎಂಬುದೇ ಚಿತ್ರದ ಕಥೆ ಎಂದರು.



ನಾವಿಬ್ಬರೂ ಬೇರೆಯಾದಾಗ ಖುಷಿಪಟ್ಟವರೇ ಹೆಚ್ಚು



80–90ರ ದಶಕದಲ್ಲಿ ರವಿಚಂದ್ರನ್ ಮತ್ತು ಹಂಸಲೇಖ ಜೋಡಿಯ ಚಿತ್ರಗಳು ದೊಡ್ಡಮಟ್ಟದ ಯಶಸ್ಸು ಕಂಡಿದ್ದವು. ಅಂಥ ಜನಪ್ರಿಯ ಜೋಡಿ 2000ದ ನಂತರ ಕಾರಣಾಂತರಗಳಿಂದ ಜೊತೆಯಾಗಿ ಕೆಲಸ ಮಾಡದಿರಬಹುದು. ಅವರ ಸ್ನೇಹ ಇಂದಿಗೂ ಹಾಗೇ ಇದೆ, ಆ ಜೋಡಿಯ ಹಾಡುಗಳನ್ನು ಕನ್ನಡಿಗರು ಮರೆತಿಲ್ಲ.

ಇವರಿಬ್ಬರ 4 ದಶಕಗಳ ಪಯಣದ ನೆನಪಾಗಿ ಪ್ರಸ್ತುತ್ ಇನ್ನೋವೇಟಿವ್ ಸಂಸ್ಥೆ ಮೇ 30ರಂದು 'ಕ್ರೇಜಿ– ಬ್ರಹ್ಮ' ಕಾರ್ಯಕ್ರಮ ಆಯೋಜಿಸಿದೆ. ಇಲ್ಲಿ ನಟ ಚಿರಂಜೀವಿ, ಶಿಲ್ಪಾ ಶೆಟ್ಟಿ ಸೇರಿದಂತೆ ದಕ್ಷಿಣ ಭಾರತದ ಹಲವು ಜನಪ್ರಿಯ ಸ್ಟಾರ್‌ಗಳು ಭಾಗವಹಿಸುವ ಜೊತೆಗೆ, ರವಿಚಂದ್ರನ್ ಜೊತೆ ನಟಿಸಿದ ನಟಿಯರು ಕೂಡ ಭಾಗವಹಿಸಲಿದ್ದಾರೆ. ಆರು ಗಂಟೆಗಳ ಕಾಲ ನಡೆಯುವ ಕಾರ್ಯಕ್ರಮದಲ್ಲಿ ರವಿಚಂದ್ರನ್ ಮತ್ತು ಹಂಸಲೇಖ ಜೋಡಿಯ ಸೂಪರ್‌ಹಿಟ್ ಹಾಡುಗಳ ಗಾಯನವೂ ಇರುತ್ತದೆ. ಪತ್ರಿಕಾಗೋಷ್ಠಿಯಲ್ಲಿ ಪ್ರಸ್ತುತ್ ಇನ್ನೋವೇಟಿವ್ ಕ್ರಿಯೇಷನ್ಸ್ ಮತ್ತು ಸಲ್ಯೂಷನ್ಸ್‌ನ ನಿರ್ದೇಶಕ ನ.ವಿನಯ್, ರವಿಚಂದ್ರನ್ ಮತ್ತು ಹಂಸಲೇಖ ಅವರುಗಳು ಭಾಗವಹಿಸಿದ್ದರು.



ರವಿಚಂದ್ರನ್ ಮಾತನಾಡುತ್ತ ನಮ್ಮ ಸಂಬಂಧದಲ್ಲಿ ಬಿರುಕುಬಿಟ್ಟಾಗ, ಸಂಭ್ರಮಿಸಿದವರೇ ಜಾಸ್ತಿ. ಆದರೆ, ನಮ್ಮನ್ನು ಒಂದುಗೂಡಿಸಲು ಹಲವರು ಪ್ರಯತ್ನಿಸಿದರು. ಕೋಪ, ಈಗೋ, ಯಶಸ್ಸು ಇದ್ದಾಗ ಬಿರುಕು ಸಹಜ. ಗೆಲುವು ಯಾರಿಂದ ಎಂಬ ಪ್ರಶ್ನೆ ಬಂದೇಬರುತ್ತೆ, ಅದು ಜೀವನದ ಒಂದು ಭಾಗ. ಅದರಿಂದ ನಮ್ಮಿಬ್ಬರ ಜೋಡಿಯ ಮೌಲ್ಯ ಗೊತ್ತಾಗುತ್ತಿದೆ. ಹಾಗಾಗಿ, ಆ ಬಿರುಕು ಬೇಕಾಗಿತ್ತೇನೋ ಎಂದು ಕೆಲವೊಮ್ಮೆ ಅನಿಸುತ್ತದೆ. ನಮ್ಮಿಬ್ಬರದ್ದು ಚಿತ್ರರಂಗ ಕಂಡ ಬೆಸ್ಟ್ ಜೋಡಿ. ಈಗ ಜೊತೆಗೆ ಕೆಲಸ ಮಾಡದಿದ್ದರೂ, ಒಳ್ಳೆಯ ಸ್ನೇಹಿತರಾಗಿದ್ದೇವೆ. 40 ವರ್ಷಗಳ ಹಿಂದೆ ನನಗೆ ಏನೂ ಗೊತ್ತಿರಲಿಲ್ಲ. ಹಂಸಲೇಖ ಬರೆದು ಕೊಟ್ಟಾಗಲೇ ಅದನ್ನು ಹೇಗೆ ತೆಗೆಯಬೇಕು ಎಂದು ಗೊತ್ತಾಗಿದ್ದು. ನನ್ನನ್ನು ಕ್ರೇಜಿಸ್ಟಾರ್ ಮಾಡಿದ್ದು ಅವರೇ. ಕಾರಣಾಂತರಗಳಿಂದ ನಮ್ಮ ನಡುವೆ ಬಿರುಕು ಮೂಡಿರಬಹುದು. ಆದರೆ, ನಾವು ಯಾವತ್ತೂ ಕಿತ್ತಾಡಿಕೊಂಡಿಲ್ಲ, ಇವತ್ತಿಗೂ ನಾನು ಹೆಚ್ಚು ನಗುತ್ತೇನೆ ಎಂದರೆ, ಅದು ಅವರ ಜೊತೆ ಮಾತ್ರ. ಆ ನಗುವೇ ನಮ್ಮನ್ನು ಇಷ್ಟು ದೂರ ಕರೆದುಕೊಂಡು ಬಂದಿದೆ. ಆ ನಗುವಿನಿಂದಲೇ ನಾವು ಇಷ್ಟೊಂದು ಸಿನಿಮಾ ಮಾಡೋಕೆ ಸಾಧ್ಯವಾಗಿದ್ದು. ನಮ್ಮ ಸ್ನೇಹ ಪರದೆ ಮೇಲೆ ಕಾಣುತ್ತದೆ. ಯಾವುದೇ ಕಲ್ಮಶವಿಲ್ಲದೆ ಮನಃಪೂರ್ವಕವಾಗಿ ಕೆಲಸ ಮಾಡಿದ್ದೇವೆ ಎಂದರು.



'ಫಸ್ಟ್‌ನೈಟ್ ವಿತ್ ದೆವ್ವ'

ಟ್ರೈಲರ್ ಬಿಡುಗಡೆ

ಬಿಗ್‌ಬಾಸ್ ಪ್ರಥಮ್ ನಟಿಸಿರುವ, ಪಿ.ವಿ.ಆರ್. ಸ್ವಾಮಿ ನಿರ್ದೇಶನದ ಹಾರರ್ ಕಾಮಿಡಿ ಚಿತ್ರ ಫಸ್ಟ್‌ನೈಟ್ ವಿತ್ ದೆವ್ವ ಬಿಡುಗಡೆಗೆ ಸಿದ್ದವಾಗಿದೆ, ಇತ್ತೀಚೆಗೆ ಈ ಚಿತ್ರದ ಟ್ರೈಲರ್ ಬಿಡುಗಡೆಯಾಯಿತು, ಈ ಸಂದರ್ಭದಲ್ಲಿ ಪ್ರಥಮ್ ಮಾತನಾಡುತ್ತ ಮನರಂಜನೆಯನ್ನೇ ಪ್ರಧಾನವಾಗಿಟ್ಟುಕೊಂಡು ಮಾಡಿರೋ ಹಾರರ್ ಕಾಮಿಡಿ ಚಿತ್ರವಿದು. ಬಹಳ ದಿನಗಳ ನಂತರ ನಾಯಕನಿಗೆ ಮದುವೆಯಾಗುತ್ತದೆ. ತನ್ನ ಹೆಂಡತಿ ದೆವ್ವ ಎಂಬುದು ಮದುವೆಯ ನಂತರ ಗೊತ್ತಾಗುತ್ತೆ, ಆಮೇಲೆ ಆತನ ಫಸ್ಟ್‌ನೈಟ್ ಆಗುತ್ತಾ... ಇಲ್ವಾ... ಎನ್ನುವುದೇ ಚಿತ್ರದ ರೋಚಕ ಕಥೆ. ನಾಯಕಿಯಾಗಿ ನಿಖಿತಾಸ್ವಾಮಿ ನಟಿಸಿದ್ದಾರೆ. ಡೆವಿಲ್ ಚಿತ್ರದ ಜತೆಗೇ ನಮ್ಮ ಚಿತ್ರವನ್ನು ರಿಲೀಸ್ ಮಾಡುತ್ತೇನೆಂದು ಹೇಳಿದ್ದೆ. ಆದರೆ ವಿತರಕರ ಸಲಹೆ ಮೇರೆಗೆ ಪೋಸ್ಟ್ ಪೋನ್ ಮಾಡಬೇಕಾಯಿತು ಎಂದು ಈ ಹಿಂದೆ ತಾನಾಡಿದ್ದ ಮಾತಿಗೆ ಸಮಜಾಯಿಷಿ ನೀಡಿದರು,

ನಿರ್ದೇಶಕ ಪಿ.ವಿ.ಆರ್.ಸ್ವಾಮಿ ಮಾತನಾಡಿ, ಪ್ರಥಮ್ ಒಳ್ಳೇ ಮಾತುಗಾರ. ಈ ಚಿತ್ರದಲ್ಲಿ ಅವರ ಪಾತ್ರಕ್ಕೆ ಮಾತು ತುಂಬಾ ಕಮ್ಮಿ. ಈ ಚಿತ್ರ ನನ್ನ ನಿರ್ದೇಶನದ ಐದನೇ ಚಿತ್ರ ಹಾಗೂ ಕ್ಯಾಮೆರಾವರ್ಕ್ ಮಾಡಿರುವ 53ನೇ ಚಿತ್ರ ಮಿಮಿಕ್ರಿ ಗೋಪಿ, ತುಕಾಲಿ ಸಂತು, ಸುಶ್ಮಿತಾ ಹೀಗೆ ಕಾಮಿಡಿ ಕಲಾವಿದರ ದಂಡೇ ಚಿತ್ರದಲ್ಲಿದೆ ಎಂದರು.

ನಾಯಕಿ ನಿಖಿತಾಸ್ವಾಮಿ ಮಾತನಾಡುತ್ತ ಇದು ಕಾಮಿಡಿ ಹಾರರ್ ಚಿತ್ರ ಪ್ರಥಮ್ ಅವರ ಪತ್ನಿಯಾಗಿ ನಾನು ನಟಿಸಿದ್ದೇನೆ, ಇನ್ನೋಸೆಂಟ್ ಹುಡುಗಿ ಪಾತ್ರ ಹೇಗೆ ಚೇಂಜ್ ಆಗುತ್ತಾ ಹೋಗುತ್ತೆ ಎನ್ನುವುದೇ ವಿಶೇಷ, ಎರಡು ರೀತಿಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ ಎಂದು ಹೇಳಿದರು,


ಹಿರಿಯ ನಟ ಶ್ರೀನಿವಾಸಮೂರ್ತಿ ಮಾತನಾಡುತ್ತ, ನಾನು ಅಣ್ಣಾವ್ರ ಕಾಲದ ನಟರ ಜತೆಗೂ, ಈಗಿನ ಕಾಲದ ನಟರ ಜತೆಗೂ ನಟಿಸಿದ್ದೇನೆ. ಅಂಥಾ ಬದಲಾವಣೆ ಏನೂ ಕಾಣಿಸುತ್ತಿಲ್ಲ ಎಂದರು. ಅದ್ವಿಕ್ ವರ್ಮ ಅವರ ಸಂಗೀತ ನಿರ್ದೇಶನ, ನಾಗೇಶ್ ನಾರಾಯಣ್ ಸಂಕಲನ ಹಾಗೂ ಸಂಭಾಷಣೆ ಚಿತ್ರಕ್ಕಿದೆ.



ಸಿನಿಪದಬಂಧ–619



ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು ______

ವಿಳಾಸ ______

ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ

1. ಹಿಂದೂ ಪಂಚಾಂಗದ ಮೊದಲ ತಿಂಗಳೊಂದಿಗೆ ಇಬ್ಬರು ನಟಿಯರು ಬಂದಾಗ ಚಿತ್ರವೊಂದು ಪ್ರತ್ಯಕ್ಷ ! 7
4. ಮಣ್ಣಿನ ಪಾತ್ರೆ ತಿರುಗಿಸಿ ನೋಡಿ ಅಗಲಿಕೆಯ ನೋವಿದೆ 3
8. ಅಂಬಿ, ಸುಮಲತಾಳಿಗೆ ನೀಡಿದ ಉಡುಗೊರೆ 7
9. ಬುದ್ಧಿವಂತ ಚಿತ್ರದ ಹಾಡೊಂದರಲ್ಲಿ "ಫಿಗರ್ ರೈಸ್" ಸಿಗಲಿದೆ 3
11. ಡಾ. ರಾಜ್ ಕುಮಾರ್ ಅಭಿನಯದಲ್ಲಿ ಮೂಡಿದ ನೂತನ ಪ್ರಭೆ 5
13. ಕುಮಾರ್ ಬಂಗಾರಪ್ಪ – ಶಿವರಂಜಿನಿ ಅಭಿನಯದ ಶಾಶ್ವತ ಪ್ರೀತಿ 5
16. ವೈಕುಂಠದಲ್ಲಿ ಕದ ಕಾಯ್ದವರು 5
17. ಅಂಬರೀಷ್ ಅಂಗಡಿ ಬೀದಿಗೆ ಬರಲು ಪೇರಾಲ ನಿರ್ದೇಶಕ 5
18. ಅನಂತ್ ನಾಗ್ – ಲವ್ಲಿನ್ ಮಧು ಅಭಿನಯದ ಚಿತ್ರ 2
19. ಎಕ್ಸ್ ಕ್ಯೂಸ್ ಮಿ ಚಿತ್ರದ ನಾಯಕಿ 2

ಮೇಲಿನಿಂದ ಕೆಳಕ್ಕೆ

1. ವಿಜಯಶ್ರೀ ಅವರ ಆಕಾಶ ಸುಂದರಿ ಕಾದಂಬರಿ ಆಧರಿಸಿರುವ ಕುಮಾರ್ ಬಂಗಾರಪ್ಪ ಅಭಿನಯದ ಚಿತ್ರ 6
2. ಎಲ್ಲರಂಥಲ್ಲ ನನ್ನ ಗಂಡ ಚಿತ್ರದ ನಾಯಕಿ 2
3. ಈ ನಟಿ ಗೆಲುವಿನ ದೇವತೆ 4
5. ಕೆ.ಎಸ್.ಎಲ್.ಸ್ವಾಮಿಯವರ ನಿರ್ದೇಶನದಲ್ಲಿ ಬಲಿಗಾಗಿ ಕಾಯ್ದ ಪ್ರಾಣಿ 6
6. _ _ ಮಿಡಿಯಿತು 2
7. ವಿಷ್ಣುವರ್ಧನ್ ಹೆತ್ತವರ ಪಾಲಿಗೆ ಬಂಗಾರ ಸುತ 6
10. ಸಿದ್ದಲಿಂಗಯ್ಯ ಅವರ ನಿರ್ದೇಶನದಲ್ಲಿ ಪ್ರೀತಿ ಮೂರು ಬಾರಿ ಇದೆ 6
12. ಉಪಪತ್ನಿ ಬೀರಿದ ಛಾಯೆ 7
14. ಪುನೀತ್ ಅಭಿನಯದ 'ದೊರೆ' 5
15. ಪ್ರಮುಖ ರಾಜವಂಶ ನೆನಪಿಸಿಕೊಂಡರೆ ವಿಷ್ಣು ಚಿತ್ರ ಸಿಗಲಿದೆ 3

ಸಿನಿ ಪದಬಂಧ 618ರ ಉತ್ತರ

ಆ	ರಾ	ಧ	ನೆ		ಪ	ವಿ	ತ್ರ	ಪ್ರೇ	ಮ	
ನಂ		ನ			ಲ್ಲ				ತ್ರೇ	
ದ			ಕ	ಲಾ	ವಿ	ದ		ಬಾ	ವ	
ಸಾ	ಲಿ	ಯಾ	ನ		ಜೋ		ನಾ		ಸಂ	
ಗ			ಸಿ		ಷಿ		ರ		ತ	
ರ		ಮಾ	ನ	ಸ		ಕ	ದ	ನ		ಮ
	ಆ		ರಾ		ಅ		ವಿ			ನಿ
	ಕಾ		ಣಿ		ನಂ		ಜ	ಯ	ಸಿಂ	ಹ
	ಶ	ಕ್ತಿ		ಗೀ	ತ	ಪ್ರಿ	ಯ			ನಿ
	ದೀ				ಪ್ರೇ			ದಾ		ಶ
	ಪ	ರ	ಶು	ರಾ	ಮ		ಸು	ಹಾ	ಸಿ	ನಿ

ವಿಜೇತರು: ನಿಶ್ಮಿತ.ಜಿ, 10ನೇ ತರಗತಿ ಎ ವಿಭಾಗ, ಸಿಕೆಸಿ ಪ್ರೌಢಶಾಲೆ, ಲಕ್ಷ್ಮೀಪುರಂ, ಮೈಸೂರು-17

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು–570 015

ರತ್ನಾಕರ 'ಮಹರ್ಷಿ ವಾಲ್ಮೀಕಿ'ಯಾದ ಕಥೆ

ಬೇಡನಾಗಿದ್ದ ರತ್ನಕಾರ, ಮಹಾತ್ಮನೊಬ್ಬನ ಉಪದೇಶದಿಂದ ಮಹರ್ಷಿ ವಾಲ್ಮೀಕಿಯಾಗಿದ್ದು ಎಲ್ಲರಿಗೂ ತಿಳಿದ ಸಂಗತಿ. ಕ್ರೌಂಚ ಪಕ್ಷಿಯ ಸಾವನ್ನು ಕಣ್ಣಾರೆ ಕಂಡ ವಾಲ್ಮೀಕಿಗೆ ರಾಮಾಯಣ ಬರೆಯಲು ಅದೇ ಸ್ಫೂರ್ತಿಯಾಯಿತು. ಅಂತಹ ವಾಲ್ಮೀಕಿ ಮಹರ್ಷಿಯ ಪರಿವರ್ತನಾ ಹಾದಿಯನ್ನು 'ಮಹರ್ಷಿ ವಾಲ್ಮೀಕಿ' ಕಿರುಚಿತ್ರದ ಮೂಲಕ ನಿರೂಪಿಸಿದ್ದಾರೆ ನಿರ್ದೇಶಕ ಪ್ರವೀಣ್ ಶಿವಣ್ಣ. ರತ್ನದಾಸ್ ಅವರ ನಿರ್ಮಾಣದ ಈ ಕಿರುಚಿತ್ರದ ಪತ್ರಿಕಾಗೋಷ್ಠಿ ಇತ್ತೀಚೆಗೆ ನಡೆಯಿತು. ಮಾ.26ರ ರಾಮನವಮಿಯಂದೇ ಈ ಕಿರುಚಿತ್ರ ಬಿಡುಗಡೆಯಾಗಿದೆ. ಶ್ರೀರಿಷಿ ಅವಿರ್ಭವ ಗುರು ಪೂರ್ಣದೈತಿ, ನಟ ಗಣೇಶ್ ರಾವ್ ಕೇಸರಕರ್, ಪದ್ಮಶ್ರೀ ವೆಂಕಟೇಶ್ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ನಿರ್ದೇಶಕ ಪ್ರವೀಣ್ ನಾನು ಸಂಕಲನಕಾರನಾಗಿ ಸಾಕಷ್ಟು ಚಿತ್ರಗಳಿಗೆ ಕೆಲಸ ಮಾಡಿದ್ದೇನೆ. ನನ್ನ ನಿರ್ದೇಶನದ ಮೊದಲ ಕಿರುಚಿತ್ರವಿದು ಕಲಾವಿದರ ಹಾಗೂ ತಂತ್ರಜ್ಞರ ಸಹಕಾರದಿಂದ 'ಮಹರ್ಷಿ ವಾಲ್ಮೀಕಿ' ಉತ್ತಮವಾಗಿ ಮೂಡಿಬಂದಿದೆ. ಚಿಕ್ಕಮಗಳೂರು ಸುತ್ತಮುತ್ತ ಚಿತ್ರೀಕರಣ ನಡೆಸಿದ್ದೇವೆ ಎಂದರು.

ವಾಲ್ಮೀಕಿ ಪಾತ್ರಧಾರಿ ಸುಜಿತ್ ಶೆಟ್ಟಿ ಮಾತನಾಡುತ್ತ ರಾಮ ಹದಿನಾಲ್ಕು ವರ್ಷಗಳ ವನವಾಸ ಮುಗಿಸಿ ಬಂದ ಹಾಗೆ ನಾನು ಕೂಡ ನಟನೆ ಮಾಡಲು ಹದಿನಾಲ್ಕು ವರ್ಷಗಳು ಬೇಕಾಯಿತು. ಅದು ರಾಮಭಕ್ತ "ಮಹರ್ಷಿ ವಾಲ್ಮೀಕಿ"ಯಂಥ ಮೈಥಾಲಜಿಯ ಮೂಲಕವೇ ಆಗಿರುವುದು ಕಾಕತಾಳೀಯ. ಶಿವಮಣಿಯಂತಹ ಹಿರಿಯ ಕಲಾವಿದರ ಜೊತೆಗೆ ಅಭಿನಯಿಸಿದ್ದು ಖುಷಿಯಾಗಿದೆ ಎಂದರು.



ಈ ಚಿತ್ರದಲ್ಲಿ ರತ್ನಾಕರನ ಪತ್ನಿಯಾಗಿ ಅಭಿನಯಿಸಿರುವುದಾಗಿ ನಟಿ ರೂಪ ಮುತ್ತುರಾಯಪ್ಪ ಹೇಳಿದರು. ಛಾಯಾಗ್ರಾಹಕ ತನ್ವಿಕ್ ಹಾಗೂ ಸಂಗೀತ ನಿರ್ದೇಶಕ ರಾಮಾನುಜನ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು

ಸ್ಟಾರ್‌ಗಳು ಕನ್ನಡ ಬೆಳೀಬೇಕು ಅನ್ನೋದು ಬರೀ ಬಾಯಿಮಾತಲ್ಲಷ್ಟೇ



ಅಂಗವಿಕಲ ಬಾಲಕಿ ಹಾಗೂ ನಾಯಿಯೊಂದರ ನಡುವಿನ ಭಾವನಾತ್ಮಕ ಪಯಣದ ಸುತ್ತ ನಡೆಯುವ ಕಥಾಹಂದರದ ಚಿತ್ರ 'ಯಾವ ಮೋಹನ ಮುರಳಿ ಕರೆಯಿತು'. ವಿಶ್ವಾಸ್ ಕೃಷ್ಣ ನಿರ್ದೇಶನದ ಈ ಚಿತ್ರದ ಟ್ರೈಲರ್ ಇತ್ತೀಚೆಗೆ ಬಿಡುಗಡೆಯಾಯಿತು. ಶರಣಪ್ಪ ಗೌರಮ್ಮ ಅವರ ನಿರ್ಮಾಣದ ಈ ಚಿತ್ರಕ್ಕೆ ವಿಶ್ವಾಸ್‌ಕೃಷ್ಣ ಆಕ್ಷನ್‌ಕಟ್ ಹೇಳಿದ್ದಾರೆ. ನಿರ್ಮಾಪಕರ ಪುತ್ರಿ ಬೇಬಿ ಪ್ರಕೃತಿ, ವರುಣ್ ರಾಜು ಪಟೇಲ್ ಹಾಗೂ ಸ್ವಪ್ನ ಶೆಟ್ಟಿಗಾರ್ ಜತೆಗೆ ರಾಕಿ ಎಂಬ ನಾಯಿ ಕೂಡ ಚಿತ್ರದಲ್ಲಿ ಅಭಿನಯಿಸಿದ್ದು, ಇಂದಿನಿಂದ 50ರಿಂದ 60 ಥೇಟರ್‌ಗಳಲ್ಲಿ ಬಿಡುಗಡೆಯಾಗುತ್ತಿದೆ,

ನಿರ್ಮಾಪಕ ಶರಣಪ್ಪ ಮಾತನಾಡುತ್ತ ಪ್ರಾಣಿಪ್ರಿಯರಿಗೆ ಈ ಚಿತ್ರ ಎಮೋಷನಲಿ ಕನೆಕ್ಟ್ ಆಗುತ್ತದೆ, ಸೆಂಟಿಮೆಂಟ್ ಜತೆಗೆ ಸಸ್ಪೆನ್ಸ್ ಥ್ರಿಲ್ಲರ್ ಕೂಡ ಚಿತ್ರದಲ್ಲಿದೆ, ನಾವು ಹೊಸಬರೆಂಬ ಕಾರಣಕ್ಕೆ ಕನ್ನಡದ ಸ್ಟಾರ್ ನಟರೆನಿಸಿಕೊಂಡವರ ಮನೆಬಾಗಿಲಿಗೆ ಅಲೆದರೂ ಟ್ರೈಲರ್ ಲಾಂಚ್ ಮಾಡಿಕೊಡಲಿಲ್ಲ. ಪ್ರೊಮೋಷನ್‌ಗೆ ಸಹಕರಿಸಲಿಲ್ಲ, ಕನ್ನಡ ಚಿತ್ರರಂಗ ಬೆಳೀಬೇಕು ಅಂತ ಅವರೆಲ್ಲ ಹೇಳೋದು ಬಾಯಿ ಮಾತಲ್ಲಷ್ಟೇ ಎಂದು ಬೇಸರದಿಂದಲೇ ಹೇಳಿಕೊಂಡರು.

ನಿರ್ದೇಶಕ ವಿಶ್ವಾಸ್ ಕೃಷ್ಣ ಮಾತನಾಡಿ, ನನ್ನ ನಿರ್ದೇಶನದ ಮೊದಲ ಚಿತ್ರವಿದು. ಒಂದು ಮಗು ಹಾಗೂ ನಾಯಿಯ ಬಾಂಡಿಂಗ್ ಸುತ್ತ ನಡೆಯುವ ಎಮೋಷನಲ್ ಜರ್ನಿಯೇ ಚಿತ್ರದ ಕಾನ್ಸೆಪ್ಟ್, ಜತೆಗೆ ಫ್ಯಾಮಿಲಿ ಸೆಂಟಿಮೆಂಟ್ ಕೂಡ ಚಿತ್ರದಲ್ಲಿದೆ. ಒಂದು ನಾಯಿ ಮತ್ತು ಅಂಗವಿಕಲ ಹುಡುಗಿಯ ಸುತ್ತ ನಡೆಯುವ ಭಾವನಾತ್ಮಕ ಕಥೆಯಲ್ಲಿ, ಮೂಕಪ್ರಾಣಿಯಾದ ನಾಯಿಗೂ ಒಂದು ಮನಸಿದೆ ಅಂತ ತೋರಿಸಿದ್ದೇವೆ ಎಂದರು.

ಮೈಸೂರು ಮಿತ್ರ

ಮಠ ಮಾನ್ಯಗಳಿಂದ ಶಿಕ್ಷಣ, ಸಮಾಜದ ಉನ್ನತೀಕರಣ

ಶ್ರೀಚೆನ್ನಮಲ್ಲಿಕಾರ್ಜುನ ಸ್ವಾಮೀಜಿ ಅವರ ಸುವರ್ಣ ಪುಣ್ಯ ಸ್ಮರಣೋತ್ಸವದಲ್ಲಿ ಸುತ್ತೂರುಶ್ರೀ ಅಭಿಪ್ರಾಯ





ಕಾರ್ಯಕ್ರಮವನ್ನು ಸಾಲೂರು ಮಠದ ಡಾ.ಶ್ರೀಶಾಂತ ಮಲ್ಲಿಕಾರ್ಜುನ ಸ್ವಾಮೀಜಿ ಉದ್ಘಾಟಿಸಿದರು. ಮತ್ತೊಂದು ಚಿತ್ರದಲ್ಲಿ ಹೆಳವರಹುಂಡಿ ಸಿದ್ದಪ್ಪ, ಕುರುಬೂರು ಶಾಂತಕುಮಾರ್, ಡಾ.ಎಂ.ಮಾದೇಶ್ ಅವರನ್ನು ಸನ್ಮಾನಿಸಿರುವುದನ್ನು ಕಾಣಬಹುದು.

ತಿ.ನರಸೀಪುರ, ಮಾ.26– ಶಿಕ್ಷಣ, ಸಮಾಜ ಹಾಗೂ ಸಂಸ್ಕೃತಿಯ ಉನ್ನತೀಕರಣಕ್ಕೆ ಬೇಕಾದ ಸೇವಾ ಕಾರ್ಯಗಳನ್ನು ಮಠ ಮಾನ್ಯಗಳು ನೂರಾರು ವರ್ಷಗಳಿಂದ ಮಾಡಿಕೊಂಡು ಬರುತ್ತಿವೆ ಎಂದು ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು.

ತಾಲೂಕಿನ ಮಾಡ್ರಹಳ್ಳಿ ಗ್ರಾಮದ ಪಟ್ಟದ ಮಠದ ಆವರಣದಲ್ಲಿ ಶ್ರೀಚೆನ್ನ ಮಲ್ಲಿಕಾರ್ಜುನ ಸ್ವಾಮೀಜಿ ಅವರ ಸುವರ್ಣ ಪುಣ್ಯ ಸ್ಮರಣೋತ್ಸವದ ಅಂಗವಾಗಿ ಗುರುವಾರ ನಡೆದ ಧಾರ್ಮಿಕ ಸಭೆಯ ಸಾನಿಧ್ಯ ವಹಿಸಿ ಮಾತನಾಡಿದ ಅವರು, ರಾಜ್ಯದ ಮಠ ಮಾನ್ಯಗಳು ಸಾಮಾಜಿಕ ಸೇವೆಯಲ್ಲಿ ತೊಡಗಿಸಿಕೊಂಡಿದ್ದು, ಶಿಕ್ಷಣ, ಸಂಸ್ಕೃತಿ ಹಾಗೂ ಸಮಾಜದ ಉನ್ನತಿಗೆ ಮಾಡಬಹುದಾದ ಸೇವಾ ಕಾರ್ಯಗಳನ್ನು ಅದರಲ್ಲೂ ವಿಶೇಷವಾಗಿ ವೀರಶೈವ ಲಿಂಗಾಯತ ಮಠಗಳು ನೂರಾರು ವರ್ಷಗಳಿಂದ ಮಾಡಿಕೊಂಡು ಬರುತ್ತಿವೆ ಮೈಸೂರಿನಿಂದ ಬೀದರ್‌ವರೆಗೆ ಅನೇಕ ಮಠಗಳು ಅವುಗಳ ವ್ಯಾಪ್ತಿಯಲ್ಲಿ ಬಹಳ ದೊಡ್ಡದಾದ ಸೇವಾ ಕಾರ್ಯಗಳನ್ನು ಮಾಡುತ್ತಿವೆ. ರಾಷ್ಟ್ರಕವಿಗಳಾದ ಚಂದ್ರಶೇಖರ ಕಂಬಾರರು ಗೋಕಾಕ್‌ನ ಸಾವಳಗಿ ಮಠದಲ್ಲಿ ಅನ್ನ ದಾಸೋಹ ಸೇವೆ ಪಡೆದಂತವರು. ಶಿವರುದ್ರಪ್ಪ ಸೇರಿದಂತೆ ಅನೇಕರು ಚಿತ್ರದುರ್ಗದ ಮುರುಘಾಮಠ, ತುಮಕೂರಿನ ಸಿದ್ಧಗಂಗಾ ಮಠ ಹಾಗೂ ಮೈಸೂರಿನ ಸುತ್ತೂರು ಮಠಗಳಲ್ಲಿ ಆಶ್ರಯ ಪಡೆದು ರಾಷ್ಟ್ರಕವಿಗಳಾದ ಉದಾಹರಣೆಗಳಿವೆ. ಈ ಮಠಗಳು ಯಾವುದೇ ಜಾತಿ ಮತಗಳ ತಾರತಮ್ಯವಿಲ್ಲದೇ ಸೇವಾ ಕಾರ್ಯ ಮಾಡುತ್ತಿದ್ದು, ಇಸ್ಲಾಂ ಧರ್ಮದವರು ಆಶ್ರಯ ಪಡೆಯಲು ಅವಕಾಶ ಮಾಡಿಕೊಟ್ಟಿವೆ. ಇಂತಹ ಮಠಗಳ ನಿಸ್ವಾರ್ಥ ಸೇವೆಯಿಂದಾಗಿ ರಾಜ್ಯದಲ್ಲಿ ಸಾಕ್ಷರತೆ ಪ್ರಮಾಣ ಉತ್ತಮವಾಗಿದ್ದು, ಸಾಕ್ಷರತೆ ಹೆಚ್ಚಾಗಲು ಮಠಗಳು, ಸಂಘ ಸಂಸ್ಥೆಗಳು ಪ್ರಮುಖ ಪಾತ್ರ ವಹಿಸಿವೆ ಎಂದರು.

ತುಮಕೂರು ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ, ಮಾಡ್ರಹಳ್ಳಿ ಮಠದ ಶ್ರೀಶಾಂತ ಮಲ್ಲಿಕಾರ್ಜುನ ಸ್ವಾಮೀಜಿ, ದೇವನೂರು ದಾಸೋಹ ಮಠದ ಮಹಾಂತ ಸ್ವಾಮೀಜಿ, ವಾಟಾಳು ಶ್ರೀಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ, ಕನಕಪುರ ದೇಗುಲ ಮಠದ ಡಾ.ಶ್ರೀ ಚನ್ನಬಸವ ಸ್ವಾಮೀಜಿ, ಸಾಲೂರು ಮಠದ ಶಾಂತಮಲ್ಲಿಕಾರ್ಜುನ ಸ್ವಾಮೀಜಿ, ಶ್ರೀಚನ್ನಬಸವ ದೇಶಿಕೇಂದ್ರ ಸ್ವಾಮೀಜಿ, ಇಮ್ಮಡಿ ಮುರುಘ ರಾಜೇಂದ್ರ ಸ್ವಾಮೀಜಿ, ಶಿವಲಿಂಗೇಂದ್ರ ಸ್ವಾಮೀಜಿ, ಪರಶಿವಮೂರ್ತಿ ಸ್ವಾಮೀಜಿ, ಡಾ.ಶರತ್ ಚಂದ್ರ ಸ್ವಾಮೀಜಿ ಆಶೀರ್ವಚನ ನೀಡಿದರು.

ಅಖಿಲ ಭಾರತ ವೀರಶೈವ ಮಹಾಸಭಾ ಜಿಲ್ಲಾಧ್ಯಕ್ಷ ಹೆಚ್.ವಿ.ಹಿನಕಲ್ ಬಸವರಾಜು, ತಾಲೂಕು ವೀರಶೈವ ಮಹಾಸಭಾ ಅಧ್ಯಕ್ಷ ಸಿ.ಎಂ.ಪ್ರಕಾಶ್, ಗ್ರಾಮ ವಿದ್ಯೋದಯ ಸಂಘದ ಗೌರವ ಪ್ರಧಾನ ಕಾರ್ಯದರ್ಶಿ ಕೆ.ಪಿ.ಮಹದೇವ ಸ್ವಾಮಿ, ವಿಶ್ರಾಂತ ಪ್ರಾಧ್ಯಾಪಕ ಡಿ.ಎಸ್.ಸದಾಶಿವಮೂರ್ತಿ ಮಾತನಾಡಿದರು.

ಇದೇ ವೇಳೆ ವಾಣಿಜ್ಯ ತೆರಿಗೆ ಇಲಾಖೆ ಅಪರ ಆಯುಕ್ತ ಹೆಳವರಹುಂಡಿ ಸಿದ್ದಪ್ಪ, ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್, ಅನಾಥ ಶವಗಳ ಮುಕ್ತಿದಾತ ಡಾ.ಎಂ.ಮಾದೇಶ್ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಸರ್ಪಭೂಷಣ ಸ್ವಾಮೀಜಿ, ನಂಜುಂಡ ಸ್ವಾಮೀಜಿ, ಷಡಕ್ಷರ ದೇಶಿಕೇಂದ್ರ ಸ್ವಾಮೀಜಿ, ಷಡಕ್ಷರ ಶಿವಾಚಾರ್ಯ ಸ್ವಾಮೀಜಿ, ಶ್ರೀಕಂಠ ಸ್ವಾಮೀಜಿ, ಶಿವಲಿಂಗ ಸ್ವಾಮೀಜಿ, ಶಿವಕುಮಾರ ಸ್ವಾಮೀಜಿ, ಶಿವಪ್ರಭು ಸ್ವಾಮೀಜಿ, ಮಹಾಲಿಂಗ ಸ್ವಾಮೀಜಿ ಸೇರಿದಂತೆ ನಿವೃತ್ತ ಮುಖ್ಯೋಪಾಧ್ಯಾಯ ಪುಟ್ಟಬುದ್ಧಿ, ಮೂಗೂರು ಕುಮಾರ ಸ್ವಾಮಿ, ನಿಲಸೋಗೆ ನುಂಜುಂಡಸ್ವಾಮಿ ಮತ್ತಿತರರಿದ್ದರು.

> ಶ್ರೀಚೆನ್ನಮಲ್ಲಿಕಾರ್ಜುನ ಸ್ವಾಮೀಜಿ ಅವರು ವಿದ್ವತ್ತನ್ನು ಸಂಪಾದಿಸುವುದರ ಜೊತೆಗೆ ವೀರಶೈವ ಲಿಂಗಾಯಿತ ಧರ್ಮದ ಎಲ್ಲಾ ತಂತ್ರಜ್ಞಾನ, ತಾತ್ವಿಕ ಅಂಶಗಳ ಆಚರಣೆಯನ್ನು ಭಕ್ತರಿಗೆ ತಿಳಿಸುವ ಸಾಮರ್ಥ್ಯ ಹೊಂದಿದ್ದರು. ಹಿರಿಯ ಶ್ರೀಗಳ ಪುಣ್ಯ ಸಂಸ್ಮರಣೆ ಜೊತೆಗೆ ಶಾಂತ ಮಲ್ಲಿಕಾರ್ಜುನ ಸ್ವಾಮಿಗಳು ಮಾಡ್ರಹಳ್ಳಿ ಮಠದ ಜವಾಬ್ದಾರಿ ವಹಿಸಿಕೊಂಡು 50 ವರ್ಷಗಳಾಗಿವೆ. ಆದರೆ ಅವರ ಪಟ್ಟಾಧಿಕಾರದ 50 ವರ್ಷ ಆಚರಿಸುವುದು ಸೂಕ್ತವಲ್ಲ ಎಂಬ ಉದ್ದೇಶದಿಂದ ಅವರ ಪಟ್ಟಾಧಿಕಾರದ ಸುವರ್ಣ ಮಹೋತ್ಸವವನ್ನು ಗುರುಗಳ ಸಂಸ್ಮರಣೆ ಜೊತೆಗೆ ಸಮೀಕರಣಗೊಳಿಸುವ ಮೂಲಕ ಗುರುಗಳಿಗೆ ವಿಶೇಷ ಗೌರವ ಸಲ್ಲಿಸುತ್ತಿದ್ದಾರೆ.
> –ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ.

ಹುಲಿ ದಾಳಿಗೆ ಎತ್ತು ಬಲಿ



ಮಲ್ಕುಂಡಿ, ಮಾ.26– ಹಾಡಹಗಲೇ ಹುಲಿ ದಾಳಿಗೆ ಎತ್ತು ಬಲಿಯಾಗಿರುವ ಘಟನೆ ನಂಜನಗೂಡು ತಾಲೂಕಿನ ಕಂದೇಗಾಲ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ಮಾಣಂಕಯ್ಯ ಎಂಬುವರಿಗೆ ಸೇರಿದ ಎತ್ತು ಬಲಿಯಾಗಿರುವುದು. ಮಾಣಂಕಯ್ಯ ಅವರು ಗ್ರಾಮದ ಹೊರ ವಲಯದಲ್ಲಿರುವ ಬೆಣ್ಣೆಕೆರೆಹಳ್ಳ ಎಂಬಲ್ಲಿ ಜಾನುವಾರುಗಳನ್ನು ಮೇಯಿಸುತ್ತಿದ್ದ ವೇಳೆ ಹುಲಿ ಏಕಾಏಕಿ ಎತ್ತಿನ ಮೇಲೆ ದಾಳಿ ನಡೆಸಿದೆ. ಈ ವೇಳೆ ಅಕ್ಕಪಕ್ಕದ ಜಮೀನಿನಲ್ಲಿದ್ದ ರೈತರು ಕಿರುಚಾಡಿದ್ದರಿಂದ ಗಾಬರಿಗೊಂಡ ಹುಲಿ ಸ್ಥಳದಿಂದ ಪರಾರಿಯಾಗಿದೆ.


ರಾಜ್ಯ ರೈತ ಸಂಘದ ಮುಖಂಡ ಶ್ರೀನಿವಾಸ್ ಮಾತನಾಡಿ, ಈ ಭಾಗದಲ್ಲಿ ಹುಲಿ ಕಾಣಿಸಿಕೊಂಡಿರುವುದರಿಂದ ರೈತರು ಹಾಗೂ ಸಾರ್ವಜನಿಕರು ಭಯಗೊಂಡಿದ್ದಾರೆ. ಅಲ್ಲದೇ ಹುಲಿ ದಾಳಿ ನಡೆಸಿ ಎತ್ತನ್ನು ಬಲಿ ಪಡೆದಿರುವುದರಿಂದ ಸಾವಿರಾರು ರೂ. ನಷ್ಟ ಸಂಭವಿಸಿದೆ. ಹೀಗಾಗಿ ಅರಣ್ಯ ಇಲಾಖೆ ಅಧಿಕಾರಿಗಳು ಎತ್ತು ಕಳೆದುಕೊಂಡ ರೈತನಿಗೆ ಸೂಕ್ತ ಪರಿಹಾರ ನೀಡುವ ಜೊತೆಗೆ ಹುಲಿ ಸೆರೆಗೆ ಮುಂದಾಗಬೇಕು ಎಂದು ಒತ್ತಾಯಿಸಿದರು.

ಬಾಗಿಲು ಮೀಟಿ ನಗದು, ಚಿನ್ನಾಭರಣ ಕಳವು

ನಂಜನಗೂಡು, ಮಾ.26– ಮನೆ ಬಾಗಿಲು ಮೀಟಿ ಸಾವಿರಾರು ರೂ. ಹಾಗೂ ಚಿನ್ನಾಭರಣ ಕಳವು ಮಾಡಿರುವ ಘಟನೆ ನಗರದ ಸಿಟಿಜನ್ ಶಾಲೆ ಪಕ್ಕದ ಹೊಸ ಹೌಸಿಂಗ್ ಬೋರ್ಡ್‌ನಲ್ಲಿ ನಡೆದಿದೆ.

ನಗರದ ಖಾಸಗಿ ಬ್ಯಾಂಕ್ ಉದ್ಯೋಗಿ, ಬಡಾವಣೆ ನಿವಾಸಿ ಕೆ.ಶಿವಕುಮಾರ್ ಅವರ ಮನೆಯಲ್ಲೇ ಕಳವು ಮಾಡಿರುವುದು. ಇಲ್ಲಿನ ಬಾಡಿಗೆ ಮನೆಯಲ್ಲಿ ವಾಸವಿದ್ದ ಶಿವಕುಮಾರ್ ಅವರು ಮಕ್ಕಳಿಗೆ ಬೇಸಿಗೆ ರಜೆ ನೀಡಿದ್ದ ಹಿನ್ನೆಲೆಯಲ್ಲಿ ತಮ್ಮ ಸ್ವಗ್ರಾಮ ಶಿವಕನಹಳ್ಳಿಗೆ ತೆರಳಿದ್ದರು. ಮನೆಯಲ್ಲಿ ಯಾರು ಇಲ್ಲದಿರುವುದನ್ನು ಗಮನಿಸಿದ ದುಷ್ಕರ್ಮಿಗಳು ಹೊಂಚು ಹಾಕಿ ಕಬ್ಬಿಣದ ಸಲಾಕೆಯಿಂದ ಬಾಗಿಲು ಮೀಟಿ ಮನೆ ಬೀರುವಿನಲ್ಲಿದ್ದ 10 ಗ್ರಾಂ ಚಿನ್ನ, 50 ಸಾವಿರ ರೂ. ಕಳವು ಮಾಡಿ ಪರಾರಿಯಾಗಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ನಂಜನಗೂಡು ನಗರ ಠಾಣೆ ಪೊಲೀಸರು ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಇಂದಿನಿಂದ ಶ್ರೀಮೂರೂರಮ್ಮ ದೇವಿ ಜಾತ್ರಾ ಮಹೋತ್ಸವ



ಹುಣಸೂರು, ಮಾ.26– ತಾಲೂಕಿನ ಕಲ್ಕುಣಿಕೆ ಗ್ರಾಮದ ಗ್ರಾಮದೇವತೆ ಶ್ರೀ ಮೂರೂರಮ್ಮ ದೇವಿ ಜಾತ್ರಾ ಮಹೋತ್ಸವ ಮಾ.27ರಿಂದ 29ರವರೆಗೆ 3 ದಿನಗಳ ಕಾಲ ಅದ್ಧೂರಿಯಾಗಿ ನಡೆಯಲಿದೆ ಎಂದು ಜಾತ್ರಾ ಉಸ್ತುವಾರಿ ವ್ಯವಸ್ಥಾಪಕ ಕೃಷ್ಣನಾಯಕ ತಿಳಿಸಿದ್ದಾರೆ.

ಮಾ.27ರಂದು ಬೆಳಗ್ಗೆ 5 ಗಂಟೆಗೆ ಅಮ್ಮನವರಿಗೆ ಪಂಚಾಮೃತಾಭಿಷೇಕ ಮತ್ತು ಅಲಂಕಾರ ಪೂಜೆ ನಡೆಸಲಾಗುವುದು. ಸಂಜೆ 4 ಗಂಟೆಗೆ ಶ್ರೀಮೂರೂರಮ್ಮ ದೇವಿ ಉತ್ಸವ ಮೂರ್ತಿ ಮೆರವಣಿಗೆ ಕಲ್ಕುಣಿಕೆ ರಂಗನಾಥ ಬಡಾವಣೆಯಿಂದ ಹೊರಟು ಹಾಲಗೆರೆ ಸಮೀಪದಲ್ಲಿರುವ ಶ್ರೀಮೂರೂರಮ್ಮ ದೇವಾಲಯ ತಲುಪಲಿದೆ. ಮಾ.28ರಂದು ಶನಿವಾರ ರಥ ಶುದ್ಧೀಕರಣ, ಪರಿವಾರ ದೇವತೆಗಳ ಪೂಜೆ ನಡೆಯಲಿದೆ. ಮಾ.29ರಂದು ಬೆಳಗ್ಗೆ 11.05 ರಿಂದ ಮಧ್ಯಾಹ್ನ 12.10 ರೊಳಗೆ ಸಲ್ಲುವ ಶುಭ ಮಿಥುನ ಲಗ್ನದಲ್ಲಿ ಶ್ರೀಮೂರೂರಮ್ಮ ದೇವಿ ರಥೋತ್ಸವ ನಡೆಯಲಿದೆ. ಮಧ್ಯಾಹ್ನ 1 ಗಂಟೆಗೆ ಭಕ್ತರಿಗೆ ಅನ್ನ ದಾಸೋಹ ನಡೆಯಲಿದೆ. ಜಾತ್ರಾ ಮಹೋತ್ಸವದಲ್ಲಿ ಶಾಸಕ ಜಿ.ಡಿ.ಹರೀಶ್‌ಗೌಡ, ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಸೇರಿದಂತೆ ಅನೇಕ ಗಣ್ಯರು, ಕಲ್ಕುಣಿಕೆಯ ಎಲ್ಲಾ ಕೋಮಿನ ಯಾಜಮಾನರು ಹಾಲಗೆರೆ, ನಿಲವಾಗಿಲು, ಯಾಶೀಧರಪುರ ಗ್ರಾಮಗಳ ಗ್ರಾಮಸ್ಥರು ಭಾಗವಹಿಸಲಿದ್ದಾರೆ ಎಂದರು.

ರೀಲ್ಸ್ ಯುವ ಪೀಳಿಗೆಯ ಜನಪ್ರಿಯತೆಯ ಸಾಧನ



ಕಾರ್ಯಕ್ರಮವನ್ನು ಮಾಜಿ ಶಾಸಕ ಕಳಲೆ ಕೇಶವಮೂರ್ತಿ ಉದ್ಘಾಟಿಸಿದರು.


ನಂಜನಗೂಡು, ಮಾ.26– ಪ್ರಸ್ತುತ ರೀಲ್ಸ್ ಯುವ ಪೀಳಿಗೆಯ ಜನಪ್ರಿಯತೆಯ ಸಾಧನವಾಗಿದೆ. ರೀಲ್ಸ್‌ನಿಂದ ಕಡಿಮೆ ಸಮಯದಲ್ಲಿ ಹೆಚ್ಚು ಪ್ರಸಿದ್ಧಿ ಪಡೆಯಬಹುದಾಗಿದೆ. ಜೊತೆಗೆ ಯುವಕರ ಪ್ರತಿಭೆ ಅನಾವರಣಗೊಳಿಸುವ ಉತ್ತಮ ವೇದಿಕೆಯಾಗಿದೆ ಎಂದು ಮಾಜಿ ಶಾಸಕ ಕಳಲೆ ಕೇಶವಮೂರ್ತಿ ತಿಳಿಸಿದರು.

ನಗರದ ಮಹದೇಶ್ವರ ಪ್ಯಾಲೇಸ್ ಸಭಾಂಗಣದಲ್ಲಿ ಗರಳಪುರಿ ಉತ್ಸವದ ಅಂಗವಾಗಿ ತಾಲೂಕು ಯುವ ಕಾಂಗ್ರೆಸ್ ವತಿಯಿಂದ ನಡೆದ ರೀಲ್ಸ್ ಮೇಕಿಂಗ್ ಸ್ಪರ್ಧೆ ಉದ್ಘಾಟಿಸಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ರೀಲ್ಸ್ ಉತ್ಪನ್ನಗಳು ಮತ್ತು ಬ್ರಾಂಡ್ ಪ್ರಚಾರ ಮಾಡುವ ಪ್ರಭಾವಶಾಲಿ ಸಾಧನಗಳಲ್ಲಿ ಒಂದಾಗಿದೆ. ಆ ಮೂಲಕ ಸಾಮಾಜಿಕ ಜಾಲತಾಣದಲ್ಲಿ ಕಡಿಮೆ ಸಮಯದಲ್ಲಿ ಹೆಚ್ಚು ವೀಕ್ಷಕರನ್ನು ತಲುಪಿ ಜನಪ್ರಿಯತೆ ಗಳಿಸುವ ಜೊತೆಗೆ ಪ್ರತಿಭೆ ಪ್ರದರ್ಶಿಸಲು ಉತ್ತಮ ವೇದಿಕೆಯಾಗಿದೆ ಎಂದರು.

ಯುವ ಕಾಂಗ್ರೆಸ್ ತಾಲೂಕು ಅಧ್ಯಕ್ಷ ವಿಜಯಕುಮಾರ್ ಮಾತನಾಡಿ, ಉತ್ತಮ ರೀಲ್ಸ್ ತಯಾರಿಕೆಗೆ ಪ್ರಥಮ ಬಹುಮಾನ 20 ಸಾವಿರ, ದ್ವಿತೀಯ ಬಹುಮಾನ 10 ಸಾವಿರ, ತೃತೀಯ ಬಹುಮಾನ 5 ಸಾವಿರ ಮತ್ತು ಪ್ರಶಸ್ತಿ ಪತ್ರ ವಿತರಿಸಲಾಗುತ್ತದೆ. ಸ್ಪರ್ಧೆಯಲ್ಲಿ ಸುಮಾರು 45 ಮಂದಿ ಯುವಕರು ಭಾಗವಹಿಸಿ ತಮ್ಮ ಪ್ರತಿಭೆ ಪ್ರದರ್ಶಿಸಿದ್ದಾರೆ ಎಂದರು.

ವಿಶ್ವಕರ್ಮ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ನಂದಕುಮಾರ್, ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಕೆ.ಮಾರುತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಶಂಕರ್, ಶ್ರೀಕಂಠ ನಾಯಕ, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರದೀಪ್ ಕುಮಾರ್, ಮಂಜುನಾಥ್, ಗೋವಿಂದರಾಜು, ಗಾಯತ್ರಿ, ಶಶಿರೇಖಾ, ಸೋಮು, ಸತೀಶ್ ಗೌಡ, ಮಹೇಶ್, ಹರೀಶ್ ಇತರರಿದ್ದರು.

ಆಕಸ್ಮಿಕ ಬೆಂಕಿ; ಗುಜರಿ ಭಸ್ಮ



ಹೆಚ್.ಡಿ.ಕೋಟೆ, ಮಾ.26– ಆಕಸ್ಮಿಕ ಬೆಂಕಿ ತಗುಲಿ ಗುಜರಿ ಸಂಪೂರ್ಣ ಭಸ್ಮವಾಗಿರುವ ಘಟನೆ ತಾಲೂಕಿನ ಹ್ಯಾಂಡ್ ಪೋಸ್ಟ್‌ನ ಜಕ್ಕಳ್ಳಿ ಬಳಿ ಗುರುವಾರ ಮಧಾಹ್ನ ನಡೆದಿದೆ.

ಜಫ್ರುಲ್ಲಾ ಅವರಿಗೆ ಸೇರಿದ ಗುಜರಿ ಭಸ್ಮವಾಗಿದ್ದು, ಲಕ್ಷಾಂತರ ರೂ. ನಷ್ಟ ಸಂಭವಿಸಿದೆ ಎನ್ನಲಾಗಿದೆ. ಇಂದು ಮಧ್ಯಾಹ್ನ ಗುಜರಿಯಲ್ಲಿ ಆಕಸ್ಮಿಕವಾಗಿ ಬೆಂಕಿ ಕಾಣಿಸಿಕೊಂಡಿದೆ. ಈ ವೇಳೆ ಜಫ್ರುಲ್ಲಾ ಅವರು ತಕ್ಷಣ ಅಗ್ನಿಶಾಮಕ ಕಚೇರಿಗೆ ಕರೆ ಮಾಡಿ ಮಾಹಿತಿ ನೀಡಿದ್ದಾರೆ. ತಕ್ಷಣ ಸ್ಥಳಕ್ಕೆ ಆಗಮಿಸಿದ ಕೋಟೆ ಸರಗೂರು ತಾಲೂಕಿನ ಅಗ್ನಿಶಾಮಕ ದಳದ ಸಿಬ್ಬಂದಿ ನಿರಂತರವಾಗಿ 4 ಗಂಟೆಗಳ ಕಾಲ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸುವಲ್ಲಿ ಯಶಸ್ವಿಯಾದರು. ಆದರೆ ಈ ವೇಳೆಗಾಗಲೇ ಲಕ್ಷಾಂತರ ರೂ. ಮೌಲ್ಯದ ಗುಜರಿ ಸಾಮಾನುಗಳು ಭಸ್ಮವಾಗಿದ್ದವು.

ಕಾರ್ಯಾಚರಣೆಯಲ್ಲಿ ಸಹಾಯಕ ಅಗ್ನಿಶಾಮಕ ಠಾಣಾಧಿಕಾರಿ ಎಂ.ಜಿ.ಸೋಮಣ್ಣ, ಅಗ್ನಿಶಾಮಕರಾದ ಅಶೋಕ್, ಮಂಜು, ರವಿ, ಚಾಲಕರಾದ ಹೇಮಂತ್ ಕುಮಾರ್, ಸುನೀಲ್ ಕುಮಾರ್, ಅರುಣ್ ಕುಮಾರ್, ಮುನಿಸಿದ್ದ ನಾಯಕ, ಪ್ರಕಾಶ, ಎಲ್ಲಪ್ಪ ಪುಂಡಲಿಕ, ರಾಹುಲ್, ಬಾಲಕೃಷ್ಣ ಸೇರಿದಂತೆ ಇತರರಿದ್ದರು. ಈ ಸಂಬಂಧ ಹೆಚ್.ಡಿ.ಕೋಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೂರನೇ ಪುಟದಿಂದ

ತುರ್ತು ನೋಟಿಸ್

ತನಿಖೆಗೆ ಅನುಮತಿಸಿ 2024ರ ಸೆಪ್ಟೆಂಬರ್ 24ರಂದು ಆದೇಶಿಸಿತ್ತು. ಬಳಿಕ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ್ದ ಲೋಕಾಯುಕ್ತ ಪೊಲೀಸರು, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತವರ ಕುಟುಂಬದ ಸದಸ್ಯರ ವಿರುದ್ಧ 'ಬಿ' ರಿಪೋರ್ಟ್ ಸಲ್ಲಿಸಿದ್ದರು. ಅದನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಅಂಗೀಕರಿಸಿತ್ತು.

ಇದನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಿರುವ ಸ್ನೇಹಮಯಿ ಕೃಷ್ಣ, ಲೋಕಾಯುಕ್ತ ಪೊಲೀಸ್ ವರಿಷ್ಠಾಧಿಕಾರಿ ಸಲ್ಲಿಸಿರುವ 'ಬಿ' ರಿಪೋರ್ಟ್ ಪಡೆದು ಪರಿಶೀಲಿಸಬೇಕು ಹಾಗೂ ಬಿ ರಿಪೋರ್ಟ್ ಅಂಗೀಕರಿಸಿದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ಆದೇಶ ರದ್ದುಪಡಿಸಬೇಕು. ಹಾಲಿ ಮುಖ್ಯಮಂತ್ರಿಗಳು ಅಧಿಕಾರ ದುರುಪಯೋಗ ಮಾಡಿಕೊಂಡಿದ್ದು ಅವರ ವಿರುದ್ಧ ಬಿ ರಿಪೋರ್ಟ್ ಅಂಗೀಕರಿಸಿದರೆ ನಿಷ್ಪಕ್ಷಪಾತತೆ ಬಗ್ಗೆ ಸಾರ್ವಜನಿಕರಲ್ಲಿರುವ ವಿಶ್ವಾಸ ಕ್ಷೀಣಿಸುತ್ತದೆ. ಆದ್ದರಿಂದ ಈ ಪ್ರಕರಣದ ತನಿಖೆಯನ್ನು ಸ್ವತಂತ್ರ ತನಿಖಾ ಸಂಸ್ಥೆಗೆ ವರ್ಗಾಯಿಸಿ, ಹೊಸದಾಗಿ ವರದಿ ಸಲ್ಲಿಕೆಗೆ ನಿರ್ದೇಶಿಸಬೇಕು ಎಂದು ಕೋರಿದ್ದಾರೆ.

ಇಡಿ ವಿಶೇಷ ನ್ಯಾಯಾಲಯಕ್ಕೆ ವರ್ಗಾಯಿಸಿ ಹೈಕೋರ್ಟ್ ಆದೇಶ



ಬೆಂಗಳೂರು, ಮಾ.26– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದ ಮಾಜಿ ಆಯುಕ್ತ ಜಿ.ಟಿ.ದಿನೇಶ್‌ಕುಮಾರ್ ವಿರುದ್ಧದ ಇಡಿ ಪ್ರಕರಣದ ವಿಚಾರಣೆ ಯನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದಿಂದ ಜಾರಿ ನಿರ್ದೇಶನಾಲಯದ ವಿಶೇಷ ನ್ಯಾಯಾಲಯಕ್ಕೆ ವರ್ಗಾಯಿಸಿ ಹೈಕೋರ್ಟ್ ಆದೇಶಿಸಿದೆ.

ಪ್ರಾಧಿಕಾರದಿಂದ ನಿವೇಶನಗಳ ಹಂಚಿಕೆಯಲ್ಲಿ ಅಕ್ರಮ ಎಸಗಿದ ಆರೋಪಕ್ಕೆ ಸಂಬಂಧಿಸಿದಂತೆ ಜಿ.ಟಿ.ದಿನೇಶ್ ಕುಮಾರ್ ವಿರುದ್ಧ ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ(ಪಿಎಂಎಲ್‌ಎ) ಅಡಿ ದಾಖಲಿಸಿರುವ ಪ್ರಕರಣದ ವಿಚಾರಣೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ದಲ್ಲಿ ನಡೆಯುತ್ತಿದೆ. ಆದರೆ ದಿನೇಶ್‌ಕುಮಾರ್ ನಾನು ಜನಪ್ರತಿನಿಧಿಯಲ್ಲ, ಹೀಗಾಗಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ನನ್ನ ಪ್ರಕರಣದಲ್ಲಿ ಈತನಕ ಹೊರಡಿಸಿರುವ ಆದೇಶಗಳು ವ್ಯಾಪ್ತಿ ಮೀರಿದ ಆದೇಶಗಳಾಗಿವೆ. ಆದ್ದರಿಂದ ಪ್ರಕರಣ ವಿಚಾರಣೆಯನ್ನು ಜಾರಿ ನಿರ್ದೇಶನಾಲಯದ ವಿಶೇಷ ನ್ಯಾಯಾಲಯಕ್ಕೆ ವರ್ಗಾಯಿಸಬೇಕು ಎಂದು ಅರ್ಜಿದಾರರು ಕೋರಿದ್ದರು. ಈ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ಇತ್ಯರ್ಥಗೊಳಿಸಿದೆ.

ಮೇಕೆದಾಟು ಜಲಾಶಯಕ್ಕೆ ಅಡಿಗಲ್ಲು..!

ಕಾವೇರಿ ನ್ಯಾಯಾಧೀಕರಣದ ತೀರ್ಪಿನ ಪ್ರಕಾರ ತಮಿಳು ನಾಡಿಗೆ ವಾರ್ಷಿಕ ಎಷ್ಟು ನೀರನ್ನು ಹರಿಸಬೇಕೋ ಅಷ್ಟು ಹರಿಸಿದ ನಂತರ ಉಳಿಯುವ ನೀರಿನ ಮೇಲೆ ಅವರಿಗೆ ಯಾವುದೇ ಹಕ್ಕಿಲ್ಲ. ಇನ್ನು ಮುಂದೆ ಕೇಂದ್ರ ಜಲ ಆಯೋಗ ಮತ್ತು ಕರ್ನಾಟಕದ ನಡುವೆ ಮಾತುಕತೆಯಾಗಲಿದೆ.

ಶೀಘ್ರದಲ್ಲೇ ಅಣೆಕಟ್ಟು ನಿರ್ಮಾಣಕ್ಕೆ ಗುದ್ದಲಿ ಪೂಜೆ ಮಾಡುತ್ತೇವೆ. ಇದು ಕಡಿಮೆ ವೆಚ್ಚದ ಯೋಜನೆ ಆಗಿದೆ. 600 ಎಕರೆ ಭೂಮಿಯನ್ನು ಮಾತ್ರ ಸ್ವಾಧೀನ ಪಡಿಸಿಕೊಳ್ಳಬೇಕು. ಬಹುತೇಕ ಅರಣ್ಯ ಇಲಾಖೆಯ ಭೂಮಿ ಇದೆ. ಅದಕ್ಕೆ ಸರ್ಕಾರ ಪರ್ಯಾಯ ಜಾಗ ನೀಡುತ್ತದೆ. ಹೀಗಾಗಿ ಯೋಜನೆಯ ವೆಚ್ಚ ತಗ್ಗಲಿದೆ ಎಂದು ಹೇಳಿದರು. ಅಣೆಕಟ್ಟು ನಿರ್ಮಾಣದಿಂದ ನನ್ನ ಜಮೀನು ಕೂಡ ಹೋಗುತ್ತದೆ. ಆದರೆ ತಮಗೆ ಯೋಜನೆ ಮುಖ್ಯ ಬೆಂಗಳೂರಿನಲ್ಲಿ ಕುಡಿಯುವ ನೀರಿನ ಸಮಸ್ಯೆಗೆ ಮುಂದಿನ ಐದು ವರ್ಷಗಳಲ್ಲಿ ಪರಿಹಾರ ದೊರೆಯಲಿದೆ. ಈಗಾಗಲೇ ಕಾವೇರಿ ಐದನೇ ಹಂತದ ಮೂಲಕ ನೀರು ಪೂರೈಸಲಾಗುತ್ತಿದೆ. 6ನೇ ಹಂತಕ್ಕೂ ಅನುಮೋದನೆ ನೀಡಲಾಗುವುದು ಎಂದು ಹೇಳಿದರು.

ಬೇಸಿಗೆ ಸಂದರ್ಭದಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗುತ್ತದೆ. ಅದೇ ವೇಳೆ ಟ್ಯಾಂಕರ್ ಮಾಫಿಯಾ ಕೂಡ ತಲೆ ಎತ್ತುತ್ತದೆ. ಇದಕ್ಕೆ ಕಡಿವಾಣ ಹಾಕಬೇಕಿದೆ ಎಂದರು.

ಪ್ರವೇಶಕ್ಕೆ ಮಕ್ಕಳ ವಯೋಮಿತಿ ಸಡಿಲಿಕೆ

ವಯೋಮಿತಿ ಕೆಲವೊಮ್ಮೆ ಅಡ್ಡ ಬರುತ್ತಿತ್ತು. ಅಂತಹವರ ಹಿತದೃಷ್ಟಿ ಹಾಗೂ ಪೋಷಕರ ಮನವಿಗೆ ಸ್ಪಂಧಿಸಿ ಈ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಹೇಳಿದರು. ಪೂರ್ವ ಪ್ರಾಥಮಿಕವಾದ ಎಲ್ ಕೆಜಿ, ಯುಕೆಜಿಯ ವಯೋಮಿತಿ ಸಡಿಲ ಮಾಡಲಿದ್ದು, ಇದಕ್ಕೂ ಮುಂದಿನ ಅಧಿವೇಶನದಲ್ಲಿ ಕಾನೂನು ತರುವುದಾಗಿ ಪ್ರಕಟಿಸಿದರು. ಮಹಾವೀರ ಜಯಂತಿ ರಜೆಯ ಹಿನ್ನೆಲೆಯಲ್ಲಿ ಮಾ.30 ರಂದು ನಡೆಯಬೇಕಿದ್ದ ಎಸ್‌ಎಸ್‌ಎಲ್‌ಸಿ ತೃತೀಯ ಭಾಷೆ (ಹಿಂದಿ) ಪರೀಕ್ಷೆಯನ್ನು ಮಾ. 31ಕ್ಕೆ ಮುಂದೂಡಲಾಗಿದೆ.

ಬಾಡಿಗೆ ಬರೀ ಮಾಸಿಕ 265 ರೂ. ...!



ಮೈಸೂರಿನ ಹಲವು ಬಡಾವಣೆಗಳಲ್ಲಿ ಅಳವಡಿಸಿರುವ ಮೊಬೈಲ್ ಟವರ್‌ಗಳ ಬಾಡಿಗೆ ದುಬಾರಿಯಾಗಿದೆ. ಖಾಸಗಿ ಕಂಪನಿ ಗಳು ಮೊಬೈಲ್ ಟವರ್ ಅಳವಡಿಸಲು ಜಾಗ ಅಥವಾ ಕಟ್ಟಡದ ಮಾಲೀಕರಿಗೆ ಮಾಸಿಕ 25 ಸಾವಿರದಿಂದ ಲಕ್ಷದವರೆಗೆ ಬಾಡಿಗೆ, ಮುಂಗಡ ಪಾವತಿ ಮಾಡುತ್ತಿವೆ. ಪರಿಸ್ಥಿತಿ ಹೀಗಿರುವಾಗ ತಿಂಗಳಿಗೆ ಕೇವಲ 265 ರೂಪಾಯಿ ಬಾಡಿಗೆಗೆ ಮುಡಾ ಅನುಮತಿ ನೀಡಿರುವುದು ಇದರ ಹಗರಣದ ಮತ್ತೊಂದು ಭಾಗವಲ್ಲದೆ ಮತ್ತೇನು ಅಲ್ಲ.

ನಗರದ ಯೋಜಿತ ಅಭಿವೃದ್ಧಿ ದೃಷ್ಟಿಯಿಂದ ರಚನೆಗೊಂಡ ನಗರ ಅಭಿವೃದ್ಧಿ ವಿಶ್ವಸ್ಥ ಮಂಡಳಿ(ಸಿಐಟಿಬಿ)ಯು ವರ್ಷಗಳ ಬಳಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ವಾಗಿ, ಇತ್ತೀಚಿಗೆ ಮೈಸೂರು ಅಭಿವೃದ್ಧಿ ಪ್ರಾಧಿಕಾರ(ಎಂಡಿಎ)ವಾಗಿ ಬದಲಾಗಿದೆ. ಆದರೆ ಆರಂಭಿಕ ಮಂಡಳಿ ಯಲ್ಲಿದ್ದ ಉದ್ದೇಶ, ಧ್ಯೇಯ ಯಾವುದೂ ಉಳಿದಿಲ್ಲ. ಇತ್ತೀಚಿನ ವರ್ಷಗಳಲ್ಲಿ ಸಾಲು ಸಾಲು ಭ್ರಷ್ಟಾಚಾರ ಬಯ ಲಾಗುತ್ತಿವೆ. ಸಂಸ್ಥೆಯ ಮೇಲೆ ವಿಶ್ವಾಸವೇ ಇಲ್ಲದಂತಾಗಿದೆ ಎಂದು ಸಾರ್ವಜನಿಕರು ಬೇಸರ ವ್ಯಕ್ತಪಡಿಸುತ್ತಿರುವ ಸಂದರ್ಭದಲ್ಲಿ ಇದೀಗ ಮೊಬೈಲ್ ಟವರ್ ಅವ್ಯವಹಾರ ಬೆಳಕಿಗೆ ಬಂದಿದೆ.

ದೇಸಾಯಿ ಆಯೋಗದ ವರದಿ ಏನಾಯಿತು?

ಮುಡಾ ಅಕ್ರಮಗಳ ಬಗ್ಗೆ ನ್ಯಾಯಮೂರ್ತಿ ಪಿ.ಎನ್.ದೇಸಾಯಿ ಅವರ ಏಕ ಸದಸ್ಯ ತನಿಖಾ ಆಯೋಗ ನೀಡಿರುವ ವರದಿ ಸರ್ಕಾರದ ಕೈ ಸೇರಿ ಎಷ್ಟೋ ತಿಂಗಳು ಕಳೆದಿದೆ. ಆದರೆ ಈ ತನಕ ಆಯೋಗದ ವರದಿ ಬಹಿರಂಗ ಪಡಿಸಿ, ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ. ಪಿ.ಎನ್.ದೇಸಾಯಿ ಅವರು ನೀಡಿರುವ ವರದಿ ಸರ್ಕಾರದ ಕೊಠಡಿಯೊಂದರಲ್ಲಿ ಧೂಳು ಹಿಡಿಯುತ್ತಿದೆ. ಸಾವಿರಾರು ಕೋಟಿ ಮೌಲ್ಯದ ಹಗರಣದ ತನಿಖಾ ವರದಿಯ ಒಂದೇ ಒಂದು ಪುಟವನ್ನೂ ಸರ್ಕಾರ ತಿರುಗಿಸಿ ನೋಡಿಲ್ಲ. ಇಂತಹ ಸಾವಿರಾರು ತನಿಖಾ ಆಯೋಗದ ವರದಿ ಸರ್ಕಾರದಲ್ಲಿ ಕೊಳೆಯುತ್ತಿದ್ದು, ಈ ತನಕ ಯಾರ ವಿರುದ್ಧವೂ ಕ್ರಮ ಕೈಗೊಂಡಿಲ್ಲ. ಆ ಪಟ್ಟಿಗೆ ಈಗ ಮುಡಾ ಹಗರಣ ಕೂಡ ಸೇರ್ಪಡೆಯಾಗಿದೆ. ಸರ್ಕಾರದ ಈ ನಿರ್ಲಕ್ಷ್ಯ, ಬೇಜವಾಬ್ದಾರಿತನ ದಿಂದಲೇ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ರಾಜಾರೋಷವಾಗಿ ಯಾವುದೇ ಭಯವಿಲ್ಲದೆ ಜನರ ತೆರಿಗೆ ಹಣವನ್ನು ಲೂಟಿ ಮಾಡುತ್ತಿದ್ದಾರೆ.

ಉಚಿತವಾಗಿ ಇಂಟರ್‌ನೆಟ್ ಸೇವೆ ನೀಡುತ್ತಾರಂತೆ...

ಮೊಬೈಲ್ ಕಂಪನಿಯು ಜನರಿಗೆ ಉಚಿತ ಇಂಟರ್‌ನೆಟ್ ಸೇವೆ ನೀಡುತ್ತದೆ ಎಂಬ ಕಾರಣಕ್ಕೆ ದಿನೇಶ್ ಕುಮಾರ್, ಮೊಬೈಲ್ ಟವರ್ ಅಳವಡಿಕೆಗೆ ಮುಡಾ ಜಾಗವನ್ನು ತೀರಾ ಕಡಿಮೆ ಬಾಡಿಗೆಗೆ ನೀಡಿದ್ದಾರಂತೆ. ಮೊಬೈಲ್ ಕಂಪನಿಗಳು ಉಚಿತವಾಗಿ ಇಂಟರ್‌ನೆಟ್ ಸೇವೆ ನೀಡುವುದಿರಲಿ, ಶುಲ್ಕವನ್ನೇ ದುಬಾರಿಗೊಳಿಸುತ್ತಿವೆ. ಮಾರುಕಟ್ಟೆಯಲ್ಲಿ ಪಾರುಪತ್ಯ ಮೆರೆಯುತ್ತಿರುವ ಒಂದೆರಡು ಮೊಬೈಲ್ ಕಂಪನಿಗಳು ಏಕಸ್ವಾಮ್ಯತೆ ಸ್ಥಾಪಿಸಿಕೊಂಡು ಇಷ್ಟ ಬಂದಂತೆ ಇಂಟರ್‌ನೆಟ್ ಸೇವಾ ಶುಲ್ಕವನ್ನು ಪೈಪೋಟಿ ಗಿಳಿದಂತೆ ಹೆಚ್ಚಿಸುತ್ತಿವೆ. ಹೀಗಿರುವಾಗ ಉಚಿತವಾಗಿ ಇಂಟರ್ ನೆಟ್ ಸೇವೆ ನೀಡುತ್ತಾರೆ ಎಂಬುದನ್ನು ನಂಬಲಾದೀತೆ. ಲಾಭವನ್ನೇ ಮಾನದಂಡವಾಗಿ ಪರಿಗಣಿಸುವ ಕಂಪನಿಗಳು ಇಂಟರ್‌ನೆಟ್ ಸೇವೆಯನ್ನು ಉಚಿತವಾಗಿ ಹೇಗೆ ನೀಡಲು ಸಾಧ್ಯ? ಎಂಬ ಪ್ರಶ್ನೆ ಕೂಡ ಎದುರಾಗಿದೆ. ಈ ವಿಚಾರ ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ಕೆ.ಆರ್.ರಕ್ಷಿತ್ ಅವರ ಗಮನಕ್ಕೆ ಬಂದಿದೆ. ಈ ಸಂಬಂಧ ಪರಿಶೀಲನೆಗೆ ಮುಂದಾದ ರಕ್ಷಿತ್ ಅವರು ಫೈಲ್ ಹುಡುಕಲು ಅಧಿಕಾರಿ ಗಳಿಗೆ ಸೂಚಿಸಿದ್ದಾರೆ. ಆದರೆ ಈ ಕಡತವೇ ನಾಪತ್ತೆ! ಮುಡಾ ದಲ್ಲಿ ನಡೆದಿರುವ ಬಹಳಷ್ಟು ಅಕ್ರಮಗಳ ಕಡತಗಳು ನಾಪತ್ತೆಯಾಗಿರುವ ಪಟ್ಟಿಗೆ ಇದು ಕೂಡ ಸೇರಿದೆ. ಒಟ್ಟಾರೆ ದಿನೇಶ್ ಕುಮಾರ್ ಅವರು ತಳವೂ ಇಲ್ಲದ, ತಾಳೆಯೂ ಆಗದ ಸುಳ್ಳು ವಿಚಾರಗಳನ್ನು ಉಲ್ಲೇಖಿಸಿ ಖಾಸಗಿ ಕಂಪನಿಗಳಿಗೆ ಮುಡಾ ಆಸ್ತಿಯನ್ನೆ ಕೈಗಿಟ್ಟಿರುವುದು ಇದರಿಂದ ಸ್ಪಷ್ಟವಾಗಿದೆ. ಮುಡಾದಲ್ಲಿ ಬಹಳಷ್ಟು ಹಗರಣಗಳು ಬಯಲಾಗಿದ್ದು, ಬಾಕಿ ಏನು ಇಲ್ಲವೇ ಎನ್ನುತ್ತಿದ್ದ ಜನರಿಗೆ ಮತ್ತೊಂದು ಅಕ್ರಮ ದುತ್ತನೆ ಪ್ರತ್ಯಕ್ಷವಾಗಿದೆ.

ನಾನು ಮಂಡಿಸಿದಷ್ಟು ಆಯವ್ಯಯ ಯಾರೂ ಮಂಡಿಸಿಲ್ಲ...!

ನಾನು ಜನಪರವಾಗಿ ರಾಜ್ಯದ ಹಿತವನ್ನು ಕಾಪಾಡಿದ್ದರಿಂದಲೇ ನನಗೆ ಇಷ್ಟೂ ಅವಕಾಶ ಸಿಕ್ಕಿದೆ ನೀವು ಎಷ್ಟೇ ಟೀಕೆ ಟಿಪ್ಪಣಿ ಮಾಡಿದರೂ ತಲೆಕೆಡಿಸಿಕೊಳ್ಳುವುದಿಲ್ಲ ಎಂದು ಹೇಳಿದರು.

ಒಕ್ಕೂಟ ವ್ಯವಸ್ಥೆಗೆ ಒಂದು ಅರ್ಥವಿದೆ: ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ಹೋಲಿಕೆ ಮಾಡಿಕೊಳ್ಳಬಾರದೆಂದು ಪ್ರತಿಪಕ್ಷದ ನಾಯಕರು ಹೇಳುತ್ತಾರೆ. ನಾವು ಒಕ್ಕೂಟ ವ್ಯವಸ್ಥೆಯನ್ನು ಒಪ್ಪಿಕೊಂಡಿದ್ದೇವೆ. ರಾಜ್ಯ ಸರ್ಕಾರಗಳು ಆರ್ಥಿಕವಾಗಿ ಸದೃಢವಾದರೆ ಕೇಂದ್ರ ಸರ್ಕಾರವು ಸದೃಢವಾಗುತ್ತದೆ. ಅದೇ ರೀತಿ ಕೇಂದ್ರ ಸರ್ಕಾರ ಸದೃಢವಾದರೆ ರಾಜ್ಯಗಳು ಪ್ರಬಲವಾಗುತ್ತವೆ ಇದನ್ನೇ ಒಕ್ಕೂಟ ವ್ಯವಸ್ಥೆ ಎಂದು ಹೇಳುವುದು. ಟೀಕೆ ಮಾಡಲೇ ಬಾರದು ಎಂದರೆ ಹೇಗೆ? ಎಂದು ತರಾಟೆಗೆ ತೆಗೆದುಕೊಂಡರು.

ರಾಜ್ಯ ಸರ್ಕಾರದ ಬಜೆಟ್‌ನ್ನು ನಾವು ಮುನ್ಸಿಪಾಲಿಟಿಗೆ ಹೋಲಿಕೆ ಮಾಡಲು ಆಗುವುದಿಲ್ಲ. ಕೇಂದ್ರ ಸರ್ಕಾರಕ್ಕೆ ಹೋಲಿಕೆ ಮಾಡಲೇಬೇಕಾಗುತ್ತದೆ. ಕರ್ನಾಟಕದಿಂದ ಪ್ರತಿ ವರ್ಷ ಕೇಂದ್ರಕ್ಕೆ ಲಕ್ಷಾಂತರ ಕೋಟಿ ತೆರಿಗೆಯನ್ನು ಪಾವತಿಸುತ್ತೇವೆ.

2025–26ರಲ್ಲಿ ಕರ್ನಾಟಕ ಕೇಂದ್ರಕ್ಕೆ 5 ಲಕ್ಷ ಕೋಟಿಗೂ ಹೆಚ್ಚು ತೆರಿಗೆಯನ್ನು ಪಾವತಿಸಿದೆ. ಆದರೆ ನಮಗೆ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಬರುವುದು ಅತ್ಯಲ್ಪ. ನಮ್ಮ ರಾಜ್ಯಕ್ಕೆ ಅನ್ಯಾಯ ವಾದಾಗ ನಾವು ಪ್ರಶ್ನೆ ಮಾಡಲೇಬೇಕಾಗುತ್ತದೆ. ಹಣಕಾಸು ಆಯೋಗ ಇರುವುದು ಏಕೆ ಟೀಕೆ ಮಾಡದಿದ್ದರೆ ಅದು ಸರ್ವಾಧಿಕಾರಿ ಧೋರಣೆ ಆಗುತ್ತದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮುಖ್ಯಮಂತ್ರಿಗಳು ವಿಮಾನ ಪ್ರಯಾಣ ಮತ್ತು ಹೆಲಿಕಾಪ್ಟರ್ ಪ್ರಯಾಣಕ್ಕೆ ದುಂದು ವೆಚ್ಚ ಮಾಡಿದ್ದಾರೆಂದು ಪ್ರತಿಪಕ್ಷದ ನಾಯಕರು ಆರೋಪ ಮಾಡಿದ್ದಾರೆ.

ಸಮಯ ಉಳಿಸಲು ವಿಮಾನ ಬೇಕು: ನಾನು ಮೂರು ವರ್ಷಗಳ ಅವಧಿಯಲ್ಲಿ ಎಷ್ಟು ಖರ್ಚು ಮಾಡಿದ್ದೇನೋ ಬಸವರಾಜ ಬೊಮ್ಮಾಯಿ ಅವರು 2022–23ರಲ್ಲಿ 37 ಕೋಟಿ ರೂ. ವಿಮಾನದಲ್ಲಿ ಪ್ರಯಾಣಿಸಲು ಖರ್ಚು ಮಾಡಿದ್ದಾರೆ. ನಾನು 2023ರಿಂದ ಈವರೆಗೂ ಮಾಡಿರುವ ಖರ್ಚು ಅತ್ಯಲ್ಪ. ನಾವು ಮಾಡಿದರೆ ದುಂದುವೆಚ್ಚ. ಹಾಗಾದರೆ ಬಿಜೆಪಿಯವರು ಮಾಡುವುದು ಏನು ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

ಪ್ರಧಾನಿ ನರೇಂದ್ರಮೋದಿ ಅವರು ವಿದೇಶ ಪ್ರವಾಸಕ್ಕಾಗಿ 814 ಕೋಟಿ ಹಣವನ್ನು ವೆಚ್ಚ ಮಾಡಿದ್ದಾರೆ. ಕೆಲವು ಸಂದರ್ಭಗಳಲ್ಲಿ ಸಮಯ ಉಳಿಸಲು ನಾವು ವಿಮಾನ ಇಲ್ಲವೇ ಹೆಲಿಕಾಪ್ಟರ್‌ನಲ್ಲಿ ಪ್ರಯಾಣಿಸಬೇಕಾಗುತ್ತದೆ. ಇದು ಅನಿವಾರ್ಯತೆಯೂ ಹೌದು ಎಂದು ಮುಖ್ಯಮಂತ್ರಿ ಸಮರ್ಥನೆ ಮಾಡಿಕೊಂಡರು.

ಐಪಿಎಲ್ ನೋಡಲು ನಮಗೆ, ನಮ್ಮ ಕುಟುಂಬಕ್ಕೆ ಟಿಕೆಟ್ ಕೊಡಿಸಿ...!

■ ವಿಧಾನಸಭೆಯಲ್ಲಿ ಶಾಸಕರ ಒಕ್ಕೊರಲ ಆಗ್ರಹ ■ ಇದಕ್ಕೆ ಸ್ಪೀಕರ್ ಖಾದರ್ ಒತ್ತಾಸೆ ■ ಕ್ರಮಕ್ಕೆ ಡಿಸಿಎಂ ಡಿ.ಕೆ.ಶಿವಕುಮಾರ್ ಸಮ್ಮತಿ

ಬೆಂಗಳೂರು, ಮಾ.26(ಕೆಎಂಶಿ)– ನಗರದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಇದೇ ತಿಂಗಳ 28ರಿಂದ ಆರಂಭವಾಗುತ್ತಿರುವ ಐಪಿಎಲ್ ಕ್ರಿಕೆಟ್ ಪಂದ್ಯಾವಳಿ ವೀಕ್ಷಿಸಲು ಶಾಸಕರು ಮತ್ತು ಅವರ ಕುಟುಂಬದವರಿಗೆ ಟಿಕೆಟ್ ನೀಡಬೇಕೆಂದು ವಿಧಾನಸಭೆಯಲ್ಲಿಂದು ಪಕ್ಷಾತೀತವಾದ ಆಗ್ರಹ ಕೇಳಿ ಬಂತು.

ಬೆಂಗಳೂರು ಅಭಿವೃದ್ಧಿಯ ಕುರಿತು ವಿಧಾನಸಭೆಯಲ್ಲಿ ನಡೆದ ಚರ್ಚೆಗೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಉತ್ತರ ನೀಡುತ್ತಿದ್ದಾಗ ಬೆಂಗಳೂರಿನ ಜಕ್ಕೂರಿನಲ್ಲಿರುವ ವಿಮಾನ ಹಾರಾಟ ತರಬೇತಿ ಕೇಂದ್ರವನ್ನು ಸ್ಥಳಾಂತರಿಸಲು ಪ್ರಯತ್ನಗಳಾಗುತ್ತಿವೆ. ಅದಕ್ಕೆ ಅವಕಾಶ ನೀಡಬಾರದು ಎಂದು ಆಗ್ರಹಿಸಲಾಯಿತು.

ಇದಕ್ಕೆ ಉತ್ತರ ನೀಡಿದ ಡಿ.ಕೆ.ಶಿವಕುಮಾರ್ ಅವರು, ಈ ವಿಚಾರ ಸಂಪುಟದಲ್ಲಿ ಚರ್ಚೆಯಾಗಿದ್ದು ನಿಜ. ಜಕ್ಕೂರಿನ ಏರೋಡ್ರೋಮ್‌ನ ಜಾಗದಲ್ಲಿ ದೆಹಲಿಯಲ್ಲಿರುವ ಭಾರತ್ ಮಂಟಪ್ ಮಾದರಿಯಲ್ಲಿ ಬೃಹತ್ ಸಭಾಂಗಣ ಹಾಗೂ ತಪೋವನ ನಿರ್ಮಿಸುವಂತೆ ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಸಲಹೆ ನೀಡಿದ್ದರು. ಕೇಂದ್ರದಿಂದ 300 ಕೋಟಿ ರೂ.ಗಳ ನೆರವು ನೀಡುವುದಾಗಿಯೂ ಭರವಸೆ ಕೊಟ್ಟಿದ್ದರು. ಆದರೆ ಸಂಪುಟದಲ್ಲಿ ಚರ್ಚೆಯಾದಾಗ ಜಕ್ಕೂರಿನಲ್ಲಿರುವ ವಿಮಾನ ಹಾರಾಟ ತರಬೇತಿ ಕೇಂದ್ರವನ್ನು ಸ್ಥಳಾಂತರ ಮಾಡಲು ಮುಂದಾದರೆ, ಬಿಲ್ಡರ್‌ಗೆ ನೆರವು ನೀಡಲಾಗುತ್ತಿದೆ ಎಂಬ ಆರೋಪ ಕೇಳಿ ಬರುತ್ತವೆ ಎಂದು ಸಚಿವ ಕೃಷ್ಣಭೈರೇಗೌಡ ಆಕ್ಷೇಪಿಸಿದ್ದರು.

ಹೀಗಾಗಿ ಯಾವುದೇ ನಿರ್ಧಾರ ತೆಗೆದುಕೊಳ್ಳದೇ ಮುಖ್ಯಮಂತ್ರಿ ಅವರು ಈ ವಿಚಾರವನ್ನು ಮುಂದೂಡಿದ್ದಾರೆ. ನಾನು ಇರುವವರೆಗೂ ಈ ಬಗ್ಗೆ ಚರ್ಚೆ ಬೇಡ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಸದ್ಯಕ್ಕೆ ತರಬೇತಿ ಕೇಂದ್ರವನ್ನು ಸ್ಥಳಾಂತರ ಮಾಡುವುದಿಲ್ಲ, ಮುಂದೆ ಪರಿಶೀಲನೆ ಮಾಡುತ್ತೇವೆ ಎಂದರು. ಆಗ ಸಚಿವ ಕೆ.ಜೆ.ಜಾರ್ಜ್ ಜಕ್ಕೂರಿನಲ್ಲಿ 35 ರಿಂದ 40 ಜನ ವಿದ್ಯಾರ್ಥಿಗಳು ತರಬೇತಿ ಪಡೆಯುತ್ತಿದ್ದರು. ಪಕ್ಕದಲ್ಲೇ ಹೆದ್ದಾರಿಯ ಮೇಲ್ಸೇತುವೆ ಹಾದು ಹೋಗಿದ್ದರಿಂದ ಡಿಜಿಸಿಎ ವಿಮಾನ ಹಾರಾಟಕ್ಕೆ ಪರವಾನಗಿ ನೀಡುತ್ತಿಲ್ಲ. ಮೇಲ್ಸೇತುವೆಯನ್ನು ಒಡೆದು ಹಾಕುವಂತೆ ಹಿಂದೆ ರಾಷ್ಟ್ರೀಯ ಹೆದ್ದಾರಿ ಸಚಿವ ಜಾರ್ಜ್ ಫರ್ನಾಂಡಿಸ್ ಅವರಿಗೆ ಮನವಿ ಮಾಡಿದ್ದೇವೆ. ಆದರೆ ಅವರು ಒಪ್ಪಿಕೊಳ್ಳಲಿಲ್ಲ. ಸದರಿ ಜಾಗದಿಂದ ತರಬೇತಿ ಕೇಂದ್ರವನ್ನು ಬೇರೆ ಕಡೆಗೆ ಸ್ಥಳಾಂತರ ಮಾಡಿ, ಅಲ್ಲಿ 1 ಲಕ್ಷ ಆಸನ ಸಾಮರ್ಥ್ಯದ ಕ್ರಿಕೆಟ್ ಕ್ರೀಡಾಂಗಣ ನಿರ್ಮಿಸಬೇಕೆಂಬ ಸಲಹೆ ನೀಡಲಾಗಿತ್ತು ಎಂದು ಹೇಳಿದರು.

ಆಗ ವಿಪಕ್ಷ ನಾಯಕ ಆರ್.ಅಶೋಕ್ ಅವರು, ಅಲ್ಲಿ ಕ್ರಿಕೆಟ್ ಸ್ಟೇಡಿಯಂ ನಿರ್ಮಿಸಿದರೆ, 50 ರಿಂದ 60 ಸಾವಿರ ಕಾರುಗಳು ಸಂಚರಿಸುತ್ತವೆ, ಏರ್ಪೋರ್ಟ್‌ನ ಸಂಚಾರಕ್ಕೆ ತೊಂದರೆಯಾಗುತ್ತದೆ. ಕರ್ನಾಟಕ ಕ್ರಿಕೆಟ್ ಸಂಸ್ಥೆಯ ಬಳಿ ಸಾವಿರಾರು ಕೋಟಿ ರೂ.ಹಣ ಇದೆ. ಅವರಿಗೆ ಸರ್ಕಾರದಿಂದ ಸ್ಟೇಡಿಯಂ ಕಟ್ಟಿಸಿಕೊಡುವ ಅಗತ್ಯ ಇಲ್ಲ. ದೇಶದಲ್ಲೇ ಕರ್ನಾಟಕದಲ್ಲಿ ಮೊದಲ ವಿಮಾನ ಹಾರಾಟ ತರಬೇತಿ ಕೇಂದ್ರ ಜಕ್ಕೂರಿನಲ್ಲಿ ನಿರ್ಮಾಣವಾಗಿದೆ. ಅದಕ್ಕೆ ಐತಿಹಾಸಿಕ ಹಿನ್ನೆಲೆ ಇದೆ. ಅದನ್ನು ಮುಚ್ಚಬೇಡಿ ಎಂದು ಅಗ್ರಹಿಸಿದರು.

ಮುಂದುವರೆದು ಅವರು, ಕ್ರಿಕೆಟ್ ನೋಡಲು ನಾವು ಒಂದು ಟಿಕೆಟ್‌ಗಾಗಿ ಅಂಗಲಾಚುವ ಪರಿಸ್ಥಿತಿ ಇದೆ. ಅವರಿಗೆ ಮತ್ತೆ ಸ್ಟೇಡಿಯಂ ಕಟ್ಟಿಕೊಡುವ ಅಗತ್ಯ ಇಲ್ಲ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕ್ರಿಕೆಟ್ ತರಬೇತಿಗಾಗಿ 16 ಎಕರೆ 32 ಗುಂಟೆ ಜಮೀನನ್ನು ತಿಂಗಳಿಗೆ 1600 ರೂ. ಬಾಡಿಗೆಯಂತೆ ನೀಡಲಾಗಿದೆ. ಅಲ್ಲಿ ಪಂದ್ಯಾವಳಿಗಳನ್ನು ನಡೆಸಿ ದುಡ್ಡು ಮಾಡುತ್ತಿದ್ದಾರೆ. ಜೊತೆಗೆ ಸಿಎಲ್–4 ಲೈಸೆನ್ಸ್ ನೀಡಿದೆ, ಮದ್ಯ ಮಾರಾಟ ಮಾಡುತ್ತಿದ್ದಾರೆ. ಅದನ್ನು ಟೈಟ್ ಮಾಡಿ, ದಾರಿಗೆ ಬರುತ್ತಾರೆ ಎಂದು ಸಲಹೆ ನೀಡಿದರು.

ಸಿಗುತ್ತೆ ಅಂತಾ ಖರೀದಿಗೆ ಮುನ್ನಾ ಎಚ್ಚರ...!?


ಬದಲಿಸಿ, ಮಾರ್ಪಾಡು ಮಾಡಿರುವ ಸಾಧ್ಯತೆ ಇರುವಂತೆಯೂ ಕಾಣು ತ್ತಿದೆ ಎಂದು ಅನುಮಾನ ವ್ಯಕ್ತಪಡಿಸಿದರು.

ಕಾರ್ ಡೀಲಿಂಗ್: ಬನ್ನಿಮಂಟಪದ ಲ್ಲಿನ ಗ್ಯಾರೇಜ್‌ವೊಂದರಲ್ಲಿ ಕೆಲಸ ಮಾಡುತ್ತಿರುವ ಆರೋಪಿಗಳಾದ ಮುಜಾಹಿದ್ ಪಾಷ ಮತ್ತು ಷಾಹಬುದ್ದಿನ್, ಗ್ಯಾರೇಜ್‌ಗೆ ಕಾರ್ ರಿಪೇರಿಗೆಂದು ಬರುವವರಿಗೆ ನಮ್ಮಲ್ಲಿ ಐಷಾರಾಮಿ ಕಾರನ್ನು ಕಡಿಮೆ ಬೆಲೆಗೆ ಮಾರಾಟ ಮಾಡುತ್ತೇವೆ ಎಂದು ಡೀಲಿಂಗ್ ಮಾಡು ತ್ತಿದ್ದರು ಎಂಬುದು ತಿಳಿದು ಬಂದಿದೆ ಎಂದರು.

ಶ್ಲಾಘನೆ: ಪ್ರಕರಣ ದಾಖಲಾದ ಕೂಡಲೇ ಕಾರ್ಯಾಚರಣೆಗಿಳಿದ ಬನ್ನೂರು ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಸತೀಶ, ಪಿಎಸ್‌ಐ ಸುದರ್ಶನ್, ಎಎಸ್‌ಐ ಸತೀಶ್, ಕಾನ್ಸ್‌ಟೇಬಲ್‌ಗಳಾದ ಅಬ್ದುಲ್ ಲತೀಫ್, ಎನ್.ಎ.ಅಶೋಕ, ಹಾಗೂ ಭಾಸ್ಕರ್ ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದು, ಇಲಾಖೆ ವತಿಯಿಂದ ಸೂಕ್ತ ಬಹುಮಾನ ನೀಡಲಾಗುವುದು ಎಂದು ಶ್ಲಾಘಿಸಿದರು. ಎಎಸ್‌ಪಿಗಳಾದ ಮಲ್ಲಿಕ್, ಎಲ್.ನಾಗೇಶ್ ಮತ್ತಿತರರಿದ್ದರು.

ಮೈಸೂರು ಭಾರತ ದರ್ಶನ ಮಾದರಿ

• ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಪ್ರಶಂಸೆ • ನಾಲ್ವಡಿ ಕೃಷ್ಣರಾಜ ಒಡೆಯರ್ ಆಳ್ವಿಕೆ ಹಲವು ಪ್ರಥಮಗಳಿಗೆ ನಾಂದಿ; ಸ್ಮರಣೆ





ಏಕಾತ್ಮ ಮಾನವ ದರ್ಶನ' ಭಾರತದ ವಿಶ್ವದೃಷ್ಟಿ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಮಾತನಾಡಿದರು. ಮತ್ತೊಂದು ಚಿತ್ರದಲ್ಲಿ ಕಾರ್ಯಕ್ರಮದಲ್ಲಿ **'Book of Abstracts'** ಮತ್ತು **'Photo Album of International Conference on Swaraj'** ಕೃತಿಗಳನ್ನು ಬಿಡುಗಡೆಗೊಳಿಸಲಾಯಿತು.

ಮೈಸೂರು, ಮಾ.26(ವಿವಿಹೆಚ್)– ಮೈಸೂರು ಸಂಸ್ಥಾನದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಸ್ವಾತಂತ್ರ್ಯ ಪೂರ್ವದಲ್ಲಿಯೇ ಪ್ರಜಾಪ್ರತಿನಿಧಿ ಸಭೆ ಮೂಲಕ ಪ್ರಜಾಪ್ರಭುತ್ವ ಅನುಷ್ಠಾನಗೊಳಿಸಿದ್ದರು ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಸ್ಮರಿಸಿದರು.

ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಘಟಿಕೋತ್ಸವ ಭವನದಲ್ಲಿ ಪ್ರಜ್ಞಾ ಪ್ರವಾಹ ಮತ್ತು ಶ್ಯಾಮ್ ಪ್ರಸಾದ್ ಮುಖರ್ಜಿ ಸಂಶೋಧನಾ ಪ್ರತಿಷ್ಠಾನದ ವತಿಯಿಂದ ಆಯೋಜಿಸಿರುವ 'ಏಕಾತ್ಮ ಮಾನವ ದರ್ಶನ' ಭಾರತದ ವಿಶ್ವದೃಷ್ಟಿ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಅವರು ಮಾತನಾಡಿದರು.

ರಾಜರ್ಷಿ ನಾಲ್ವಡಿ ಅವರು ಶಿಕ್ಷಣ ಸಂಸ್ಥೆ ಮತ್ತು ಬೃಹತ್ ಕೈಗಾರಿಕೆಗಳ ಸ್ಥಾಪನೆ, ಕೆಆರ್‌ಎಸ್ ಅಣೆಕಟ್ಟೆ, ಪಾರಂಪರಿಕಾ ಕಟ್ಟಗಳ ನಿರ್ಮಾಣ ಸೇರಿದಂತೆ ನೀರಾವರಿ ಯೋಜನೆಗಳ ಜಾರಿ, ಬಡವರ ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದ್ದರು. ಅವರು ಸ್ಥಾಪಿಸಿದ್ದ ಭಾರತೀಯ ವಿಜ್ಞಾನ ಸಂಸ್ಥೆಯು ಆಧುನಿಕ ಭಾರತದ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸಿತ್ತು ಎಂದು ಸ್ಮರಿಸಿದರು.

ಭಾರತೀಯ ವ್ಯವಸ್ಥೆಯಲ್ಲಿನ ಹಲವಾರು ವಿಚಾರಗಳನ್ನು ಮೈಸೂರು ಸಂಸ್ಥಾನದಿಂದ ಎರವಲು ಪಡೆದಿದ್ದೇವೆ. ಅಂದಿನ ಕಾಲದಲ್ಲಿಯೇ ಸ್ವಚ್ಛತೆ ನಿರ್ವಹಣೆಗಾಗಿ ಮೈಸೂರು ಹೆಸರುವಾಸಿಯಾಗಿತ್ತು. ಈ ಹಿಂದೆಯೇ ಚತುಷ್ಪಥ ರಸ್ತೆಗಳು, ಉದ್ಯಾನಗಳು, ಮೈಸೂರು ಸಂಸ್ಥಾನಕ್ಕೆ ಒಳಪಟ್ಟಿದ್ದ ಮೈಸೂರು, ಬೆಂಗಳೂರು ನಗರಗಳಲ್ಲಿದ್ದವು. ಪರಿಸರ, ಸ್ವಚ್ಛತೆ, ಮಹಿಳಾ ಸಬಲೀಕರಣದ ಜೊತೆಗೆ ವಿಶ್ವವಿದ್ಯಾಲಯದ ಮೂಲಕ ಬೌದ್ಧಿಕ ಚಳವಳಿಯು ನಾಲ್ವಡಿ ಅವರ ಕಾಲದಲ್ಲಿ ಇಲ್ಲಿ ನಡೆಯಿತು. ಇಂದು ಮೈಸೂರು ಭಾರತ ದರ್ಶನದ ಮಾದರಿಯಾಗಿದೆ ಎಂದರು.

> ಮನುಷ್ಯನ ಸಾಮಾಜಿಕ ಜೀವನದಲ್ಲಿ ಏಕತ್ವ ಭಾವ ಮೂಡಬೇಕು ಎಂದು ದೀನದಯಾಳ ಉಪಾಧ್ಯಾಯರು ಪ್ರತಿಪಾದಿಸಿದ ತತ್ವವೇ ಏಕಾತ್ಮ ಮಾನವ ದರ್ಶನ ತತ್ವ.
> -ಧರ್ಮೇಂದ್ರ ಪ್ರಧಾನ್,
> ಕೇಂದ್ರ ಶಿಕ್ಷಣ ಸಚಿವ.

ಭಾರತದ ದಾರ್ಶನಿಕ ನೀತಿಗಳು, ಸಮಾಜ ಸುಧಾರಣಾ ಕ್ರಮಗಳು, ಆರ್ಥಿಕತೆ, ಸಾಮಾಜಿಕ ಬದ್ಧತೆ ಹಾಗೂ ರಾಜನೀತಿ ಸೇರಿದಂತೆ ಹತ್ತು ಹಲವು ಆಯಾಮಗಳಲ್ಲಿ ಮೈಸೂರು ಸಂಸ್ಥಾನ ದೇಶಕ್ಕೆ ಮಾದರಿಯಾಗಿತ್ತು. ಹಾಗೆಯೇ ಭಾರತೀಯ ಸಂಸ್ಕೃತಿ, ಪರಂಪರೆಯ ಸಾವಿರಾರು ವರ್ಷಗಳ ಜ್ಞಾನವನ್ನು, ಬಸವಣ್ಣ, ಸ್ವಾಮಿ ವಿವೇಕಾನಂದ, ಅರಬಿಂದೋ, ರವೀಂದ್ರ ನಾಥ ಟ್ಯಾಗೋರ್, ಮಹಾತ್ಮ ಗಾಂಧೀಜಿ, ಶ್ಯಾಮಪ್ರಸಾದ್ ಮುಖರ್ಜಿ, ದೀನದಯಾಳ್ ಉಪಾಧ್ಯಾಯರ ತತ್ವಗಳಲ್ಲಿ ಕಾಣಬಹುದಾಗಿದೆ ಎಂದರು.

ದೀನದಯಾಳ್ ಉಪಾಧ್ಯಾಯರು ಏಕಾತ್ಮ ಮಾನವ ದರ್ಶನದಲ್ಲಿ ಮಾನವನ ಸಮಗ್ರತೆಯನ್ನು ಗುರುತಿಸಿದ್ದರು. ಅದರ ಆಧಾರಿತವಾಗಿಯೇ ಹಲವು ಯೋಜನೆಗಳನ್ನು ಕೇಂದ್ರ ಸರ್ಕಾರದ ವತಿಯಿಂದ ರೂಪಿಸಲಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಭಾರತವನ್ನು 2047ರ ಹೊತ್ತಿಗೆ ವಿಕಸಿತ ಭಾರತವನ್ನಾಗಿಸಬೇಕು ಎಂದು ಕರೆಕೊಟ್ಟಿದ್ದಾರೆ. ಮೆಕಾಲೆ ಶಿಕ್ಷಣ ಪದ್ಧತಿಯು ಭಾರತ ಶೈಕ್ಷಣಿಕ ವ್ಯವಸ್ಥೆಯಲ್ಲಿ ಬೇರುಗಳನ್ನು ಬಿಟ್ಟಿದೆ. ಸ್ವಾತಂತ್ರ್ಯ ನಂತರವೂ ಮೆಕಾಲೆ ನೀತಿ ದೇಶಕ್ಕೆ ಹಾನಿ ಮಾಡಿದೆ. ಹೊಸ ರಾಷ್ಟ್ರೀಯ ಶಿಕ್ಷಣ ನೀತಿ 2020 ಜಾರಿಗೊಳಿಸುವ ಮೂಲಕ ಭಾರತೀಯ ಶಿಕ್ಷಣದಲ್ಲಿ ಪ್ರಾದೇಶಿಕ ಭಾಷೆಗಳಲ್ಲಿ ಕಲಿಕೆಗೆ ಆದ್ಯತೆ ನೀಡಲಾಗಿದೆ ಎಂದರು.

ಭಾರತೀಯ ವಿಚಾರಧಾರೆಯು ನಿರಂತರವಾದ ಜ್ಞಾನಪ್ರವಾಹ. ಯಾವ ಚಿಂತನೆ ಸಾವಿರಾರು ವರ್ಷಗಳಿಂದ ನಾಗರಿಕತೆಯ ಭಾಗವಾಗಿ ಬಂದಿದೆಯೋ ಅದು ಇಂದಿಗೂ ಸಮಯಕ್ಕೆ ಅನುಸಾರ ಅದರ ರೂಪವನ್ನು ಬದಲಿಸಿ ಕೊಳ್ಳುತ್ತಾ ಸಾಗುತ್ತಿದೆ. ಯಾವುದೇ ತತ್ತ್ವಕ್ಕೆ ಒಂದು ಕೃತಿ ರೂಪವಿರುತ್ತದೆ. ಭಾರತೀಯ ವಿಶ್ವದರ್ಶನವನ್ನು ಲೋಕ ಭಾಷೆಯಲ್ಲಿ ನೀಡಬೇಕು. ಸಾಮಾನ್ಯ ಜನರೂ ಅದನ್ನು ಅಳವಡಿಸಿಕೊಳ್ಳುವಂತಾಗಬೇಕು ಎಂದರು.

ಸಂಶೋಧಕ ಡಾ.ಎಂ.ಎಸ್.ಚೈತ್ರ ಮಾತನಾಡಿ, ನಮ್ಮ ರಾಷ್ಟ್ರದ ಶಿಕ್ಷಣ ಪದ್ಧತಿಯ ತಳಹದಿ ಗುರುಶಿಷ್ಯ ಪರಂಪರೆ. ಅದರ ಆಧಾರದ ಮೇಲೆಯೇ ನಮ್ಮ ಸಂಸ್ಥೆಗಳನ್ನು ಭಾರತೀಯಕರಣಗೊಳಿಸಬೇಕು ಎಂದು ಅಭಿಪ್ರಾಯಪಟ್ಟರು.

ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ಶ್ಯಾಮ್ ಪ್ರಸಾದ್ ಮುಖರ್ಜಿ ಸಂಶೋಧನಾ ಪ್ರತಿಷ್ಠಾನದ ಟ್ರಸ್ಟಿ ಎಂ.ಮದನ್ ಗೋಪಾಲ್ ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	**(ದೂ: 2521923)**
ಉಸ್ತಾದ್ ಭಗತ್ ಸಿಂಗ್(ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	**(ದೂ: 2422871)**
ಲವ್ ಮಾಕ್ಟೇಲ್–3 (ಕ)	4 ಪ್ರದರ್ಶನಗಳು
ಬಾಲಾಜಿ	**(ದೂ: 2497199)**
ಓ ರೋಮಿಯೋ (ಹಿ)	3 ಪ್ರದರ್ಶನಗಳು
ಮಹದೇಶ್ವರ	**(ಮೊ:9900820093)**
ಧುರಂದರ್–2 (ಕ)	3 ಪ್ರದರ್ಶನಗಳು
ಗಾಯಿತ್ರಿ	
ಧುರಂದರ್–2 (ಕ)	3 ಪ್ರದರ್ಶನಗಳು
ರಾಜಕಮಲ್	
ಯೂತ್ (ತ) + ಉಸ್ತಾದ್ ಭಗತ್ ಸಿಂಗ್ (ತೆ)	2+2 ಪ್ರದರ್ಶನಗಳು
ಸಂಗಂ	
ಧುರಂದರ್–2 (ಕ)	3 ಪ್ರದರ್ಶನಗಳು
ಲಿಡೋ	
ಧುರಂದರ್–2 (ಕ)	3 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಆಯುಧ (ಕ)	4 ಪ್ರದರ್ಶನಗಳು

ಒಳಮೀಸಲಾತಿ ಹಂಚಿಕೆ ವಿಚಾರ ಚರ್ಚೆಗೆ

ಇಂದು ನಿಗದಿಯಾಗಿದ್ದ ವಿಶೇಷ ಸಂಪುಟ ಸಭೆ ಮುಂದೂಡಿಕೆ

ಬೆಂಗಳೂರು, ಮಾ.26– ಪರಿಶಿಷ್ಟ ಜಾತಿಯಲ್ಲಿ ಒಳಮೀಸಲಾತಿ ಜಾರಿಗೊಳಿಸುವ ಸಂಬಂಧ ಚರ್ಚಿಸಲು ಶುಕ್ರವಾರ (ಮಾ.27) ನಿಗದಿಯಾಗಿದ್ದ ವಿಶೇಷ ಸಚಿವ ಸಂಪುಟ ಸಭೆಯನ್ನು ಉಪಚುನಾವಣೆ ಹಿನ್ನೆಲೆಯಲ್ಲಿ ಮುಂದೂಡಲಾಗಿದೆ.

ಮಾ.5ರಂದು ನಡೆದಿದ್ದ ಸಚಿವ ಸಂಪುಟ ಸಭೆಯಲ್ಲಿ ಒಳಮೀಸಲಾತಿ ಹಂಚಿಕೆ ಕುರಿತು ಸಂಪುಟ ಸದಸ್ಯರ ನಡುವೆ ಒಮ್ಮತ ಮೂಡದ ಕಾರಣ ಯಾವುದೇ ನಿರ್ಧಾರಕ್ಕೆ ಬರಲು ಸಾಧ್ಯವಾಗಿರಲಿಲ್ಲ. ಬಳಿಕ ಪರಿಶಿಷ್ಟ ಜಾತಿ ಸಚಿವರು ಮತ್ತು ಶಾಸಕರು ಮಾ.10ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ವಿಧಾನ ಸೌಧದಲ್ಲಿ ಭೇಟಿಯಾಗಿ, ತ್ವರಿತವಾಗಿ ಒಳಮೀಸಲಾತಿ ಜಾರಿ ಮಾಡುವಂತೆ ಒತ್ತಾಯಿಸಿದ ಹಿನ್ನೆಲೆಯಲ್ಲಿ ನಾಳೆ(ಮಾ.27)ಗೆ ವಿಶೇಷ ಸಭೆ ನಿಗದಿಪಡಿಸಲಾಗಿತ್ತು.

ಆದರೆ ಬಾಗಲಕೋಟೆ ಮತ್ತು ದಾವಣಗೆರೆ ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆ ಹಿನ್ನೆಲೆಯಲ್ಲಿ ಚುನಾವಣೆ ಆಯೋಗ ಮಾದರಿ ನೀತಿ ಸಂಹಿತೆ ಜಾರಿಗೊಳಿಸಿದ್ದು, ಈ ಕಾರಣ ನೀಡಿ ಸಭೆ ಮುಂದೂಡಲಾಗಿದೆ.

ನದಿ ದಡದ 46 ಮರಗಳ ಕಡಿತಲೆ ಪ್ರಕರಣ; ಆರೋಪಿ ಬಂಧನ



ನದಿ ತೀರದಲ್ಲಿ ಮರಗಳನ್ನು ಅಕ್ರಮವಾಗಿ ಕಡಿದ ಆರೋಪದಡಿ ಬಂಧಿಸಿರುವ ಆರೋಪಿಯೊಂದಿಗೆ ಅರಣ್ಯಾಧಿಕಾರಿಗಳು.

ಮೈಸೂರು, ಮಾ.26– ಕಾಡು ಮರಗಳನ್ನು ಅಕ್ರಮವಾಗಿ ಕಡಿದ ಪ್ರಕರಣದಲ್ಲಿ ಓರ್ವನನ್ನು ಅರಣ್ಯ ಇಲಾಖೆ ಅಧಿಕಾರಿಗಳು ಗುರುವಾರ ಬಂಧಿಸಿದ್ದಾರೆ.

ನಂಜನಗೂಡು ತಾಲೂಕು, ಚಿಕ್ಕಯ್ಯನ ಛತ್ರ ಹೋಬಳಿಯ ಆಲತ್ತೂರು ಗ್ರಾಮದ ಕೃಷ್ಣ(45) ಬಂಧಿತ ಆರೋಪಿಯಾಗಿದ್ದು, ಇತರೆ ಆರೋಪಿಗಳ ಬಂಧನಕ್ಕೆ ಶೋಧ ಮುಂದುವರೆಸಲಾಗಿದೆ.

ಚಿಕ್ಕಯ್ಯನಛತ್ರ ಹೋಬಳಿ ಹೆಜ್ಜಿಗೆ ಗ್ರಾಮದ ಕಪಿಲಾ ನದಿ ದಡದಲ್ಲಿ ಆಲ, ಹೊಂಗೆ, ರೈನ್ ಟ್ರೀ, ನೇರಳೆ, ಹೊಳೆಮತ್ತಿ (ಮೀಸಲು) ಇನ್ನಿತರ ಜಾತಿಯ ಒಟ್ಟು 46 ಮರಗಳನ್ನು ಅಕ್ರಮವಾಗಿ ಕಡಿದಿರುವ ಬಗ್ಗೆ ನಂಜನಗೂಡು ಪ್ರಾದೇಶಿಕ ವಲಯ ಅರಣ್ಯಾಧಿಕಾರಿ ಕಚೇರಿಯಲ್ಲಿ ಮಾ.8ರಂದು ಪ್ರಕರಣ ದಾಖಲಾಗಿತ್ತು.

ಈ ಸಂಬಂಧ ತಲೆಮರೆಸಿಕೊಂಡಿದ್ದ ಆರೋಪಿಗಳ ಪತ್ತೆಗೆ ಅರಣ್ಯಾಧಿಕಾರಿಗಳು ಶೋಧ ನಡೆಸುವ ವೇಳೆ ಹಳೆಬೊಕ್ಕಹಳ್ಳಿ ಗ್ರಾಮದಲ್ಲಿ ಕೃಷ್ಣನನ್ನು ಬಂಧಿಸಲಾಗಿದೆ. ಈತನನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಿದ ನಂತರ 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಮೈಸೂರು–ಬೆಂಗಳೂರು ನಿತ್ಯ ಪ್ರಯಾಣಿಕರಿಗೆ ಕೆಂಗೇರಿಯಿಂದ ಟ್ರಾಫಿಕ್ ಸಂಕಷ್ಟ ಹಿನ್ನೆಲೆ

ಚಾಮರಾಜಪೇಟೆಯಿಂದ ಕೆಂಗೇರಿವರೆಗೆ ಬಿಜಿಎಸ್ ಮೇಲ್ಸೇತುವೆ ವಿಸ್ತರಣೆಗೆ ಶಾಸಕ ಜಿ.ಟಿ.ದೇವೇಗೌಡರ ಆಗ್ರಹ

ಈ ಸಂಬಂಧ ಶೀಘ್ರ ಸಂಪುಟದಲ್ಲಿ ಚರ್ಚಿಸಿ ಕ್ರಮದ ಭರವಸೆ ನೀಡಿದ ಡಿಸಿಎಂ ಶಿವಕುಮಾರ್

ಬೆಂಗಳೂರು, ಮಾ.26– ಮೈಸೂರು–ಬೆಂಗಳೂರು ಪ್ರಯಾಣಿಕರಿಗೆ ಅನುಕೂಲವಾಗುವಂತೆ ಬಿಜಿಎಸ್ ಮೇಲ್ಸೇತುವೆಯನ್ನು ಕೆಂಗೇರಿವರೆಗೆ ವಿಸ್ತರಣೆ ಮಾಡುವಂತೆ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು (ಜಿಟಿಡಿ) ಮನವಿ ಮಾಡಿದರು.



ಡಿ.ಕೆ.ಶಿವಕುಮಾರ್



ಜಿ.ಟಿ.ದೇವೇಗೌಡರು

ಸದನದಲ್ಲಿ ಮಾತನಾಡಿದ ಜಿಟಿಡಿ, ಎಕ್ಸ್‌ಪ್ರೆಸ್ ವೇ ನಿರ್ಮಾಣದ ಬಳಿಕ ಮೈಸೂರಿನಿಂದ ಒಂದೂವರೆ ಗಂಟೆಯಲ್ಲಿ ಬೆಂಗಳೂರಿನ ಕೆಂಗೇರಿವರೆಗೆ ತಲುಪಬಹುದು. ಆದರೆ ವಿಪರೀತ ಟ್ರಾಫಿಕ್ ಜಾಮ್‌ನಿಂದಾಗಿ ಕೆಂಗೇರಿಯಿಂದ ಬೆಂಗಳೂರು ನಗರಕ್ಕೆ ಬರುವುದಕ್ಕೂ ಒಂದೂವರೆ ಗಂಟೆ ಹಿಡಿಯುತ್ತದೆ. ಇದರಿಂದ ಪ್ರತಿನಿತ್ಯ ಬೆಂಗಳೂರು–ಮೈಸೂರು ನಡುವೆ ಪ್ರಯಾಣಿಸುವವರಿಗೆ ತುಂಬಾ ತೊಂದರೆಯಾಗುತ್ತಿದೆ ಎಂದು ತಿಳಿಸಿದರು.

ಈ ಸಮಸ್ಯೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ಈಗಾಗಲೇ ಬೆಂಗಳೂರು ನಗರದಿಂದ ಚಾಮರಾಜಪೇಟೆವರೆಗೆ ಇರುವ ಬಿಜಿಎಸ್ ಮೇಲ್ಸೇತುವೆಯನ್ನು ಕೆಂಗೇರಿವರೆಗೆ ವಿಸ್ತರಣೆ ಮಾಡಿದರೆ ವಾಹನ ದಟ್ಟಣೆ ಕಡಿಮೆಯಾಗಿ, ಸಾರ್ವಜನಿಕರಿಗೆ ತುಂಬಾ ಉಪಯೋಗವಾಗುತ್ತದೆ. ಈ ಯೋಜನೆಯನ್ನು ತುರ್ತಾಗಿ ಕೈಗೆತ್ತಿಕೊಳ್ಳಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು, ಚಾಮರಾಜಪೇಟೆಯಿಂದ ಕೆಂಗೇರಿವರೆಗೆ ಬಿಜಿಎಸ್ ಮೇಲ್ಸೇತುವೆಯನ್ನು ವಿಸ್ತರಿಸುವ ಸಂಬಂಧ ಆದಷ್ಟು ಬೇಗ ಕ್ಯಾಬಿನೆಟ್‌ನಲ್ಲಿ ಚರ್ಚಿಸಿ, ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಲ್ಯಾಟರಲ್ ಎಂಟ್ರಿ ಪ್ರವೇಶಕ್ಕಾಗಿ ಅರ್ಜಿ ಆಹ್ವಾನ

ಮೈಸೂರು, ಮಾ.26– ಸಿಪೆಟ್ ವತಿಯಿಂದ 2026–27 ಶೈಕ್ಷಣಿಕ ವರ್ಷದ ಲ್ಯಾಟರಲ್ ಎಂಟ್ರಿ (ನೇರ ದ್ವಿತೀಯ ವರ್ಷ) ಪ್ರವೇಶಕ್ಕಾಗಿ ಅರ್ಜಿ ಆಹ್ವಾನಿಸಲಾಗುತ್ತಿದೆ. ಪಿಯುಸಿ (ವಿಜ್ಞಾನ) ಅಥವಾ ಐಟಿಐ ಪೂರ್ಣಗೊಳಿಸಿದ ವಿದ್ಯಾರ್ಥಿಗಳು ಆನ್‌ಲೈನ್ ಅಥವಾ ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ಅಲ್ಲದೆ ಈ ವೃತ್ತಿಪರ ಡಿಪ್ಲೊಮಾ ಕೋರ್ಸ್‌ಗಳಲ್ಲಿ ಪ್ರವೇಶ ಪಡೆದ ಪ್ರತಿಯೊಬ್ಬ ವಿದ್ಯಾರ್ಥಿಗೂ ಅಂತಿಮ ಸೆಮಿಸ್ಟರ್‌ನಲ್ಲಿ ಕ್ಯಾಂಪಸ್ ಆಯ್ಕೆ ಮೂಲಕ ಉದ್ಯೋಗಾವಕಾಶವನ್ನು ಖಚಿತಪಡಿಸಲಾಗುತ್ತದೆ. ಅಧಿಕೃತ ವೆಬ್‌ಸೈಟ್: www.cipet.gov.in ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 9480253024 / 9791431827 ಅನ್ನು ಸಂಪರ್ಕಿಸುವುದು ಎಂದು ಸಿಪೆಟ್‌ನ ಪ್ರಿನ್ಸಿಪಾಲ್ ಮತ್ತು ಮುಖ್ಯಸ್ಥರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆಂಧ್ರ ಪ್ರದೇಶದಲ್ಲಿ ಬಸ್–ಟಿಪ್ಪರ್ ಬೆಂಕಿಗಾಹುತಿ; 13 ಮಂದಿ ದುರ್ಮರಣ

ಆಂಧ್ರ ಪ್ರದೇಶ: ಆಂಧ್ರದ ಮಾರ್ಕಪುರಂ ಜಿಲ್ಲೆಯಲ್ಲಿ ಭೀಕರ ರಸ್ತೆ ಅಪಘಾತ ಸಂಭವಿಸಿದೆ.

ರಾಯವರಂ ಬಳಿಯ ಪಲಕಲಾ ಎಂಬಲ್ಲಿ ಟಿಪ್ಪರ್ ಲಾರಿ ಮತ್ತು ಖಾಸಗಿ ಬಸ್ ಡಿಕ್ಕಿ ಹೊಡೆದು ಎರಡೂ ವಾಹನಗಳಲ್ಲಿ ಬೆಂಕಿ ಕಾಣಿಸಿಕೊಂಡ ಪರಿಣಾಮ ಬಸ್‌ನಲ್ಲಿದ್ದ 13 ಪ್ರಯಾಣಿಕರು ಸಜೀವ ದಹನವಾದರೆ, ಸುಮಾರು 18 ಮಂದಿ ಗಾಯಗೊಂಡಿದ್ದಾರೆ.

ಬಸ್ ಮತ್ತು ಟಿಪ್ಪರ್ ಎರಡೂ ಸಂಪೂರ್ಣ ಸುಟ್ಟು ಕರಕಲಾಗಿವೆ. ಗಾಯಾಳುಗಳನ್ನು ಮಾರ್ಕಪುರಂನ ಖಾಸಗಿ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದ್ದು, ಚಿಕಿತ್ಸೆ ಪಡೆಯುತ್ತಿದ್ದಾರೆ. ಸಾವಿನ ಸಂಖ್ಯೆ ಹೆಚ್ಚುವ ಸಾಧ್ಯತೆ ಇದೆ.

ಹೈದರಾಬಾದ್‌ನಿಂದ ಪಾಮುರು ಕಡೆಗೆ ಸಂಚರಿಸುತ್ತಿದ್ದ ಬಸ್ ಪಲಕಲಾ ಕ್ವಾರಿಗಳ ಬಳಿ ಟಿಪ್ಪರ್ ಲಾರಿಗೆ ಡಿಕ್ಕಿ ಹೊಡೆದಿದೆ ಎಂದು ವರದಿಯಾಗಿದೆ. ಬಸ್‌ನಲ್ಲಿ ಹಿಂಭಾಗ ಕುಳಿತಿದ್ದ ಹಲವರು ಸಾವನ್ನಪ್ಪಿದ್ದಾರೆ. ಮುಂಭಾಗ ಕುಳಿತಿದ್ದ ಸುಮಾರು 10 ಪ್ರಯಾಣಿಕರು ಬದುಕುಳಿದಿದ್ದಾರೆ ಎಂದು ತಿಳಿದು ಬಂದಿದೆ.

ಅಗ್ನಿಶಾಮಕ ಸಿಬ್ಬಂದಿ ಬೆಂಕಿ ನಿಯಂತ್ರಣಕ್ಕೆ ತಂದಿದ್ದಾರೆ. ಇನ್ನೂ ಘಟನೆ ಕುರಿತು ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ತೀವ್ರ ಆಘಾತ ವ್ಯಕ್ತಪಡಿಸಿದ್ದಾರೆ. ಘಟನೆಯ ಸಂಪೂರ್ಣ ತನಿಖೆ ನಡೆಸಿ ವರದಿ ನೀಡುವಂತೆ ಸೂಚಿಸಿದ್ದಾರೆ.

ಪ್ರಧಾನಿ ಮೋದಿ ಘಟನೆ ಬಗ್ಗೆ ವಿಷಾದ ವ್ಯಕ್ತಪಡಿಸಿ, ಪ್ರಧಾನ ಮಂತ್ರಿಗಳ ರಾಷ್ಟ್ರೀಯ ಪರಿಹಾರ ನಿಧಿಯಿಂದ ಮೃತಪಟ್ಟವರ ಕುಟುಂಬಕ್ಕೆ ತಲಾ 2 ಲಕ್ಷ ಹಾಗೂ ಗಾಯಾಳುಗಳಿಗೆ ತಲಾ 50 ಸಾವಿರ ಪರಿಹಾರ ಘೋಷಿಸಿದ್ದಾರೆ.

ಮೈಸೂರು ವಿವಿ; 2026–27ನೇ ಸಾಲಿಗೆ 53.76 ಕೋಟಿ ರೂ. ಕೊರತೆ ಬಜೆಟ್ ಮಂಡನೆ

• ಶಿಕ್ಷಣ ಮಂಡಳಿ ವಿಶೇಷ ಸಭೆಯಲ್ಲಿ ಬಜೆಟ್ ಅನುಮೋದನೆ • ನೌಕರರ ವೇತನಕ್ಕೆ 122.48 ಕೋಟಿ ರೂ., ಪಿಂಚಣಿಗೆ 100 ಕೋಟಿ



ಮೈಸೂರು ವಿವಿಯ ಕ್ರಾಫರ್ಡ್ ಭವನದ ಶಿಕ್ಷಣ ಮಂಡಳಿ ಸಭಾಂಗಣದಲ್ಲಿ ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಅಧ್ಯಕ್ಷತೆಯಲ್ಲಿ ಗುರುವಾರ ಶಿಕ್ಷಣ ಮಂಡಳಿ ವಿಶೇಷ ಸಭೆ ನಡೆಯಿತು. ಇದರಲ್ಲಿ ಪ್ರಸಕ್ತ ಸಾಲಿನ ಬಜೆಟ್ ಮಂಡಿಸಲಾಯಿತು.

ಮೈಸೂರು,ಮಾ.26(ಪಿಎಂ)– ಮೈಸೂರು ವಿಶ್ವವಿದ್ಯಾನಿಲಯದ 2026–27ನೇ ಸಾಲಿಗೆ 53.76 ಕೋಟಿ ರೂ. ಕೊರತೆ ಬಜೆಟ್ ಮಂಡಿಸಿ ಅನುಮೋದನೆ ಪಡೆಯಲಾಯಿತು.

ಮೈಸೂರು ವಿವಿಯ ಕ್ರಾಫರ್ಡ್ ಭವನದ ಶಿಕ್ಷಣ ಮಂಡಳಿ ಸಭಾಂಗಣದಲ್ಲಿ ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಅವರ ಅಧ್ಯಕ್ಷತೆಯಲ್ಲಿ ಗುರುವಾರ ನಡೆದ ಶಿಕ್ಷಣ ಮಂಡಳಿ ವಿಶೇಷ ಸಭೆಯಲ್ಲಿ ವಿವಿಯ ಪ್ರಭಾರ ಹಣಕಾಸು ಅಧಿಕಾರಿ ಪ್ರೊ.ಮಂಜುನಾಥ್ ಅಂದಾಜು ಬಜೆಟ್ ಮಂಡಿಸಿದರು.

2026–27ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ಒಟ್ಟಾರೆ ಆದಾಯವು 384.28 ಕೋಟಿ ರೂ. (ದತ್ತಿ ನಿಧಿ ಹೊರತುಪಡಿಸಿ) ಮತ್ತು ವೆಚ್ಚವು 438.04 ಕೋಟಿ ರೂ. ಎಂದು ಅಂದಾಜಿಸಲಾಗಿದೆ. 2026–27ನೇ ಸಾಲಿನಲ್ಲಿ ವಿವಿಯಿಂದ ನಿವೃತ್ತರಾಗುವ ನೌಕರರ ಪಿಂಚಣಿ ಮತ್ತು ಪಿಂಚಣಿ ಸೌಲಭ್ಯಗಳಿಗಾಗಿ 171.45 ಕೋಟಿ ರೂ. ಕೋರಿ ರಾಜ್ಯ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಆದರೆ ಸರ್ಕಾರವು 100 ಕೋಟಿ ರೂ. ಮಾತ್ರ ಬಿಡುಗಡೆ ಮಾಡಿದೆ. ಇದರಿಂದ ಪಿಂಚಣಿ ಮತ್ತು ಪಿಂಚಣಿ ಸೌಲಭ್ಯಗಳಿಗಾಗಿ 71.45 ಕೋಟಿ ರೂ. ಕೊರತೆ ಎದುರಿಸಬೇಕಾಗಿದೆ ಎಂದು ತಿಳಿಸಿದರು.

ಸರ್ಕಾರ ಕೊಟ್ಟ ಅನುದಾನ ವಿವರ: ರಾಜ್ಯ ಸರ್ಕಾರದಿಂದ ವಿವಿಗೆ 2026–27ನೇ ಸಾಲಿನ ಆಯವ್ಯಯ ಅಂದಾಜುಗಳಲ್ಲಿ ಖಾಯಂ ಸಿಬ್ಬಂದಿಯ ವೇತನ ಮತ್ತು ಪಿಂಚಣಿಗೆ ಒಟ್ಟಾರೆ 222.48 ಕೋಟಿ ರೂ. (222,48,18,000 ರೂ.) ಮಂಜೂರಾಗಿದೆ (ಇದರಲ್ಲಿ ವೇತನಾನುದಾನಕ್ಕೆ 122,48,18,000 ರೂ. ಹಾಗೂ ಪಿಂಚಣಿಗೆ 100 ಕೋಟಿ ರೂ.). 2026–27ನೇ ಸಾಲಿಗೆ ಅಭಿವೃದ್ಧಿ ಅನುದಾನ 10 ಕೋಟಿ ರೂ. ಮತ್ತು ಪ.ಜಾ/ಪ.ವರ್ಗದ ವಿದ್ಯಾರ್ಥಿಗಳಿಗೆ 6 ಕೋಟಿ ಅನುದಾನವನ್ನು ರಾಜ್ಯ ಸರ್ಕಾರದಿಂದ ನಿರೀಕ್ಷಿಸಿ, ಒಟ್ಟಾರೆ 238.57 ಕೋಟಿ ರೂ.ಗಳನ್ನು ಆದಾಯವಾಗಿ ಪರಿಗಣಿಸಲಾಗಿದೆ ಎಂದು ಹೇಳಿದರು.

ಸರ್ಕಾರದ ಅನುದಾನದಲ್ಲಿ ವೆಚ್ಚ: ವಿವಿಯಲ್ಲಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಖಾಯಂ ಉದ್ಯೋಗಿಗಳ (ಬೋಧಕ–200) ಮತ್ತು ಬೋಧಕೇತರ–400) ವೇತನಕ್ಕಾಗಿ 122.48 ಕೋಟಿ ರೂ. ನಿಗದಿಪಡಿಸಿದ್ದು, ಹೆಚ್‌ಆರ್‌ಎಂಎಸ್ ಪೋರ್ಟಲ್ ಮೂಲಕ ನೌಕರರಿಗೆ ನೇರವಾಗಿ ಕೆ–2 ಖಾತೆಯಿಂದ ಜಮಾ ಮಾಡಲಾಗುತ್ತದೆ. ವಿವಿಯಲ್ಲಿ ಪ್ರಸ್ತುತ ಅಂದಾಜು 1,864 ಪಿಂಚಣಿದಾರರು (ಪಿಂಚಣಿ/ಕುಟುಂಬ) ಮಾಸಿಕ ಪಿಂಚಣಿ ಸೌಲಭ್ಯಗಳನ್ನು ಪಡೆಯುತ್ತಿದ್ದಾರೆ. 2026–27ನೇ ಸಾಲಿಗೆ ಪಿಂಚಣಿದಾರರ ಸಂಖ್ಯೆ 1,906 ಏರಿಕೆಯಾಗಲಿದೆ. ಪ್ರಸ್ತುತ ಸಾಲಿನಲ್ಲಿ 42 ಉದ್ಯೋಗಿಗಳು (18 ಬೋಧಕರು ಮತ್ತು 24 ಬೋಧಕೇತರರು) ನಿವೃತ್ತಿ ಹೊಂದಲಿದ್ದಾರೆ. ಈ ಹಿನ್ನೆಲೆಯಲ್ಲಿ 2026–27ನೇ ಸಾಲಿಗೆ ಪಿಂಚಣಿ ಮತ್ತು ಪಿಂಚಣಿ ಸೌಲಭ್ಯಗಳಿಗಾಗಿ 171.45 ಕೋಟಿ ರೂ. ನಿಗದಿಪಡಿಸಲಾಗಿದೆ. ಆದರೆ ರಾಜ್ಯ ಸರ್ಕಾರದಿಂದ 100 ಕೋಟಿ ರೂ. ಮಾತ್ರ ಅನುದಾನ ನೀಡಿದ್ದು, ಇದರಿಂದ ಪಿಂಚಣಿ ಪಾವತಿಗೆ 71.45 ಕೋಟಿ ರೂ. ಕೊರತೆ ಎದುರಿಸಬೇಕಿದೆ ಎಂದರು.

ಆಂತರಿಕ ಆದಾಯ ವಿವರ: 2026–27ನೇ ಸಾಲಿಗೆ ವಿವಿಯ ಆಂತರಿಕ ಸಂಪನ್ಮೂಲಗಳಾದ ಪ್ರವೇಶ, ನೋಂದಣಿ, ಸಂಯೋಜನೆ, ಪರೀಕ್ಷಾ ಚಟುವಟಿಕೆಗಳು, ಇನ್ನಿತರ ಶುಲ್ಕಗಳು, ವಿವಿಯ ವಿವಿಧ ಆಸ್ತಿಗಳಿಂದ ಹಾಗೂ ಇತರೆ ಮೂಲಗಳಿಂದ ಒಟ್ಟಾರೆ 108.75 ಕೋಟಿ ರೂ. ಆಂತರಿಕ ಆದಾಯ ನಿರೀಕ್ಷಿಸಲಾಗಿದೆ ಎಂದು ತಿಳಿಸಿದರು.

ಆದಾಯಕ್ಕೆ ನಿರೀಕ್ಷಿತ ವೆಚ್ಚ ವಿವರ: ವಿವಿಯ ಆಂತರಿಕ ಆದಾಯಗಳಲ್ಲಿ ವೇತನ ಭತ್ಯೆಗಳು, ಸಾಮಾನ್ಯ ಆಡಳಿತ ವೆಚ್ಚಗಳು ಹಾಗೂ ಇನ್ನುಳಿದ ನಿರೀಕ್ಷಿತ ವೆಚ್ಚಗಳನ್ನು ಯೋಜನೇತರ ವೆಚ್ಚಗಳಡಿಯಲ್ಲಿ ಪರಿಗಣಿಸಿ, ಒಟ್ಟು 108.54 ಕೋಟಿ ರೂ. (108,54,95,000)ಗಳಿಗೆ ಆಯವ್ಯಯ ಅಂದಾಜುಗಳನ್ನು ತಯಾರಿಸಲಾಗಿದೆ ಎಂದರು.

ವಿವಿ ಕುಲಸಚಿವರಾದ ಎಂ.ಕೆ.ಸವಿತಾ (ಆಡಳಿತ), ಪ್ರೊ.ಎನ್.ನಾಗರಾಜ (ಮೌಲ್ಯ ಮಾಪನ) ಸೇರಿದಂತೆ ಶಿಕ್ಷಣ ಮಂಡಳಿ ಸದಸ್ಯರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಮೈಸೂರು ವಿವಿಯಲ್ಲಿ ಯಾವುದೇ ಕೋರ್ಸ್ ಮುಚ್ಚಿಲ್ಲ; ಅನಿವಾರ್ಯ ಕಾರಣಕ್ಕೆ ಯುವರಾಜ ಕಾಲೇಜು ಸ್ವಾಯತ್ತತೆ ಹಿಂದಕ್ಕೆ

ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಸಮರ್ಥನೆ

ಮೈಸೂರು,ಮಾ.26(ಪಿಎಂ)– ಮೈಸೂರು ವಿವಿಯಲ್ಲಿ ಯಾವುದೇ ಕೋರ್ಸ್‌ಗಳನ್ನು ಸ್ಥಗಿತಗೊಳಿಸಿಲ್ಲ. ಅದು ಸತ್ಯಕ್ಕೆ ದೂರ. ಯಾವುದೇ ವಿಭಾಗಗಳನ್ನು ಮುಚ್ಚಿಲ್ಲ. ಕೆಲವು ವಿಭಾಗಗಳಿಗೆ ವಿದ್ಯಾರ್ಥಿಗಳ ದಾಖಲಾತಿ ಕಡಿಮೆಯಾಗಿದೆ ಅಷ್ಟೆ ಎಂದು ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ತಿಳಿಸಿದರು.

ಮೈಸೂರು ವಿವಿಯ ಕ್ರಾಫರ್ಡ್ ಭವನದ ಶಿಕ್ಷಣ ಮಂಡಳಿ ಸಭಾಂಗಣದಲ್ಲಿ ಗುರುವಾರ ನಡೆದ ಶಿಕ್ಷಣ ಮಂಡಳಿ ವಿಶೇಷ ಸಭೆಯಲ್ಲಿ ಸದಸ್ಯರೊಬ್ಬರು, ಕೆಲ ಕೋರ್ಸ್‌ಗಳನ್ನು ಮುಚ್ಚಲಾಗುತ್ತಿದೆಯಂತೆ ಎಂದು ಸಭೆಯ ಗಮನ ಸೆಳೆದಾಗ, ಇದಕ್ಕೆ ಪ್ರತಿಕ್ರಿಯಿಸಿದ ಕುಲಪತಿಗಳು ಯಾವುದೇ ಕೋರ್ಸ್ ಮುಚ್ಚುತ್ತಿಲ್ಲ ಎಂದು ಸ್ಪಷ್ಟಪಡಿಸಿದರು. ಆದರೆ ವಿದ್ಯಾರ್ಥಿಗಳ ದಾಖಲಾತಿ ಕಡಿಮೆಯಾದರೆ ನಿಮ್ಮ ವಿಭಾಗ ನಡೆಸುವುದು ಕಷ್ಟವಾಗುತ್ತದೆ ಎಂದು ಸಂಬಂಧಿಸಿದ ಕೆಲ ವಿಭಾಗಗಳ ಮುಖ್ಯಸ್ಥರಿಗೆ ಸೂಚಿಸಲಾಗಿದೆ ಎಂದರು.

ಯುವರಾಜ ಕಾಲೇಜಿಗೆ ಸ್ವಾಯತ್ತತೆ: ಕಾಲೇಜಿನ ಪ್ರಾಂಶುಪಾಲರಾದಿಯಾಗಿ ಅಧ್ಯಾಪಕರ ಮನವಿ ಮೇರೆಗೆ ಯುವರಾಜ ಕಾಲೇಜಿನ ಸ್ವಾಯತ್ತತೆ ಹಿಂಪಡೆಯಲಾಗಿದೆ. ಸೆಂಟರ್ ಆಫ್ ಎಕ್ಸಲೆನ್ಸ್‌ನಡಿ 2017ರಲ್ಲಿ 1 ಕೋಟಿ 6 ಲಕ್ಷ ರೂ. ಅನ್ನು ಯುಜಿಸಿಯಿಂದ ಯುವರಾಜ ಕಾಲೇಜಿಗೆ ನೀಡಿದ್ದು, ಈ ಬಗ್ಗೆ ಲೆಕ್ಕವನ್ನೇ ಕೊಟ್ಟಿಲ್ಲ. ಈ ಸಂಬಂಧ ತನಿಖೆ ವೇಳೆ ಸದರಿ ಕಾಲೇಜಿನ ಅಂದಿನ ಅಧೀಕ್ಷಕರು ಆತ್ಮಹತ್ಯೆ ಮಾಡಿಕೊಂಡರು. ಆ ಕಾಲೇಜಿನಲ್ಲಿ 2020ರಿಂದ ಆಡಿಟ್ ಮಾಡಿಲ್ಲ. ಸ್ವಾಯತ್ತತೆ ಸ್ಟೇಟಸ್ ಅನ್ನು ಪ್ರಾಂಶುಪಾಲರು ನೋಡಿಕೊಳ್ಳಬೇಕು. ಆದರೆ ಅವರು ಅದನ್ನು ಮಾಡುತ್ತಿಲ್ಲ. ನಾನು ಯುವರಾಜ ಕಾಲೇಜಿನ ಸ್ವಾಯತ್ತತೆ ವಿರುದ್ಧವಾಗಿಲ್ಲ. ನಾನು ಸ್ವಾಯತ್ತತೆ ನೀಡಲು ಸಿದ್ಧನಿದ್ದೇನೆ. ಆದರೆ ಹಣಕಾಸು ಶಿಸ್ತು ಇರಬೇಕು ಎಂದು ಕುಲಪತಿಗಳು ಪ್ರತಿಕ್ರಿಯಿಸಿದರು.

ವಿವಿಯ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಕೇಂದ್ರದ ಪ್ರಾಧ್ಯಾಪಕರೂ ಆದ ಶಿಕ್ಷಣ ಮಂಡಳಿ ಸದಸ್ಯ ಪ್ರೊ.ಜೆ.ಸೋಮಶೇಖರ್ ಮಾತನಾಡಿ, ಚುನಾಯಿತ ಜನಪ್ರತಿನಿಧಿಗಳು ಸಭೆಯಲ್ಲಿ ಹಾಜರಿದ್ದರೆ, ವಿವಿಯ ಆರ್ಥಿಕ ಪರಿಸ್ಥಿತಿ ಅವರಿಗೆ ಮನವರಿಕೆಯಾಗುತ್ತಿತ್ತು. ಅಧಿವೇಶನ ನಡೆಯುತ್ತಿದ್ದು, ಆರ್ಥಿಕ ವರ್ಷ ಕೊನೆಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಸಭೆ ನಡೆಸುವುದು ಅನಿವಾರ್ಯ. ಆದರೆ ಮುಂದೆ ಈ ರೀತಿ ಆಗದಂತೆ ನೋಡಿಕೊಳ್ಳಬೇಕು ಎಂದು ಕೋರಿದರು.

ಇದಕ್ಕೆ ಪ್ರತಿಕ್ರಿಯಿಸಿದ ಕುಲಪತಿಗಳು, ರಾಜ್ಯ ಸರ್ಕಾರಕ್ಕೆ ಧನ್ಯವಾದ ಹೇಳಬಯಸುತ್ತೇನೆ. ಏಕೆಂದರೆ ಕಷ್ಟದ ಸಮಯದಲ್ಲಿದ್ದೆವು. ಕಳೆದ ವರ್ಷ 157 ಕೋಟಿ ರೂ ಪಿಂಚಣಿಗೆ ಅಗತ್ಯವಾಗಿತ್ತು. ಸರ್ಕಾರದ ಬಜೆಟ್‌ನಲ್ಲಿ 50 ಕೋಟಿ ಮಾತ್ರ ಘೋಷಣೆ ಮಾಡಿತ್ತು. ಬಳಿಕ ಹೆಚ್ಚುವರಿ 25 ಕೋಟಿ ಸೇರಿದಂತೆ ಸರ್ಕಾರದಿಂದ 75 ಕೋಟಿ ಬಂದಿತು. ಈ ಬಾರಿ 150 ಕೋಟಿ ನೀಡುವಂತೆ ಕೋರಿ ಪ್ರಯತ್ನ ನಡೆಸಿದ್ದೆ. ಇದಕ್ಕೆ ಸ್ಪಂದಿಸಿ 100 ಕೋಟಿ ನೀಡಿದ್ದಾರೆ. ಹಾಗಾಗಿ ಸರ್ಕಾರಕ್ಕೆ ಅಭಿನಂದಿಸುತ್ತೇನೆ. ಶಾಸಕರು, ಪರಿಷತ್ ಸದಸ್ಯರು ಸಭೆಯಲ್ಲಿ ಇರಬೇಕಿತ್ತು ಎಂಬ ತಮ್ಮ ಅಭಿಪ್ರಾಯ ಸೂಕ್ತವಾಗಿದೆ. ಅವರಿಂದ ವಿವಿಗೆ ಸಹಾಯವಾಗಿದೆ. ಬಜೆಟ್ ಅನ್ನು ಮಾರ್ಚ್ ಒಳಗೆ ಮಂಡಿಸಬೇಕಿದೆ. ಹಾಗಾಗಿ ಸಭೆ ಆಯೋಜಿಸಬೇಕಾಯಿತು. ಇ–ಆಡಳಿತಕ್ಕೆ ಹೆಚ್ಚು ಒತ್ತು ನೀಡುತ್ತ ಗಂಭೀರ ಚಿಂತನೆ ಮಾಡಲಾಗುತ್ತಿದೆ. ಈ ಮೂಲಕವೂ ಖರ್ಚು ಕಡಿಮೆ ಮಾಡಬಹುದು ಎಂದರು.

ಸದಸ್ಯರೊಬ್ಬರು ಮಾತನಾಡಿ, ಪಿಂಚಣಿ ಕೊರತೆ ಉಂಟಾಗಿರುವ ಬಗ್ಗೆ ಕೆಲವು ಅಂಶಗಳು ಸ್ಪಷ್ಟವಾಗಬೇಕಿದೆ. ಏಕೆಂದರೆ ಮೈಸೂರು ವಿವಿಯಲ್ಲಿ ಪಿಂಚಣಿಗೆ ಹಣದ ಕೊರತೆ ಎಂದರೆ ಬೇಸರವಾಗುತ್ತದೆ ಎಂದರು.

ಈ ಸಂಬಂಧ ಪ್ರತಿಕ್ರಿಯಿಸಿದ ಕುಲಪತಿಗಳು, ಈ ವಿಚಾರದಲ್ಲಿ ಬೆಂಗಳೂರು ವಿವಿಗೆ ಹೋಲಿಸಿದರೆ ನಮ್ಮಲ್ಲಿ ಆರ್ಥಿಕ ಶಿಸ್ತು ಕಡಿಮೆ ಇದೆ. ಅಲ್ಲಿ ಪ್ರತಿವರ್ಷ ನಿಗದಿತ ಮೊತ್ತವನ್ನು ಪಿಂಚಣಿಗೆ ಮೀಸಲಿಡಲಾಗುತ್ತದೆ. ಆದರೆ ಮೈಸೂರು ವಿವಿಯಲ್ಲಿ ಆ ರೀತಿ ಮಾಡಿಲ್ಲ. 2019ಕ್ಕಿಂತಲೂ ಮುಂಚೆ ಪಿಂಚಣಿಯನ್ನು ಸರ್ಕಾರ ಭರಿಸುತ್ತಿತ್ತು. ಪ್ರತಿವರ್ಷ ಹಣ ಮೀಸಲಿಟ್ಟಿದ್ದರೆ ಸಮಸ್ಯೆ ಆಗುತ್ತಿರಲಿಲ್ಲ. ಈಗ ಆ ರೀತಿಯಲ್ಲಿ ಮಾಡಬೇಕಾಗಿದೆ. ವಿವಿ ಆರ್ಥಿಕವಾಗಿ ಸದೃಢವಾಗಿದ್ದ ಸಮಯದಲ್ಲಿ ಈ ರೀತಿಯಲ್ಲಿ ಹಣ ಮೀಸಲಿಡುವ ಕೆಲಸ ಮಾಡಿಲ್ಲ ಎಂದು ಹೇಳಿದರು.

ಪದವಿ ಪೂರೈಸದ ವಿದ್ಯಾರ್ಥಿಗಳಿಗೆ ಕಡೆ ಅವಕಾಶ: ಮೌಲ್ಯಮಾಪನ ಕುಲಸಚಿವರು ಮಾತನಾಡಿ, 2004ರಿಂದ 2019ರವರೆಗೆ ಬೇರೆ ಬೇರೆ ಕಾರಣಗಳಿಂದ ಪದವಿ ಪೂರೈಸದ ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸುವ ಪ್ರಸ್ತಾಪ ಇದೆ. ಇದನ್ನು ವಿಶೇಷ ಪ್ರಕರಣ ಎಂದು ಪರಿಗಣಿಸಬೇಕಿದೆ. ಬಿಎ, ಬಿಎಸ್‌ಸಿ ಹಾಗೂ ಬಿಕಾಂ ಸೇರಿದಂತೆ ಇನ್ನಿತರೆ ಪದವಿ ವಿದ್ಯಾರ್ಥಿಗಳಿಗೆ ಕಟ್ಟಕಡೆಯ ಅವಕಾಶ ಕಲ್ಪಿಸುವ ಉದ್ದೇಶವಿದೆ ಎಂದರು. ಇದಕ್ಕೆ ಸಭೆ ಅನುಮೋದಿಸಿತು.

ಅಂಕಪಟ್ಟಿ ಹಾರ್ಡ್‌ಕಾಪಿಗೆ ನಿರ್ಬಂಧ: ಅಂಕಪಟ್ಟಿಯ ಹಾರ್ಡ್‌ಕಾಪಿ ಮುದ್ರಿಸಲು ಸರ್ಕಾರದಿಂದ ನಿರ್ಬಂಧ ಇದೆ. ಈ ಬಗ್ಗೆ ವಿದ್ಯಾರ್ಥಿಗಳಿಗೆ ಅರಿವು ಮೂಡಿಸಲು ಕ್ರಮ ವಹಿಸಬೇಕಿದೆ ಎಂದೂ ಸಭೆಯಲ್ಲಿ ನಿರ್ಧರಿಸಲಾಯಿತು. ವಿವಿಧ ಹೊಸ ದತ್ತಿಗಳಿಗೂ ಅನುಮೋದನೆ ನೀಡಲಾಯಿತು. ಅಲ್ಲದೆ, ವಿವಿಯ 2025–26ನೇ ಸಾಲಿನ ಆಯವ್ಯಯ ಅಂದಾಜುಗಳಲ್ಲಿ ಪರಿಷ್ಕರಿಸಿರುವುದನ್ನು ಅನುಮೋದನೆ ಮಾಡಲಾಯಿತು.

ನಿವೇಶನಗಳು ಬೇಕಾಗಿದೆ
ಮೈಸೂರಿನ ಸುತ್ತಮುತ್ತ ಇರುವ ಬಡಾವಣೆಗಳಲ್ಲಿ ನಿವೇಶನಗಳು ಬೇಕಾಗಿದೆ. ಕೂಡಲೇ ಸಂಪರ್ಕಿಸಿ
ಮೊಬೈಲ್ ಸಂಖ್ಯೆ
9449997569

ತಕ್ಷಣ ಬೇಕಾಗಿದ್ದಾರೆ
ಸಂಪು / ಟ್ಯಾಂಕ್ ಕ್ಲೀನಿಂಗ್ ಮತ್ತು ಕ್ಲೀನಿಂಗ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ
ಆಕರ್ಷಕ ಸಂಬಳ ನೀಡಲಾಗುವುದು.
9036362141

ಕಾರ್ ಡ್ರೈವರ್ ಬೇಕಾಗಿದ್ದಾರೆ
ಹೆಬ್ಬಾಳ್‌ನ ಸುತ್ತ ಮುತ್ತಲಿನವರಿಗೆ ಆದ್ಯತೆ, ಮೈಸೂರು
9342593199

ಬಾಡಿಗೆಗೆ
NEW 2 BHK with Attach & Solar 6No ಮನೆಗಳು ಮತ್ತು 1800 sqft Ground floor off or Godown Space near ಗೋಪಾಲಸ್ವಾಮಿ ಶಿಶುವಿಹಾರ, CKC, SDM College & JSS Hospital 6th cross ಬಸವೇಶ್ವರ ರಸ್ತೆ, ನೂರೊಂದು ಗಣಪತಿ ದೇವಸ್ಥಾನ ಹಿಂಭಾಗ
9606063966



5th Year Remembrance
Smt. M.P. VILASA KUMARI
Your presence we miss, your memories we treasure, your moral values we follow and in our hearts you live forever
Deeply mourned by: H.P. Prasad (Husband), Sons, Daughter-in-law, relatives & friends

ಬೇಕಾಗಿದ್ದಾರೆ
ಮೈಸೂರಿನ ಖಾಸಗಿ ಕಂಪನಿಗೆ, Fortuner ಮತ್ತು Automatic ಕಾರು ಓಡಿಸುವ ಡ್ರೈವರ್‌ಗಳು ಬೇಕಾಗಿದ್ದಾರೆ. ಸಂಬಳ: 25,000-30,000 ಮತ್ತು ಟೆಲಿಕಾಲಿಂಗ್ ಕಛೇರಿಯ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ. ಉಳಿದುಕೊಳ್ಳಲು PG ವ್ಯವಸ್ಥೆ ಇರುತ್ತದೆ
9187412584 / 9187312582

ಇಂಪೀರಿಯಲ್ ಸಿಟಿ
ಮೆಗಾ ರೆಸಿಡೆನ್ಷಿಯಲ್ ವಿಲ್ಲಾ ಟೌನ್‌ಶಿಪ್
ಮೈಸೂರು - ಹುಣಸೂರು ಮುಖ್ಯರಸ್ತೆ, ಮೈಸೂರು
ಇಲವಾಲ ಸ್ಯಾಟಲೈಟ್ ಬಸ್ ನಿಲ್ದಾಣದಿಂದ ಕೇವಲ 4 ಕಿಮೀ
MUDA LIMITS
ಕೇವಲ ₹749/ ಪ್ರತಿ ಚದರ ಅಡಿ
ಬುಕಿಂಗ್ ಪ್ರಾರಂಭವಾಗಿದೆ
ಸುಲಭ 4 ಕಂತುಗಳ ಸೌಲಭ್ಯವಿದೆ
30x40 | 30x50 | 40x60 | 50x80
ಅಲ್ಟಿಮೇಟ್ ಎಲ್ಲಾ ಸೌಲಭ್ಯಗಳನ್ನು ಒಳಗೊಳ್ಳುವ ನಿವೇಶನಗಳು
ಹೈಲ್ಯಾಂಡ್ ಪ್ರಾಪರ್ಟೀಸ್ **95133 01854 88840 71010**
ಕಾಳಿದಾಸ ರಸ್ತೆ, ವಿಜಯನಗರ 1ನೇ ಹಂತ, ಮೈಸೂರು

Change of Name
I Sugunakumari Byrakur Reddappa Residing at # 325, 2/4th Main Road, 6th Cross, I block, Ramakrishnanagar, Mysore have changed My name From Suguna B.R. to Sugunakumari Byrakur Reddappa Vide Affidavit Sworn before Notary S. Kamala, Mysuru Dated 26-03-2026
Sd/- Sugunakumari Byrakur Reddappa

ಹಸಿರು ನಮ್ಮ ಉಸಿರು

ಮೈಸೂರು ಮಿತ್ರ 46
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ, ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

CHANGE OF NAME
I, Yeshmik Ponnappa, W/o P. Daljeet Ram residing at C-126, Industrial Layout, Yadavagiri, Mysuru-570020, I state on oath that, my daughter's name is Nilah Daljeet Ram, the same is mentioned in her Aadhar Card & Birth Certificate, but my daughter's name is mentioned Nilah Choudhary in Sukanya Samruddi Yojana Scheme in Post Office BG Account No. 010026986058. I am making this affidavit to submit before post office Metagalli Branch Mysuru, to declare that, to consider my daughter's name as Nilah Daljeet Ram as per her Aadhar card & Birth Certificate, sworn in before Notary S.N. Hemalatha vide affidavit dated : 23.3.2026, Mysore.
Sd/- Yeshmik Ponnappa

ನೇಮಕಾತಿ
ಮೈಸೂರಿನಲ್ಲಿರುವ ರಿಯಲ್ ಎಸ್ಟೇಟ್ ಕಂಪನಿಗೆ ಮಹಿಳಾ ಟೆಲಿಕಾಲರ್ ಅಗತ್ಯವಿದೆ. ಅಭ್ಯರ್ಥಿ ಪದವೀಧರರಾಗಿದ್ದು ಉತ್ತಮ ಸಂವಹನ ಕೌಶಲ್ಯ ಹೊಂದಿರಬೇಕು. ಇಂಗ್ಲಿಷ್ ಮತ್ತು ಕನ್ನಡದಲ್ಲಿ ಪ್ರವೀಣತೆ ಅಗತ್ಯ. ಕೆಲಸದ ಸಮಯ ಬೆಳಗ್ಗೆ 9.30 ರಿಂದ ಸಂಜೆ 6ರವರೆಗೆ.
Email: admin@astorrealty.in
9740702998

ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್
Orchid Travel & Tours
ನಂ 98, 1ನೇ ಮಹಡಿ ಡಿವಿಜಿ ರಸ್ತೆ, ಬಸವನಗುಡಿ, ಬೆಂಗಳೂರು – 560 004.
ಎಲ್ಲಾ ಪ್ರವಾಸಗಳೂ ಮೈಸೂರಿನಿಂದ
ಬ್ಯೂಟಿಫುಲ್ ಬಾಲಿ
Bali (Indonesia Special)
ಕೈಲಾಸ ಮಾನಸ ಸರೋವರ ಯಾತ್ರೆ
14 ದಿನಗಳ ಮಹೋನ್ನತ ಯಾತ್ರೆ
14 Days Kailasa Manasa Sarovar Yathra
For Bookings contact :
98800 79588 / 99000 80793 / 99000 93615

CNM EDUCATIONAL INSTITUTIONS
MAHADEVAPURA & JAYAPURA
WANTED

Teacher's requirement	Qualification
Primary and High School Section (Kannada, English, Mathematics, Social, Science, Hindi	Degree with B.Ed Primary School Section)
Computer Science, Spoken English (Female teachers only)	Master degree with B.Ed (High School Section)
P E (For both High school & Primary Section) (Male teachers only)	C P.Ed & BP.Ed

Address: #No.710, Mahadevapura Judge quarters, Srirampura Village, Mysuru.
Date :27/3/2026 & 28/3/2026, Timings :10:00 AM to 1:00PM
Contact
8150993434, 8147470606

G9 projects Designing your Dreams
Vee2 Developers
POORVA SHELTERS
PHASE - I, II & III
Behind Marvel PU College
PRICE STARTS FROM ₹ 2,299/-SQ.FT
8055-004-400

DC Converted
DTCP Approved
OWN A SITE IN MYSURU @ ₹ 1,00,000/-
(BALANCE THROUGH BANK EMI'S)
BOGADI - GADDIGE ROAD
9845771177 / 9611872198
www.prathamiinfra.com

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ

MAHATHMA GANDHI B.ED COLLEGE
KSRTC Bus Depot, Sathagalli, Mysuru
Academic Year: 2025-2026
ADMISSION FOR B.Ed (Last Few Seats Left)
Contact No:
0821-2513349 • 93438 28203
Office: Mahathma Gandhi Trust, (Inside Geethanjali International Global School) #CA-7, BEML Layout, 2nd Stage, Srirampura, Mysore. Email: mahatmagandhitrust@gmail.com

MASP ಅಕ್ವಾಟಿಕ್ ಕ್ಲಬ್
ಕ್ರೀಡಾಪಟುಗಳನ್ನು ಹೆಮ್ಮೆಯಿಂದ ಈಜುವಂತೆ ಮಾಡಿ

1ನೇ ಬ್ಯಾಚ್	2ನೇ ಬ್ಯಾಚ್	3ನೇ ಬ್ಯಾಚ್
21-03-2026 ರಿಂದ 14-04-2026	15-04-2026 ರಿಂದ 08-05-2026	09-05-2026 ರಿಂದ 02-06-2026

ಸಮಯ ಬೆಳಗ್ಗೆ 6:30 - 7:30 / 7:30 - 8:30 / 8:30 - 9:30 / 9:30 - 10:30
ಮಧ್ಯಾಹ್ನ / ಸಂಜೆ: 3 - 4 / 5 - 6 / 6 - 7 / 7 - 8
ನಮ್ಮ ತರಬೇತಿ ಕಾರ್ಯಕ್ರಮ: ಈಜು ಕಲಿಕೆ / ಉನ್ನತ ಹಂತದ ತರಬೇತಿ / ಪೂರ್ವ-ಸ್ಪರ್ಧಾತ್ಮಕ ಕಾರ್ಯಕ್ರಮ / ರಾಜ್ಯ ಮಟ್ಟದ ತರಬೇತಿ ಮತ್ತು ರಾಷ್ಟ್ರಮಟ್ಟದ ತರಬೇತಿಗಾಗಿ ಸ್ಪರ್ಧಾತ್ಮಕ ಕಾರ್ಯಕ್ರಮ / ನೀರಿನಲ್ಲಿ ತುರ್ತು ಜೀವರಕ್ಷಕ ತರಬೇತಿ / ನಾಲ್ಕರಿಂದ ಹಾಗೂ ಸಾರ್ವಜನಿಕ ಬ್ಯಾಚ್‌ಗಳು ಸಹ ಲಭ್ಯವಿದೆ.
4 ರಿಂದ 80+ ವರ್ಷಗಳಿಗಿಂತ ಮೇಲ್ಪಟ್ಟವರು
ವಿಳಾಸ: ಸಿಲಿಕಾನ್ ಸಿಟಿ ಇಂಟರ್ನ್ಯಾಷನಲ್ ಸ್ಕೂಲ್, ಲಲಿತಾದ್ರಿಪುರ, ಮೈಸೂರು – 570 010
ಸಂಪರ್ಕಿಸಿ: ಕಿಶೋರ್
99004-51894
95913-63100

JSSMAHAVIDYAPEETHA
JSS AYURVEDA MEDICAL COLLEGE
Alanahalli, Lalithadripura Road, Mysuru – 570 028.
Ph: 0821-2548360, Fax: 0821-2548361 Email: college@jsssamch.org
Advt. No. PRO/115/2025-26 Date: 26/03/2026
WALK IN INTERVIEW
A Walk-in-Interview is scheduled on **28th March 2026** between 12.00pm and 1.30pm for the post of **Senior Research Fellow (Ayurveda)** at the above address, for the project funded by CCRAS, New Delhi.
Qualification: BAMS Ayurveda from recognized University.
Salary as per CCRAS norms.
For more details, please visit: **www.jssayurvedacollege.org**
Sd/- PRINCIPAL

ಮೈಸೂರು ಮಿತ್ರ
ವಾರ್ಷಿಕೋತ್ಸವ ವಿಶೇಷ ಸಂಚಿಕೆ
ಓದುಗರ ಹಾಗೂ ಜಾಹೀರಾತುದಾರರ ಸೇವೆಯಲ್ಲಿ "ಮೈಸೂರು ಮಿತ್ರ" ಏಪ್ರಿಲ್ 16, 2026ಕ್ಕೆ 46 ವರ್ಷಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ, 47ನೇ ವರ್ಷಕ್ಕೆ ಕಾಲಿಡುತ್ತಿರುವ ಈ ಶುಭಸಂದರ್ಭದಲ್ಲಿ ವರ್ಣರಂಜಿತ ವಿಶೇಷಾಂಕವನ್ನು ಹೊರತರಲಾಗುತ್ತಿದೆ. ಜಾಹೀರಾತುದಾರರಿಗೆ ಇದೊಂದು ಸುಸಮಯ. ಮುದ್ರಣ ದೃಷ್ಟಿಯಿಂದ ತಮ್ಮ ಜಾಹೀರಾತುಗಳನ್ನು ಏಪ್ರಿಲ್ 10, 2026 ರೊಳಗೆ ನಮಗೆ ತಲುಪುವಂತೆ ಕಳುಹಿಸಬೇಕಾಗಿ ಕಳಕಳಿಯ ಮನವಿ.

ಪ್ರಧಾನ ಕಛೇರಿ
0821-2496522, 2496523, 0821-2496520 (5 ಲೈನುಗಳು)
ಮರಿಯ ಫನಾಂಡಿಸ್, ಜಾಹೀರಾತು ವ್ಯವಸ್ಥಾಪಕರು:
9448525060 / 8073030835
ಜಾಯ್ ಅಂಥೋಣಿ ಡಿಸೋಜಾ: 8951668960, ಪ್ರೇಮ: 9880549879
ಕೆ.ಆರ್. ಸರ್ಕಲ್ ಕಛೇರಿ: 0821-2431774
ದೇವರಾಜ ಅರಸ್ ರಸ್ತೆ ಕಛೇರಿ: 0821-2428695


ಕೊಡಗು ಪ್ರಸಾದ್ ಸೂಜಾ ಆರ್ಕೇಡ್, ಜೂನಿಯರ್ ಕಾಲೇಜು ರಸ್ತೆ, ಮಡಿಕೇರಿ 9731469871	**ಮಂಡ್ಯ** ಕೆ. ಮೋಹನ್‌ರಾಜ್ 8762960325	**ಶ್ರೀರಂಗಪಟ್ಟಣ** ವಿನಯ್ ಕಾರೇಕುರ ಶ್ರೀರಂಗಪಟ್ಟಣ 9686893234
ಹುಣಸೂರು ಕೆ. ಕೃಷ್ಣ (ಕೆ.ಕೆ.) EWS 204, KHB ಕಾಲೋನಿ, ಹುಣಸೂರು. 9448720628	**ಚಾಮರಾಜನಗರ** ಸಿದ್ದಲಿಂಗಸ್ವಾಮಿ 9242266657	**ಟಿ. ನರಸೀಪುರ** ಕುಮಾರ್ 9986719590
ಗುಂಡ್ಲುಪೇಟೆ ಸೋಮಶೇಖರ್ 9845995426	**ಕೆ.ಆರ್. ನಗರ** ಮಂಜುನಾಥ ವಾರ್ಡ್ ನಂ.17, Extn. 9483084345	**ಮಳವಳ್ಳಿ** ಸತ್ಯಪ್ತಿ. ಬಿ ನಂ.47, 1ನೇ ಕ್ರಾಸ್, ಮಳವಳ್ಳಿ ಟೌನ್–571430 9632407806
ಹಾಸನ ಆರ್.ಎನ್.ಸೋಮೇಶ್‌ಗೌಡ 7019311935	**ಕುಶಾಲನಗರ** ರಘು ಮೈಸೂರು ಮಿತ್ರ ಏಜೆಂಟರ್ 9845698401	**ಜಯಪುರ** ಬಿಳಿಗಿರಿ ಜಯಪುರ 9945479288
ಪಿರಿಯಾಪಟ್ಟಣ ವಿರೇಶ್ ಪಿರಿಯಾಪಟ್ಟಣ 8660057128	**ವಿರಾಜಪೇಟೆ** ಮಂಜುನಾಥ ವಿರಾಜಪೇಟೆ 9900949353	**ಯಳಂದೂರು** ಬಿ.ನಾಗರಾಜು ಮೈತ್ರಿ ಮೆಡಿಕಲ್ಸ್, ಬಳೇಪೇಟೆ, ಯಳಂದೂರು 9844349191
ಕೆ.ಆರ್.ಪೇಟೆ (ಶ್ರೀನಿವಾಸ) ಅಗ್ರಹಾರ ಬಾಚಹಳ್ಳಿ, ಕೆ.ಆರ್.ಪೇಟೆ 9449326847, 7022757438	**ಹೆಚ್.ಡಿ.ಕೋಟೆ** ಮಂಜುನಾಥ ಎಸ್. ಹೆಚ್.ಡಿ.ಕೋಟೆ 9483574452	**ಕೆ.ಎಂ.ದೊಡ್ಡಿ** ಸತೀಶ್ ಎ.ಎಲ್ ಕೆ.ಎಂ.ದೊಡ್ಡಿ 9242120338
ಹುಣಸೂರು ರಘು ಹುಣಸೂರು 9845590889	**ನಂಜನಗೂಡು** ರಂಗಸ್ವಾಮಿ ನಂಜನಗೂಡು ಟೌನ್–571301 9901602226	**ಕೊಳ್ಳೇಗಾಲ** ನಾಗೇಂದ್ರ ಸ್ವಾಮಿ ನಂ.7ಎ, 684, 14 ನೇ ಕ್ರಾಸ್, ಬಸವೇಶ್ವರ ನಗರ, ಕೊಳ್ಳೇಗಾಲ 9448576247, 7899849868

SUZUKI
SUZUKI MOTO FEST
Experience the Excellence
CELEBRATE THE FESTIVE SEASON WITH SUZUKI AND GET ASSURED REWARDS
SPECIAL E-ACCESS PRICE BIG SAVINGS ON E-ACCESS
Assured Benefit Voucher on Avenis
Assured Gift on Gixxer Series
SCAN FOR MORE INFO



K.P.R SUZUKI
C-1, New Kantharaja Urs Road, Kuvempunagara, Mysore - 570023. Mob: 96116 86129, 99452 48099
L31/1, Five Light Circle, Lashkar Mohalla, Mysore - 570010. Mob: 95131 11194, 76187 89901
D2, 1538/1794, S No.11, B M Road, Bandigowda Badavane, Mandya - 571401 Mob: 94835 20899, 88842 21818

ನಿವೇಶನಗಳು ಮಾರಾಟಕ್ಕಿವೆ
ಸಾನ್ವಿ ಎನ್‌ಕ್ಲೇವ್
ಸ್ಥಳ ಜಯಪುರ | ರಾಷ್ಟ್ರೀಯ ಹೆದ್ದಾರಿ ಹತ್ತಿರ (ಎಚ್.ಡಿ.ಕೋಟೆ) | ಪೂರ್ವ ಮತ್ತು ಪಶ್ಚಿಮಕ್ಕೆ ಎದುರಾಗಿ 30/40 & 30/50 | STARTS FROM ₹ 2200/sq.ft
RERA REGISTERED: PRM/KA/RERA/1268/378/AG/190125/001254 ಬ್ಯಾಂಕ್ ಸಾಲ ಸೌಲಭ್ಯವಿದೆ



ARKA PROPERTIES Let's Grow Together
APPROVED DTCP
ರೆಡಿ ಟು ರಿಜಿಸ್ಟರ್ 'A' ಖಾತ
Contact: www.arkaproperties.in
9972602543

ಸೈಟು ಬೇಕಾಗಿದೆ
20x30, 30x40, 40x60
1) ಲಾಲ್ ಬಹದ್ದೂರ್‌ಶಾಸ್ತ್ರಿನಗರ
2) ಶಾಂತವೇರಿಗೋಪಾಲಗೌಡ ನಗರ
3) ಲಲಿತಾದ್ರಿ ನಗರ
4) ಸಪ್ತಮಾತೃಕಾ ಲೇಔಟ್‌ಗಳಲ್ಲಿ
ಮಾಲೀಕರು ಸಂಪರ್ಕಿಸಿ
9686714571
9741624588